ಗುರುವಾರ, ಜುಲೈ 25, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 206 | ಪುಟ 14
● www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಸಂಘಕ್ಕೆ ಮತ್ತೆ ಸರ್ಕಾರಿ ಮನ್ನಣೆ?

ಪಿ.ಜಿಗೆ ನುಗ್ಗಿ ಯುವತಿ ಕತ್ತು ಸೀಳಿ ಹತ್ಯೆ 2

ಮಳೆ: ಜಲಾಶಯಗಳು ಭರ್ತಿ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,148 ▼	24,413 ▼	₹73,370 (ಬೆಂಗಳೂರು) ▲	₹87,300 (ಬೆಂಗಳೂರು) ▼	83.71 ▼

ಚರ್ಚೆಗೆ ಸಿಗದ ಅವಕಾಶ • ಉಭಯ ಸದನಗಳಲ್ಲಿ ಗದ್ದಲ • ಸಿದ್ದರಾಮಯ್ಯ ಮೌನಕ್ಕೆ ಶರಣು

ಮುಡಾ: ಅಹೋರಾತ್ರಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಹಗರಣದ ಕುರಿತು ಚರ್ಚೆಗೆ ಅವಕಾಶ ನೀಡದೇ ಇರುವುದನ್ನು ಪ್ರತಿಭಟಿಸಿ ವಿಧಾನಮಂಡಲದ ಉಭಯ ಸದನಗಳಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಬುಧವಾರ ಅಹೋರಾತ್ರಿ ಧರಣಿ ನಡೆಸಿದರು.

ಇತರ ಎಲ್ಲ ಕಲಾಪಗಳನ್ನು ಬದಿಗೊತ್ತಿ ಮುಡಾ ಹಗರಣದ ವಿಷಯವನ್ನು ಚರ್ಚೆಗೆ ಕೈಗೆತ್ತಿಕೊಳ್ಳಬೇಕು ಎಂದು ಉಭಯ ಸದನಗಳಲ್ಲೂ ಆಗ್ರಹಿಸಿದ ಬಿಜೆಪಿ, ನಿಲುವಳಿ ಸೂಚನೆ ಮಂಡಿಸಲು ಮುಂದಾಯಿತು. ವಿಧಾನಸಭೆಯಲ್ಲಿ ಸಭಾಧ್ಯಕ್ಷ ಯು.ಟಿ. ಖಾದರ್ ಮತ್ತು ವಿಧಾನಪರಿಷತ್ತಿನಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರು ಬೇಡಿಕೆಯನ್ನು ತಿರಸ್ಕರಿಸಿದರು. ಇದು ಉಭಯ ಸದನಗಳಲ್ಲಿ ಭಾರಿ ಗದ್ದಲಕ್ಕೆ ಕಾರಣವಾಯಿತು. ಪದೇ ಪದೇ ಕಲಾಪ ಮುಂದೂಡಿಕೆಯಾಯಿತು.

ನಿಲುವಳಿ ಸೂಚನೆಯನ್ನು ತಿರಸ್ಕರಿಸಿದ ಕ್ರಮವನ್ನು ಬಲವಾಗಿ ಸಮರ್ಥಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರೂಲಿಂಗ್ ಕೊಟ್ಟ ಮೇಲೆ ಅದನ್ನು ಪಾಲಿಸಬೇಕು ಎಂದು ವಿಪಕ್ಷ ಸದಸ್ಯರನ್ನು ಉದ್ದೇಶಿಸಿ ಹೇಳಿದರು. ನಿಲುವಳಿ ಸೂಚನೆ ಪ್ರಸ್ತಾವಕ್ಕೆ ಅವಕಾಶ ಕೊಡಿ ಎಂದು ಉಭಯ ಸದನಗಳಲ್ಲೂ ವಿರೋಧ ಪಕ್ಷದ ನಾಯಕರು ಪದೇ ಪದೇ ಮನವಿ ಮಾಡಿದರು. ಇಡೀ ದಿನ ಅದಕ್ಕೆ ಅವಕಾಶವನ್ನೇ ಕೊಡಲಿಲ್ಲ. ಇದನ್ನು ಪ್ರತಿಭಟಿಸಿದ ವಿಪಕ್ಷಗಳ ನಾಯಕರು, ಸಂಜೆಹೊತ್ತಿಗೆ ಅಹೋರಾತ್ರಿ ಧರಣಿ ನಡೆಸುವುದಾಗಿ ಘೋಷಿಸಿದರು. ಸಭಾಧ್ಯಕ್ಷ ಹಾಗೂ ಸಭಾಪತಿ ಪೀಠದ ಎದುರೇ ಧರಣಿ ನಡೆಸಿದರು.

8ನೇ ಪುಟ ನೋಡಿ



ಮುಡಾ ಹಗರಣದ ಕುರಿತು ಚರ್ಚೆಗೆ ಆಗ್ರಹಿಸಿ ವಿಧಾನಸಭೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಅಹೋರಾತ್ರಿ ಧರಣಿಯನ್ನು ಆರಂಭಿಸಿದರು

ಸಿದ್ದರಾಮಯ್ಯ ಪತ್ನಿಗೆ ನೀಡಿದ ಭೂಮಿ ಪರಿಶಿಷ್ಟರಿಗೆ ಸೇರಿದೆ. ಈ ಸಂಬಂಧ ದೂರು ದಾಖಲಾಗಿದೆ. ಮುಖ್ಯಮಂತ್ರಿ ₹62 ಕೋಟಿ ಕೊಡಿ ಎನ್ನುವುದು ನಾಚಿಕೆಗೇಡು
ಆರ್.ಅಶೋಕ, ವಿರೋಧ ಪಕ್ಷದ ನಾಯಕ

ಬಿಜೆಪಿಯವರು ಮಾಡಿರುವ ಅನಾಚಾರಗಳು ಸಾಕಷ್ಟು ಇವೆ. ಸುಳ್ಳು ದಾಖಲೆ ನೀಡಿ ಎಕರೆಗಟ್ಟಲೆ ಜಾಗ ತೆಗೆದುಕೊಂಡಿದ್ದಾರೆ. ಅದನ್ನೂ ಬಯಲು ಮಾಡುತ್ತೇವೆ
ಭೈರತಿ ಸುರೇಶ್, ನಗರಾಭಿವೃದ್ಧಿ ಸಚಿವ

ಜನರ ಸಮಸ್ಯೆಗಳನ್ನು ಚರ್ಚೆ ಮಾಡುವುದು ಬಿಟ್ಟು, 2 ವರ್ಷಗಳ ಹಿಂದಿನ ಪ್ರಕರಣ ಈಗ ಏಕೆ ಚರ್ಚಿಸಲು ಮುಂದಾಗಿದ್ದೀರಿ
ಯು.ಟಿ.ಖಾದರ್, ಸಭಾಧ್ಯಕ್ಷ

19 ವರ್ಷಗಳ ಅಕ್ರಮಗಳ ವಿಚಾರಣೆ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 2006ರಿಂದ 2024ರ ಜುಲೈ 15ರವರೆಗೂ ನಡೆದಿರುವ ಭೂಸ್ವಾಧೀನ, ಬಡಾವಣೆಗಳ ನಿರ್ಮಾಣ, ನಿವೇಶನ ಹಂಚಿಕೆ, ಪರಿಹಾರ ವಿತರಣೆ ಮತ್ತು ಬದಲಿ ನಿವೇಶನಗಳ ಹಂಚಿಕೆ ಕುರಿತು ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ನೇತೃತ್ವದ ಆಯೋಗ ವಿಚಾರಣೆ ನಡೆಸಲಿದೆ.

ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ (ಎರಡು ಅವಧಿ), ಡಿ.ವಿ. ಸದಾನಂದ ಗೌಡ, ಜಗದೀಶ ಶೆಟ್ಟರ್, ಸಿದ್ದರಾಮಯ್ಯ (ಎರಡು ಅವಧಿ) ಮತ್ತು ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಪ್ರಾಧಿಕಾರದಲ್ಲಿ ನಡೆದಿರಬಹುದಾದ ಅವ್ಯವಹಾರಗಳ ಕುರಿತು ವಿಚಾರಣೆ ನಡೆಸಿ, ವರದಿ ಸಲ್ಲಿಸುವ ಜವಾಬ್ದಾರಿಯನ್ನು ಆಯೋಗಕ್ಕೆ ವಹಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಮುಡಾದಿಂದ ಬದಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಬಂದ ಕಾರಣದಿಂದ ವಿಚಾರಣಾ ಆಯೋಗ ನೇಮಿಸಿ ಜುಲೈ 14ರಂದು ಆದೇಶ ಹೊರಡಿಸಲಾಗಿತ್ತು. ಆಯೋಗದ ಕಾರ್ಯವ್ಯಾಪ್ತಿ ಮತ್ತು ಷರತ್ತುಗಳನ್ನು ಸ್ಪಷ್ಟಪಡಿಸಿ ಗೃಹ ಇಲಾಖೆ ಬುಧವಾರ ಅಧಿಸೂಚನೆ ಹೊರಡಿಸಿದೆ.

8ನೇ ಪುಟ ನೋಡಿ

ಆರು ತಿಂಗಳ ಅವಧಿ

ನ್ಯಾಯಮೂರ್ತಿ ಪಿ.ಎನ್. ದೇಸಾಯಿ ನೇತೃತ್ವದ ಆಯೋಗವು ಬೆಂಗಳೂರಿನಲ್ಲೇ ಕೇಂದ್ರ ಸ್ಥಾನ ಹೊಂದಿರಲಿದ್ದು, ಮುಡಾದಲ್ಲೂ ಕಚೇರಿ ತೆರೆಯಲಿದೆ. ಆರು ತಿಂಗಳೊಳಗೆ ವಿಚಾರಣೆಯನ್ನು ಪೂರ್ಣಗೊಳಿಸಿ ವರದಿ ಸಲ್ಲಿಸುವಂತೆ ಆಯೋಗಕ್ಕೆ ಕಾಲಮಿತಿ ವಿಧಿಸಲಾಗಿದೆ.

ಆಯೋಗಕ್ಕೆ ಅಗತ್ಯವಿರುವ ತಾಂತ್ರಿಕ, ಆರ್ಥಿಕ ಮತ್ತು ಭೂಸ್ವಾಧೀನ ಸಲಹೆಗಾರರನ್ನು ಒದಗಿಸುವಂತೆ ನಗರಾಭಿವೃದ್ಧಿ ಇಲಾಖೆಗೆ ಸೂಚಿಸಲಾಗಿದೆ.

ಕೇಂದ್ರ ಬಜೆಟ್: ತಾರತಮ್ಯ– ‘ಇಂಡಿಯಾ’ ಒಕ್ಕೂಟದ ಆರೋಪ

ಸಂಸತ್: ವಿಪಕ್ಷಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಪಕ್ಷಗಳ ಆಡಳಿತವಿರುವ ರಾಜ್ಯಗಳಿಗೆ ಪ್ರಸಕ್ತ ಸಾಲಿನ ಕೇಂದ್ರ ಬಜೆಟ್‌ನಲ್ಲಿ ತಾರತಮ್ಯ ಮಾಡಲಾಗಿದೆ ಎಂದು ದೂರಿ, ‘ಇಂಡಿಯಾ’ ಒಕ್ಕೂಟದ ಸಂಸದರು ಸಂಸತ್‌ನ ಒಳಗೆ ಹಾಗೂ ಹೊರಗೆ ಬುಧವಾರ ಭಾರಿ ಪ್ರತಿಭಟನೆ ನಡೆಸಿದರು.

ಇದೇ ವಿಚಾರವನ್ನು ಮುಂದಿಟ್ಟುಕೊಂಡು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಗಳಿಗೆ ಅಡ್ಡಿಪಡಿಸಿದ ‘ಇಂಡಿಯಾ’ ಸಂಸದರು, ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

‘ಎನ್‌ಡಿಎ ನೇತೃತ್ವದ ಸರ್ಕಾರವು ದೇಶದ ಆರ್ಥಿಕತೆಯನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ವಿಫಲವಾಗಿದೆ ಮತ್ತು ಹಣಕಾಸು ವಿಷಯದಲ್ಲಿ ಜಾಗ-ರೂಕವಾಗಿಲ್ಲ’ ಎಂದು ವಿಪಕ್ಷಗಳು ಟೀಕಿಸಿದವು.

ವಿಪಕ್ಷಗಳ ಆರೋಪಗಳು ‘ಅತಿರೇಕ’ ಎಂದು ಹೇಳುವ ಮೂಲಕ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿರುಗೇಟು ನೀಡಿದರು.

ಆದರೆ, ಈ ವಿಚಾರವಾಗಿ ಮಾತನಾಡಲು ಅವಕಾಶ ಸಿಗದೇ ಇದ್ದಾಗ, ‘ಇಂಡಿಯಾ’ ಸಂಸದರು ಉಭಯ ಸದನಗಳಿಂದ ಹೊರ ನಡೆದರು.

ಸಂಸತ್ ಪ್ರವೇಶಿಸುವ ಮೊದಲೇ ‘ಮಕರ ದ್ವಾರ’ದಲ್ಲಿ ವಿರೋಧ ಪಕ್ಷಗಳು ಭಾರಿ ಪ್ರತಿಭಟನೆ ನಡೆಸಿದವು. ಆ ಮೂಲಕ, ಬಜೆಟ್ ವಿಚಾರವಾಗಿ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಸಿದ್ಧರಾಗಿಯೇ ಬಂದಿದ್ದೇವೆ ಎಂಬ ಸ್ಪಷ್ಟ ಸಂದೇಶ ರವಾನಿಸಿದವು.

‘ಕೇಂದ್ರವು ಹಣದುಬ್ಬರವನ್ನು ಲಘುವಾಗಿ ಪರಿಗಣಿಸಿದೆ ಹಾಗೂ ಕೇವಲ ಎರಡು ರಾಜ್ಯಗಳ ಹಿತಾಸಕ್ತಿಗಳನ್ನು ಪೋಷಿಸುತ್ತಿದೆ. ಇದು ಭಾರತದ ಒಕ್ಕೂಟ ರಚನೆ ಮೇಲಿನ ಆಕ್ರಮಣ’ ಎಂದು ಪ್ರತಿಭಟನಾನಿರತ ಸಂಸದರು ಟೀಕಿಸಿದರು.

11ನೇ ಪುಟ ನೋಡಿ

ಅಧಿಕಾರದ ದಾಹದಿಂದಾಗಿ ಇತರ ರಾಜ್ಯಗಳನ್ನು ನಿರ್ಲಕ್ಷಿಸಲಾಗಿದೆ. ಈ ತಾರತಮ್ಯ ನೀತಿ ಖಂಡಿಸಿ ಹಾಗೂ ಎಲ್ಲ ರಾಜ್ಯಗಳಿಗೆ ಸಮಾನ ನ್ಯಾಯ ಒದಗಿಸಲು ‘ಇಂಡಿಯಾ’ವು ಹೋರಾಟ ಮುಂದುವರಿಸಲಿದೆ
ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ಭಾರತದ ಅರ್ಥ ವ್ಯವಸ್ಥೆ ಎಂಬ ಗಾಡಿಯ ಬ್ರೇಕುಗಳು ಮುರಿದು ಬಿದ್ದಿದ್ದರೂ, ಕೇಂದ್ರ ಸರ್ಕಾರ ಮಾತ್ರ ಜೋರಾಗಿ ಹಾರ್ನ್ ಮಾಡುತ್ತಿದೆ
ಶಶಿ ತರೂರ್, ಕಾಂಗ್ರೆಸ್ ಸಂಸದ

ನಿರ್ಮಲಾ ತಿರುಗೇಟು

ಬಜೆಟ್‌ನಲ್ಲಿ ಬಿಹಾರ ಮತ್ತು ಆಂಧ್ರಪ್ರದೇಶ ಹೊರತುಪಡಿಸಿ ಪ್ರತಿಪಕ್ಷಗಳ ಆಡಳಿತವಿರುವ ರಾಜ್ಯಗಳನ್ನು ನಿರ್ಲಕ್ಷಿಸಲಾಗಿದೆ ಎಂದು ರಾಜ್ಯಸಭೆಯಲ್ಲೂ ವಿಪಕ್ಷಗಳು ಆರೋಪಿಸಿದವು.

ಈ ಆರೋಪಗಳನ್ನು ತಳ್ಳಿ ಹಾಕಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ‘ಕಾಂಗ್ರೆಸ್ ಸೇರಿದಂತೆ ಇತರ ಪಕ್ಷಗಳ ಸರ್ಕಾರಗಳು ಈ ಹಿಂದೆ ಮಂಡಿಸಿದ ಬಜೆಟ್‌ಗಳಲ್ಲಿ ಎಲ್ಲ ರಾಜ್ಯಗಳ ಕುರಿತು ಪ್ರಸ್ತಾಪವೇ ಆಗಿರಲಿಲ್ಲ’ ಎಂದರು.

11ನೇ ಪುಟ ನೋಡಿ

ಉಪಗ್ರಹ ಆಧಾರಿತ ಟೋಲ್

ನವದೆಹಲಿ (ಪಿಟಿಐ): ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಟೋಲ್ ಪ್ಲಾಜಾಗಳ ಬದಲಾಗಿ ಪ್ರಾಯೋಗಿಕವಾಗಿ ಉಪಗ್ರಹ ಆಧಾರಿತ ಟೋಲ್ ವ್ಯವಸ್ಥೆ ಜಾರಿಗೊಳಿಸಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ನಿರ್ಧರಿಸಿದೆ. ಫಾಸ್ಟ್ಯಾಗ್ ವ್ಯವಸ್ಥೆ ಬಳಸಿಕೊಂಡೇ ಜಿಎನ್‌ಎಸ್‌ಎಸ್–ಇಟಿಸಿ ಅನುಷ್ಠಾನಗೊಳ್ಳಲಿದೆ.

10

ನೇಪಾಳದಲ್ಲಿ ವಿಮಾನ ಪತನ: 18 ಸಾವು

ಕಠ್ಮಂಡು: ಇಲ್ಲಿನ ತ್ರಿಭುವನ್ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಪೊಖರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಬೇಕಿದ್ದ ವಿಮಾನವೊಂದು ಬುಧವಾರ ಪತನಗೊಂಡಿದೆ. ವಿಮಾನದಲ್ಲಿದ್ದ 19 ಮಂದಿಯಲ್ಲಿ 18 ಮಂದಿ ಮೃತಪಟ್ಟಿದ್ದಾರೆ. ವಿಮಾನದ ಪೈಲಟ್ ಮಾತ್ರವೇ ಬದುಕುಳಿದಿದ್ದು, ಅವರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ.

10

ಚಿನಕುರುಳಿ

ಪ್ರಕಾಶ್ ಶೆಟ್ಟಿ



ವಿ.ಆರ್ ಬಡಾವಣೆಯ ಭಾರ್ಗವಿ ಪಿ.ಜಿಯಲ್ಲಿ ಭೀಕರ ಘಟನೆ: ಸ್ನೇಹಿತೆಯ ಪ್ರಿಯಕರನಿಂದ ಕೃತ್ಯ ಶಂಕೆ

ಪಿ.ಜಿಗೆ ನುಗ್ಗಿ ಕತ್ತು ಸೀಳಿ ಯುವತಿಯ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ವಿ.ಆರ್.ಬಡಾವಣೆಯ ಭಾರ್ಗವಿ ಮಹಿಳಾ ಪೇಯಿಂಗ್ ಗೆಸ್ಟ್‌ಗೆ (ಪಿ.ಜಿ) ನುಗ್ಗಿದ ವ್ಯಕ್ತಿಯೊಬ್ಬ ಯುವತಿಯೊಬ್ಬರ ಕತ್ತು ಸೀಳಿ ಹತ್ಯೆ ಮಾಡಿ ಪರಾರಿಯಾಗಿದ್ದಾನೆ.

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಬಿಹಾರದ ಕೃತಿ ಕುಮಾರಿ(24) ಅವರನ್ನು ಮಂಗಳವಾರ ರಾತ್ರಿ 11.30ರ ಸುಮಾರಿಗೆ ಕೊಲೆ ಮಾಡಲಾಗಿದೆ.

ಚಾಕು ಹಿಡಿದು ಪಿ.ಜಿಯೊಳಗೆ ನುಗ್ಗಿದ್ದ ಆರೋಪಿ, ಮೂರನೇ ಮಹಡಿಯಲ್ಲಿನ ಕೊಠಡಿ ಸಮೀಪದಲ್ಲೇ ಯುವತಿಯ ಕತ್ತು ಸೀಳಿ ಕೊಲೆ ಮಾಡಿ ಪರಾರಿಯಾಗಿದ್ದಾನೆ. ಕೊಲೆ ಪ್ರಕರಣ ದಾಖಲು ಮಾಡಿಕೊಂಡಿರುವ ಪೊಲೀಸರು, ಆರೋಪಿ ಪತ್ತೆಗೆ ಶೋಧ ಮುಂದುವರೆಸಿದ್ದಾರೆ. ಆರೋಪಿಯ ಸುಳಿವು ಲಭಿಸಿದ್ದು, ಶೀಘ್ರದಲ್ಲೇ ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದರು.

ಸ್ನೇಹಿತೆಯ ಪ್ರಿಯಕರನಿಂದ ಕೃತ್ಯ?: 'ಕೃತಿ ಕುಮಾರಿಯ ಸ್ನೇಹಿತೆಯ ಪ್ರಿಯಕರನೇ ಕೃತ್ಯ ಎಸಗಿ ಪರಾರಿಯಾಗಿದ್ದಾನೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಕೃತಿ ಕುಮಾರಿ

'ಕೃತಿಕುಮಾರಿ ನಾಲ್ಕು ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿದ್ದರು. ನಗರದ ಕಾಲೇಜೊಂದರಲ್ಲಿ ಎಂಬಿಎ ಪದವಿ ಪೂರ್ಯೆಸಿದ್ದ ಅವರು ಕೆಲವು ತಿಂಗಳಿಂದ ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಇದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಮಧ್ಯಪ್ರದೇಶದ ಯುವತಿಯ ಪರಿಚಯವಾಗಿತ್ತು. ಬಳಿಕ, ಇಬ್ಬರೂ ಕೆಲವು ದಿನಗಳ ಹಿಂದಷ್ಟೇ ವಿ.ಆರ್.ಲೇಔಟ್‌ನ ಪಿ.ಜಿಗೆ ಬಂದು ನೆಲೆಸಿದ್ದರು. ಇದೇ ಪಿ.ಜಿಯಿಂದ ಕೆಲಸಕ್ಕೆ ಹೋಗುತ್ತಿದ್ದರು' ಎಂದು ಪೊಲೀಸರು ಹೇಳಿದರು.

> ಪಿ.ಜಿಗಳಲ್ಲಿ ಅಗತ್ಯ ಭದ್ರತೆ ವಹಿಸಲು ಸೂಚಿಸಲಾಗಿತ್ತು. ಈಗ, ಅದರ ಪಾಲನೆ ಆಗಿದೆಯೇ ಎಂದು ಪರಿಶೀಲಿಸಲಾಗುವುದು
> **ರಮಣ್‌ಗುಪ್ತಾ,** ಹೆಚ್ಚುವರಿ ಪೊಲೀಸ್ ಕಮಿಷನರ್, ಪೂರ್ವ ವಿಭಾಗ

'ಸ್ನೇಹಿತೆ ಪ್ರಿಯಕರ ಒಮ್ಮೆ ಪಿ.ಜಿ ಬಳಿಗೆ ಬಂದಿದ್ದ. ಆಗ ಸೆಕ್ಯೂರಿಟಿ ಗಾರ್ಡ್, 'ಇದು ಮಹಿಳಾ ಪಿ.ಜಿ ಪುರುಷರಿಗೆ ಪ್ರವೇಶ ಇಲ್ಲ' ಎಂದು ತಡೆಯೊಡ್ಡಿದ್ದರು. ಆಗ ಆತನ ಪ್ರೇಯಸಿಯೇ, 'ಆತ ಪರಿಚಯಸ್ಥನಾಗಿದ್ದು ಲಗೇಜ್ ಒಳಗಡೆ ಇಟ್ಟು ಹೋಗುತ್ತಾನೆ' ಎಂದು ಮನವಿ ಮಾಡಿಕೊಂಡಿದ್ದರು. ಈ ದೃಶ್ಯಗಳು ಪಿ.ಜಿಯಲ್ಲಿರುವ ಸಿಸಿಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ' ಎಂದು ಪೊಲೀಸರು ಹೇಳಿದರು.

‘ಪಿ.ಜಿಯಲ್ಲಿ ಭದ್ರತಾ ನಿರ್ಲಕ್ಷ್ಯ’

ಸೂಕ್ತ ಭದ್ರತಾ ವ್ಯವಸ್ಥೆಯಿಲ್ಲದ ಕಾರಣ ಆರೋಪಿ ಸುಲಭವಾಗಿ ಕೃತ್ಯ ಎಸಗಿ ಪರಾರಿಯಾಗಿದ್ದಾನೆ. ಪಿಜಿ ಮಾಲೀಕರಿಂದಲೂ ಮಾಹಿತಿ ಪಡೆಯಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಎರಡು ವಿಶೇಷ ತಂಡ ರಚನೆ: ಮಂಗಳವಾರ ರಾತ್ರಿ ಕೃತ್ಯ ನಡೆದ ಮಾಹಿತಿ ತಿಳಿದ ತಕ್ಷಣವೇ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಕೊಲೆಯಾದ ಯುವತಿ ಬಿಹಾರ ರಾಜ್ಯದವರು ಎಂದು ಗೊತ್ತಾಗಿದೆ. ಆರೋಪಿ ತಲೆಮರೆಸಿಕೊಂಡಿದ್ದು, ಪತ್ತೆಗೆ ಪೊಲೀಸರ ಎರಡು ತಂಡ ರಚಿಸಲಾಗಿದೆ ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ ರಮಣ್ ಗುಪ್ತಾ ತಿಳಿಸಿದರು.

'ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ. ಆರೋಪಿ ಬಂಧನ ಬಳಿಕವಷ್ಟೇ ನಿಖರ ಕಾರಣ ತಿಳಿಯಲಿದೆ' ಎಂದು ಅವರು ಹೇಳಿದರು.

ಸ್ನೇಹಿತೆಗೆ ಸಲಹೆ ನೀಡಿದ್ದ ಕೃತಿ: 'ಕೊಲೆ ಮಾಡಿ ಪರಾರಿಯಾಗಿರುವ ಆರೋಪಿ ಹಾಗೂ ಆತನ ಪ್ರೇಯಸಿ ಮದುವೆ ಆಗಲು ನಿರ್ಧರಿಸಿದ್ದರು. ಆರೋಪಿ ನಿರುದ್ಯೋಗಿಯಾಗಿದ್ದು, ಪ್ರೇಯಸಿಯಿಂದಲೇ ಹಣ ಪಡೆಯುತ್ತಿದ್ದ. ಇಬ್ಬರ ಮಧ್ಯೆ ಆಗಾಗ್ಗೆ ಜಗಳ ನಡೆಯುತ್ತಿತ್ತು. ಇದನ್ನು ಕೃತಿ ಕುಮಾರಿ ಅವರು ಗಮನಿಸಿದ್ದರು. ಅಷ್ಟು ವರ್ತನೆ ತೋರುವ ಯುವಕನನ್ನು ಮದುವೆ ಆಗದಂತೆ ಕೃತಿ ಅವರು ಸಲಹೆ ನೀಡಿದ್ದರು. ತಮ್ಮ ಮದುವೆಗೆ ಕೃತಿ ಅಡ್ಡ ಬರುತ್ತಿದ್ದಾರೆ ಎಂದು ಭಾವಿಸಿದ್ದ ಆರೋಪಿ ಕೊಲೆ ಮಾಡಲು ನಿರ್ಧರಿಸಿದ್ದ ಎಂಬುದು ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

ಮಂಗಳವಾರ ರಾತ್ರಿ ಪಾಳಿಯಲ್ಲಿದ್ದ ಮಹಿಳಾ ಸೆಕ್ಯೂರಿಟಿ ಗಾರ್ಡ್, ತಡರಾತ್ರಿ 11ರ ಸುಮಾರಿಗೆ ಊಟಕ್ಕೆಂದು ಪಿ.ಜಿಯ ಎರಡನೇ ಮಹಡಿಯಲ್ಲಿರುವ ಅಡುಗೆ ಕೋಣೆಗೆ ಹೋಗಿದ್ದರು. ಅದೇ ಸಮಯಕ್ಕೆ ಕಾಯುತ್ತಿದ್ದ ಆರೋಪಿ, ಪಿ.ಜಿಗೆ ನುಗ್ಗಿದ್ದಾನೆ. ನಂತರ ಕೃತಿ ಕೊಠಡಿಗೆ ಹೋಗಿ ಏಕಾಏಕಿ ಅಕೆಯ ಕತ್ತು ಕೊಯ್ದು ಹತ್ಯೆ ಮಾಡಿದ್ದಾನೆ. ಕೃತ್ಯ ನಡೆದ ವೇಳೆ ಆರೋಪಿಯ ಪ್ರೇಯಸಿ ಪಿ.ಜಿಯಲ್ಲಿ ಇರಲಿಲ್ಲ. ಮಧ್ಯಪ್ರದೇಶದ ಯುವತಿಯ ಮೊಬೈಲ್ ಸ್ವಿಚ್ ಆಫ್ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಘಟನಾ ಸ್ಥಳಕ್ಕೆ ಪೂರ್ವ ವಿಭಾಗದ ಹೆಚ್ಚುವರಿ ಪೊಲೀಸ್ ಕಮಿಷನರ್ ರಮಣ್ ಗುಪ್ತಾ, ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ಭೇಟಿ ನೀಡಿ ಪರಿಶೀಲಿಸಿದರು.

ಹೆಚ್ಚುತ್ತಿರುವ ಅನಧಿಕೃತ ಪಿ.ಜಿ.ಗಳು

• ಸ್ನೇಹಾ ರಮೇಶ್

ಬೆಂಗಳೂರು: ನಗರದಲ್ಲಿ ಅನಧಿಕೃತ ಪೇಯಿಂಗ್ ಗೆಸ್ಟ್ (ಪಿ.ಜಿ.) ವಸತಿನಿಲಯಗಳಲ್ಲಿರುವ ಸುರಕ್ಷತೆ ಬಗ್ಗೆ ಮತ್ತೆ ಚರ್ಚೆ ಆರಂಭವಾಗಿದೆ. ಕೋರಮಂಗಲದ ಪಿ.ಜಿಗೆ ನುಗ್ಗಿ ಯುವತಿಯೊಬ್ಬರನ್ನು ಹತ್ಯೆ ಮಾಡಿರುವುದು ಇದಕ್ಕೆ ಕಾರಣವಾಗಿದೆ.

ಪಿ.ಜಿಗಳಲ್ಲಿ ಸುರಕ್ಷತೆ ಖಚಿತಪಡಿಸಿ ಕೊಳ್ಳಲು ಪೊಲೀಸರಿಗೆ ಸಾಧ್ಯವಾಗುತ್ತಿಲ್ಲ. ಪರವಾನಗಿ ಮತ್ತು ಸಮರ್ಪಕ ಕ್ರಮಗಳಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಅಕ್ರಮ ಪಿ.ಜಿಗಳು ಸಮಸ್ಯೆಯಾಗಿವೆ. ಅನೇಕ ಪಿ.ಜಿಗಳು ಉದ್ದಿಮೆ ಪರವಾನಗಿ ಪಡೆಯಬೇಕೆಂಬ ನಿಯಮ ಪಾಲಿಸುತ್ತಿಲ್ಲ. ವಿದ್ಯುತ್, ನೀರು ಮತ್ತು ತೆರಿಗೆ ತಪ್ಪಿಸಲು ಅನಧಿಕೃತವಾಗಿ ಪಿ.ಜಿಗಳನ್ನು ನಡೆಸಲಾಗುತ್ತಿದೆ.

ನಗರದಲ್ಲಿ ಈಗ 60ರಷ್ಟು ಪಿ.ಜಿಗಳು ಅನಧಿಕೃತವಾಗಿವೆ. ಇದರಿಂದ ಅಧಿಕೃತವಾಗಿ ಪಿ.ಜಿ. ನಡೆಸುವವರಿಗೂ ಧಕ್ಕೆ ಉಂಟಾಗಿದೆ ಎಂದು ಬೆಂಗಳೂರು ಪಿ.ಜಿ ಮಾಲೀಕರ ಸಂಘದ ಪದಾಧಿಕಾರಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಪಿ.ಜಿಗಳಿಗೆ ಬೇಡಿಕೆ ಇದ್ದು, 3-4 ಕೊಠಡಿಗಳುಳ್ಳ ಮನೆಗಳನ್ನೇ ಪಿ.ಜಿ. ಯಾಗಿ ಪರಿವರ್ತಿಸಿದ್ದಾರೆ. ಒಬ್ಬರೇ ಐದಾರು ಪಿ.ಜಿ.ಗಳನ್ನು ನಿರ್ವಹಿಸುತ್ತಿರುವ ನಿದರ್ಶನಗಳಿವೆ. ಪಿ.ಜಿಯಲ್ಲಿ ವಾಸವಾಗಿರುವವರಲ್ಲದೇ ಹೊರಗಿನಿಂದ ಯಾರು ಬರುತ್ತಾರೆ ಎಂದು ನಿಗಾ ಇಡಲು ಮಾಲೀಕರೇ ಪಿ.ಜಿ. ಆವರಣದಲ್ಲಿ ಇರುವುದಿಲ್ಲ. ಇಂತಹ ಕಾನೂನು ಬಾಹಿರ ಪಿ.ಜಿ.ಗಳಿಂದ ಸುರಕ್ಷತೆಗೆ ಧಕ್ಕೆ ಉಂಟಾಗಿದೆ ಎಂದು ಸಂಘದ ಕಾರ್ಯದರ್ಶಿ ಸುಖಿ ಸಿಯೋಕ ತಿಳಿಸಿದರು.

ಅಕ್ರಮ ಪಿ.ಜಿಗಳು ಜನಸಂಖ್ಯಾ ಸಾಂದ್ರತೆಯನ್ನು ತೀವ್ರವಾಗಿ ಹೆಚ್ಚಿಸುತ್ತಿವೆ. ಇದು ಮೂಲಸೌಕರ್ಯಗಳ ಮೇಲೆ ಪರಿಣಾಮ ಬೀರುತ್ತಿದೆ. ವಾಹನದಟ್ಟಣೆ, ನೀರಿನ ಬಿಕ್ಕಟ್ಟಿಗೆ ಕಾರಣವಾಗುತ್ತಿದೆ. ಒಟ್ಟಾರೆ ಸಮಸ್ಯೆಯೂ ಹೆಚ್ಚುತ್ತಿದೆ ಎಂದು ಅವರು ವಿವರಿಸಿದರು.

'ಪಿ.ಜಿಗಳ ಮೇಲೆ ನಿಗಾ ಇರಿಸಬೇಕಿದೆ. ಪ್ರತಿ ಪಿ.ಜಿಯನ್ನು ನಿರಂತರವಾಗಿ ಪರಿಶೀಲಿಸುವುದು ಅಸಾಧ್ಯ. ದೂರುಗಳು ಬಂದಾಗ ಆರೋಗ್ಯ ನಿರೀಕ್ಷಕರು ಪರಿಶೀಲಿಸುತ್ತಾರೆ' ಎಂದು ಬಿಬಿಎಂಪಿ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಗ್ಯಾಂಗ್ಟಕ್ ನಿಯೋಗ ಭೇಟಿ, ಪರಿಶೀಲನೆ

ಬೆಂಗಳೂರು: ಘನತ್ಯಾಜ್ಯ ನಿರ್ವಹಣೆಗೆ ಅಧ್ಯಯನಕ್ಕಾಗಿ ಸಿಕ್ಕಿಂ ರಾಜ್ಯದ ಗ್ಯಾಂಗ್ಟಕ್ ನಗರಪಾಲಿಕೆ ಮೇಯರ್ ನೇತೃತ್ವದ ನಿಯೋಗ ಬುಧವಾರ ಬಿಎಸ್‌ಡಬ್ಲ್ಯುಎಂಎಲ್ ಮತ್ತು ಬಿಬಿಎಂಪಿಗೆ ಭೇಟಿ ನೀಡಿ, ಪರಿಶೀಲಿಸಿತು.

ಮೇಯರ್ ನೆಲ್ ಬಹದ್ದೂರ್ ಚೆಟ್ರಿ, ಉಪ ಮೇಯರ್ ಶೆರಿಂಗ್ ಪಾಲ್ಡೆನ್ ಭುಟಿಯಾ ನಿಯೋಗದ ನೇತೃತ್ವ ವಹಿಸಿದ್ದರು. ಮಿನಿ ಟ್ರಾನ್ಸ್‌ಫರ್ ಸ್ಟೇಷನ್ಸ್, ತ್ಯಾಜ್ಯ ಸಂಸ್ಕರಣೆ ಸೇರಿದಂತೆ ಘನತ್ಯಾಜ್ಯ ನಿರ್ವಹಣೆ ಮಾಹಿತಿ ಪಡೆದುಕೊಂಡರು.

ನೀರುಗಾಲುವೆ, ಕೆರೆ ಒತ್ತುವರಿ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂದಾಖಲೆಗಳು ಮತ್ತು ಕಂದಾಯ ಇಲಾಖೆಗಳ ಸಮನ್ವಯ ಪಡೆದು ಬಿಬಿಎಂಪಿ ವ್ಯಾಪ್ತಿಯಲ್ಲಿ ಬೃಹತ್ ಮಳೆ ನೀರುಗಾಲುವೆ, ಕೆರೆಗಳ ಒತ್ತುವರಿಗಳನ್ನು ತೆರವುಗೊಳಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಬುಧವಾರ ಸೂಚಿಸಿದರು.

ಒತ್ತುವರಿ ತೆರವು ಕಾರ್ಯಾಚರಣೆ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಅವರು ಸಭೆ ನಡೆಸಿದರು.

ನೀರುಗಾಲುವೆಗಳ ಒತ್ತುವರಿ ಆಗಿರುವ ಸ್ಥಳಗಳನ್ನು ಭೂಮಾಪಕರಿಂದ ಸರ್ವೆ ನಡೆಸಿ ಗುರುತಿಸಬೇಕು. ಒತ್ತುವರಿದಾರರನ್ನು ಗುರುತಿಸಿ ತಹಶೀಲ್ದಾರ್ ಅವರು ವಿಶೇಷ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಬೇಕು. ಈಗಾಗಲೇ ಆದೇಶಿಸಿರುವ ಪ್ರಕರಣಗಳಲ್ಲಿ ಹಂತ ಹಂತವಾಗಿ ಒತ್ತುವರಿ ತೆರವುಗೊಳಿಸಬೇಕು. ಹೈಕೋರ್ಟ್‌ನಲ್ಲಿರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಿಕೊಂಡು ತೆರವು ಕಾರ್ಯಾಚರಣೆ ಮಾಡಬೇಕು ಎಂದು ತಿಳಿಸಿದರು.



ತುಷಾರ್ ಗಿರಿನಾಥ್

ಬಿಬಿಎಂಪಿ ವ್ಯಾಪ್ತಿಯಲ್ಲಿ 202 ಕೆರೆಗಳಿದ್ದು, 183 ಕೆರೆಗಳು ಜೀವಂತ ಇವೆ. ಒಟ್ಟು ಕೆರೆಗಳ ಪೈಕಿ 159 ಕೆರೆಗಳಲ್ಲಿ ಆಗಿರುವ ಒತ್ತುವರಿ ಗುರುತಿಸಲಾಗಿದೆ. ಹೈಕೋರ್ಟ್‌ಗೆ ಸಲ್ಲಿಸಿರುವ ಕ್ರಿಯಾ ಯೋಜನೆಯ ಪ್ರಕಾರ ಕ್ರಮ ವಹಿಸಲು ತಹಶೀಲ್ದಾರರಿಗೆ ಪತ್ರ ಬರೆಯಲಾಗಿದೆ. ಭೂ ದಾಖಲೆಗಳ ಸಹಾಯಕ ನಿರ್ದೇಶಕರು 124 ಕೆರೆಗಳ ಜಮೀನಿನ ಭೂಮಾಪನ ಮಾಡಿ ಗಡಿ ಗುರುತಿಸಿದ್ದಾರೆ. 82 ಕೆರೆಗಳ ನಕ್ಷೆ ನೀಡಲಾಗಿದೆ. ಹೈಕೋರ್ಟ್ ನಿರ್ದೇಶನದಂತೆ ಒತ್ತುವರಿ ತೆರವುಗೊಳಿಸದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ.ದಯಾನಂದ್, ಭೂಮಾಪನ, ಕಂದಾಯ ವ್ಯವಸ್ಥೆ ಹಾಗೂ ಭೂದಾಖಲೆಗಳ ಇಲಾಖೆಯ ಆಯುಕ್ತ ಜೆ. ಮಂಜುನಾಥ್, ವಿಶೇಷ ಆಯುಕ್ತೆ ಪ್ರೀತಿ ಗೆಹಲೋತ್, ವಲಯ ಆಯುಕ್ತರಾದ ವಿನೋತ್ ಪ್ರಿಯಾ, ಸ್ನೇಹಲ್, ರಮ್ಯಾ, ಕರೀಗೌಡ, ರಮೇಶ್, ಶಿವಾನಂದ್ ಕಾಪಶಿ, ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

ಅಂಕಿ ಅಂಶಗಳು

4,316 ಬೃಹತ್ ನೀರುಗಾಲುವೆಯಲ್ಲಿ ಗುರುತಿಸಲಾಗಿರುವ ಹೊಸ ಮತ್ತು ಹಳೇ ಒತ್ತುವರಿಗಳು

2,473 ಇಲ್ಲಿಯವರೆಗೆ ತೆರವುಗೊಳಿಸಲಾಗಿರುವ ಒತ್ತುವರಿಗಳು

1,648 ತೆರವುಗೊಳಿಸಲು ಬಾಕಿ ಉಳಿದಿರುವ ಒತ್ತುವರಿಗಳು

195 ನ್ಯಾಯಾಲಯದಲ್ಲಿರುವ ಒತ್ತುವರಿ ಪ್ರಕರಣಗಳು

889 ಭೂಮಾಪನಾ ಇಲಾಖೆಯಲ್ಲಿರುವ ಪ್ರಕರಣಗಳು

615 ಕಂದಾಯ ಇಲಾಖೆಯಲ್ಲಿರುವ ಪ್ರಕರಣಗಳು

144 ಬಿಬಿಎಂಪಿಯಲ್ಲಿರುವ ಪ್ರಕರಣಗಳು

ಸರ್ಕಾರಿ ನೌಕರರೆಂದು ಪರಿಗಣಿಸಿ ಆಶಾ ಕಾರ್ಯಕರ್ತೆಯರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಶಾ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು, ಅಲ್ಲಿಯವರೆಗೆ ಕಾರ್ಮಿಕರೆಂದು ಗುರುತಿಸಿ, ಎಲ್ಲ ಸೌಲಭ್ಯಗಳನ್ನು ಒದಗಿಸಬೇಕು' ಎಂದು ಆಶಾ ಕಾರ್ಯಕರ್ತೆಯರು ಆಗ್ರಹಿಸಿದ್ದಾರೆ.

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಬುಧವಾರ ಇಲ್ಲಿ ಏರ್ಪಡಿಸಿದ್ದ ಬಿಬಿಎಂಪಿ ಆಶಾ ಕಾರ್ಯಕರ್ತೆಯರ ಪ್ರಥಮ ಜಿಲ್ಲಾ ಸಮ್ಮೇಳನದಲ್ಲಿ ಈ ಒತ್ತಾಯ ಮಾಡಲಾಗಿದೆ.

'ಆಶಾ ಕಾರ್ಯಕರ್ತೆಯರಿಗೆ ಮಾಸಿಕ ₹15 ಸಾವಿರ ವೇತನ ನಿಗದಿಪಡಿಸಬೇಕು. ಆಶಾ ಕಾರ್ಯಕರ್ತೆಯರಿಗೆ ನಗರ ಜೀವನಕ್ಕೆ ತಕ್ಕಂತೆ ಹೆಚ್ಚುವರಿಯಾಗಿ ₹2 ಸಾವಿರ ವೇತನವನ್ನು ಬಿಬಿಎಂಪಿ ಒದಗಿಸಬೇಕು. ಸಾಮಾಜಿಕ ಭದ್ರತೆಯನ್ನು ಖಾತ್ರಿಪಡಿಸಬೇಕು' ಎಂದು ಒತ್ತಾಯಿಸಿದರು.

ಸಂಘದ ರಾಜ್ಯ ಘಟಕದ ಉಪಾಧ್ಯಕ್ಷೆ ಎಂ. ಉಮಾದೇವಿ, 'ಸಮಾಜದ ಆರೋಗ್ಯ ರಕ್ಷಣೆಯಲ್ಲಿ ಆಶಾ ಕಾರ್ಯಕರ್ತೆಯರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ತಾಯಿ–ಮಗುವಿನ ಮರಣ ಪ್ರಮಾಣ ದರ ಇಳಿಕೆಗೆ ಶ್ರಮಿಸುತ್ತಿದ್ದಾರೆ. 10-15 ವರ್ಷಗಳಿಂದ ದುಡಿಯುತ್ತಿದ್ದರೂ, ಸರ್ಕಾರ ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಸಿದ್ಧವಿಲ್ಲ. ಕಾರ್ಮಿಕರೆಂದು ಪರಿಗಣಿಸಲೂ ಮೀನಮೇಷ ಎಣಿಸುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಬಿಬಿಎಂಪಿ ಆಶಾ ಕಾರ್ಯಕರ್ತೆಯರ ಸಂಘದ ಉಪಾಧ್ಯಕ್ಷೆ ರಮಾ ಟಿ.ಸಿ., ಬಿಬಿಎಂಪಿ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷೆ ನಾಗಲಕ್ಷ್ಮಿ ಮಾತನಾಡಿದರು.

ನಾಳೆ ‘ಆಚಾರ್ಯ ದೇವೋ ಭವ’ ಸಂಗೀತ ಕಛೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಡಿತ್ ಬಿಮಲೇಂದು ಮುಖರ್ಜಿ ಅವರ ಜನ್ಮ ಶತಮಾನೋತ್ಸ ಪ್ರಯುಕ್ತ ಕೈಲಾಸ್ ಸಂಗೀತ ಟ್ರಸ್ಟ್ ಇದೇ 26ರಂದು ಸಂಜೆ 6 ಗಂಟೆಗೆ ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ‘ಆಚಾರ್ಯ ದೇವೋ ಭವ’ ಶೀರ್ಷಿಕೆಯಡಿ ಸಂಗೀತ ಕಛೇರಿ ಹಮ್ಮಿಕೊಂಡಿದೆ.

ಬಿಮಲೇಂದು ಮುಖರ್ಜಿ ಅವರು ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಹಾಗೂ ಇತರ ಕ್ಷೇತ್ರಗಳಿಗೆ ನೀಡಿದ ಕೊಡುಗೆಯನ್ನು ಸ್ಮರಿಸುವ ಕಾರ್ಯಕ್ರಮ ಇದಾಗಿದೆ. ಪ್ರಸಿದ್ಧ ಗಾಯಕಿ ಕೌಶಿಕಿ ಚಕ್ರವರ್ತಿ ಹಾಗೂ ಸಿತಾರ್ ವಾದಕಿ ಅನುಪಮಾ ಭಾಗವತ್ ಅವರು ಸಂಗೀತ ಕಛೇರಿ ನಡೆಸಿಕೊಡುವರು. ಕಾರ್ಯಕ್ರಮದ ಪಾಸ್‌ಗಳು ‘ಬುಕ್ ಮೈ ಶೋ’ದಲ್ಲಿ ಲಭ್ಯವಿವೆ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.



ಕೌಶಿಕಿ ಚಕ್ರವರ್ತಿ

ನಗರದಲ್ಲಿ ಇಂದು

‘ಕೃತಕ ಬುದ್ಧಿಮತ್ತೆ (ಎಐ)–ಕಾನೂನು ಮತ್ತು ಮೌಲ್ಯಗಳು ಆ್ಯಡ್ಮೆಲೋರಾ’ ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಎಚ್‌.ಕೆ. ಪಾಟೀಲ, ಚಿದಾನಂದ ರೆಡ್ಡಿ ಎಸ್‌. ಪಾಟೀಲ, ಡೇವಿಸ್ ಪನಡನ್, ಅಧ್ಯಕ್ಷತೆ: ಸೆಬಿ ಪಾಲಮತ್ತ, ಉಪಸ್ಥಿತಿ: ಸಿನಿ ಜಾನ್, ಆಯೋಜನೆ ಮತ್ತು ಸ್ಥಳ: ಕ್ರೈಸ್ಟ್ ಅಕಾಡೆಮಿ ಇನ್‌ಸ್ಟಿಟ್ಯೂಟ್ ಆಫ್ ಲಾ, ಹುಲ್ಲಹಳ್ಳಿ, ಬೆಳಿಗ್ಗೆ 9

ಕನ್ನಡ ಸಂಘದ ಉದ್ಘಾಟನೆ, ಬಹುಮಾನ ವಿತರಣೆ, ಎಲ್‌.ಎಸ್‌. ಶೇಷಗಿರಿರಾವ್ ಶತಮಾನೋತ್ಸವ ಉಪನ್ಯಾಸ: ಅಧ್ಯಕ್ಷತೆ: ಮೇರಿ ಲೂಯಿಸ್ ಸೆಬಾಸ್ಟಿಯನ್, ಸಂಘದ ಉದ್ಘಾಟನೆ: ರಾ.ನಂ. ಚಂದ್ರಶೇಖರ, ಉಪನ್ಯಾಸ: ಎಸ್‌.ಎಲ್‌. ಶ್ರೀನಿವಾಸಮೂರ್ತಿ, ಉಪಸ್ಥಿತಿ: ಭಾರತಿ ಶೇಷಗಿರಿರಾವ್, ಲೀಲಾವತಿ ಎಚ್‌. ಎಸ್‌., ಮಂಜುನಾಥ ಜಿ., ಆಯೋಜನೆ ಮತ್ತು ಸ್ಥಳ: ಜ್ಯೋತಿ ನಿವಾಸ್ ಕಾಲೇಜು ಸ್ವಾಯತ್ತ, ಕೋರಮಂಗಲ, ಬೆಳಿಗ್ಗೆ 10

ಐಸಿಎಲ್‌ಐಎಸ್ ಅಂತರರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ಟಿ.ಡಿ. ಕೆಂಪರಾಜು, ಅಧ್ಯಕ್ಷತೆ: ರಾಜ್ ಸಿಂಗ್, ಅತಿಥಿಗಳು ರವೀಂದ್ರ ಭಂಡಾರಿ, ಎಂ. ಕೃಷ್ಣಮೂರ್ತಿ, ಆಯೋಜನೆ ಮತ್ತು ಸ್ಥಳ: ಜೈನ್ ವಿಶ್ವವಿದ್ಯಾಲಯ, ಜಯನಗರ, 9ನೇ ಬ್ಲಾಕ್, ಬೆಳಿಗ್ಗೆ 10

ರಾಷ್ಟ್ರೀಯ ವಿಜ್ಞಾನ ಸಮ್ಮೇಳನ–2024: ಉದ್ಘಾಟನೆ: ಎ.ಎಸ್‌. ಕಿರಣ್‌ಕುಮಾರ್, ಅತಿಥಿಗಳು: ಎಸ್‌. ಎಂ. ಶಿವಪ್ರಸಾದ್, ಸಿ.ಜಿ. ಬೆಟಸೂರಮಠ, ಅಧ್ಯಕ್ಷತೆ: ಎಚ್‌.ಆರ್‌. ಮಹದೇವಸ್ವಾಮಿ, ಆಯೋಜನೆ: ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿ, ಸ್ಥಳ: ಜೆಎಸ್‌ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಶನ್ ಆವರಣ, ಡಾ. ವಿಷ್ಣುವರ್ಧನ್ ರಸ್ತೆ, ಶ್ರೀನಿವಾಸಪುರ, ಬೆಳಿಗ್ಗೆ 10.30



ಎ.ಎಸ್‌. ಕಿರಣ್

2024–25ನೇ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನೆ, ವಿ.ಎಸ್‌. ಕೃಷ್ಣಯ್ಯರ್ ಅವರ ಸಂಸ್ಮರಣೆ, 2023–24ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಅಭಿನಂದನೆ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ಪ್ರವೀಣ್ ಶೆಟ್ಟಿ, ಬಹುಮಾನ ವಿತರಣೆ: ಗಾಯತ್ರಿ ಚಂದ್ರಮೂರ್ತಿ, ಶಾರದಾ ಶ್ರೀನಿವಾಸ್, ಆಯೋಜನೆ: ವಿನಾಯಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆ, ಶ್ರೀನಿವಾಸನಗರ, 1ನೇ ಮುಖ್ಯರಸ್ತೆ, ಬೆಳಿಗ್ಗೆ 10.30

ಮಲಯಾಳಿ ಭಾಷಿಕರಿಗೆ ಕನ್ನಡ ಕಲಿಕಾ ತರಗತಿಗಳ ಉದ್ಘಾಟನೆ: ಯು.ಟಿ. ಖಾದರ್, ಅತಿಥಿಗಳು: ಶಿವರಾಜ ಎಸ್‌. ತಂಗಡಗಿ, ಸುಧಾಕರನ್ ರಾಮಂತಳ್ಳಿ, ಅಧ್ಯಕ್ಷತೆ: ಪುರುಷೋತ್ತಮ ಬಿಳಿಮಲೆ, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ಕೊಠಡಿ ಸಂಖ್ಯೆ 419, 4ನೇ ಮಹಡಿ, ವಿಕಾಸಸೌಧ, ಮಧ್ಯಾಹ್ನ 1.30

22ನೇ ವರ್ಷದ ಇಷ್ಟಲಿಂಗ ಮಹಾಪೂಜೆ, ಧರ್ಮೋತ್ತೇಜಕ ಸಂಗಮ ಸಮಾವೇಶ: ಸಾನ್ನಿಧ್ಯ: ರಂಭಾಪುರಿ ಪ್ರಸನ್ನ ರೇಣುಕ ವೀರಸೋಮೇಶ್ವರ ಸ್ವಾಮೀಜಿ, ನೇತೃತ್ವ: ರೇಣುಕ ಶಿವಾಚಾರ್ಯ ಸ್ವಾಮೀಜಿ, ಅತಿಥಿಗಳು: ಎಂ.ಬಿ. ಪಾಟೀಲ, ಬಿ.ವೈ. ವಿಜಯೇಂದ್ರ, ಬಿ. ಗೋಪಾಲಯ್ಯ, ಸಿದ್ದೇಶ ನಾಗೇಂದ್ರ, ಮಂಜುಳಾ ವಿಜಯಕುಮಾರ್, ಆಯೋಜನೆ: ಶ್ರೀಮದ್ವೀರಶೈವ ಸದ್ಬೋಧನೆ ಸಂಸ್ಥೆ, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6


‘ಹರಿದಾಸ ಕೃತಿ ಮಾಲಿಕೆ’ ಉಪನ್ಯಾಸ: ಸಂಧ್ಯಾ ಎನ್‌., ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಹರಿದಾಸ ವಾಣಿ: ಗಾಯನ: ರಾಯಚೂರು ಶೇಷಗಿರಿದಾಸ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದಿಗ್ವಿಜಯ ಲಕ್ಷ್ಮಿನರಸಿಂಹಸ್ವಾಮಿ ದೇವಸ್ಥಾನ, ಉತ್ತರಾದಿಮಠ, ನ್ಯಾಷನಲ್ ಕಾಲೇಜಿನ ಎದುರು, ಬಸವನಗುಡಿ, ಸಂಜೆ 6.30

ಗಾಯನ–ವ್ಯಾಖ್ಯಾನ: ವರದೇಂದ್ರ ಗಂಗಾಖೇಡ್, ವೇಣುಗೋಪಾಲಾಚಾರ್ ಅಗ್ನಿಹೋತ್ರಿ, ಹಾರ್ಮೋನಿಯಂ: ತೇಜಸ್ ಕಾಟೋಟಿ, ತಬಲಾ: ಪ್ರಮೋದ್ ಗಬ್ಬೂರ್, ತಾಳ: ವೆಂಕಟೇಶ್ ಪುರೋಹಿತ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಮಂತ್ರಿಮಾಲ ಮೆಟ್ರೊ ನಿಲ್ದಾಣದ ಎದುರು, ಶೇಷಾದ್ರಿಪುರ, ಸಂಜೆ 6.30


ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ನಾಟ್ಯ ಶಂಕರ ನೃತ್ಯ ಶಾಲೆಯ ವಿದ್ಯಾರ್ಥಿಗಳು, ನಿರ್ದೇಶನ: ಮಾಲತೇಶ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, 5ನೇ ಬಡಾವಣೆ, ಸಂಜೆ 7.30

ತಿಂಗಳ ನಾಟಕ ಸಂಭ್ರಮ: ಉದ್ಘಾಟನೆ: ಎಸ್‌.ಜಿ. ಸಿದ್ಧರಾಮಯ್ಯ, ಅತಿಥಿಗಳು: ಕೆ.ವಿ. ಪ್ರಭಾಕರ್, ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ‘ಅಣ್ಣನ ನೆನಪು’ ನಾಟಕ ಪ್ರದರ್ಶನ: ಪ್ರಸ್ತುತಿ: ಪ್ರವರ ಥಿಯೇಟರ್, ರಂಗ ರೂಪ: ಕರಣಂ ಪವನ್ ಪ್ರಸಾದ್, ನಿರ್ದೇಶನ: ಹನು ರಾಮಸಂಜೀವ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಕಲಾಗ್ರಾಮ ಮಲತ್ತಹಳ್ಳಿ, ಸಂಜೆ 6.30



ನಿಧನ ವಾರ್ತೆ

ಆಲೂರು ನಾಗಪ್ಪ



ಬೆಂಗಳೂರು: ಜನಪದ ಗಾಯಕ ಆಲೂರು ನಾಗಪ್ಪ (74) ಅವರು ಮಂಗಳವಾರ ನಿಧನರಾದರು.

ವಯೋಸಹಜ ಅನಾರೋಗ್ಯ ಸಮಸ್ಯೆಯಿಂದ ಕಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ಪತ್ನಿ ಅಲುಮೇಲಮ್ಮ ಮತ್ತು ಪುತ್ರಿಯರಾದ ಜನಪದ ಗಾಯಕಿಯೂ ಆಗಿರುವ ನಿರೂಪಕಿ ದಿವ್ಯಾ ಆಲೂರು, ಶಾರದಾ ಮಠದಲ್ಲಿ ಸನ್ಯಾಸಿನಿ ಆಗಿರುವ ನಳಿನಾ ಆಲೂರು ಇದ್ದಾರೆ.

ಹುಟ್ಟೂರು ಬಿಡದಿ ಪಕ್ಕದ ಶೆಟ್ಟಿಗೌಡನ ದೊಡ್ಡಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಪೊಲೀಸ್ ಇಲಾಖೆಯಲ್ಲಿ 18 ವರ್ಷ ಕಾರ್ಯನಿರ್ವಹಿಸಿದ್ದರು. ಜಾನಪದ ಕ್ಷೇತ್ರದಲ್ಲಿನ ಸೆಳೆತದಿಂದಾಗಿ ಸ್ವಯಂ ನಿವೃತ್ತಿ ಪಡೆದಿದ್ದರು. ಜಾನಪದ ಶೈಲಿಯ ಗೀತೆಗಳನ್ನು ರಚಿಸಿ, ಅವುಗಳನ್ನು ಹಾಡುವ ಮೂಲಕ ಮನೆಮಾತಾಗಿದ್ದರು.

80ರ ದಶಕದಲ್ಲಿ ‘ನಿಂಗವ್ವ ಬೆಂಗಳೂರಿಗೆ ಬಂದು ನೋಡವ್ವ...’ ಹಾಡಿನ ಮೂಲಕ ಜಾನಪದ ಕ್ಷೇತ್ರದಲ್ಲಿ ಹೊಸ ಅಲೆಯನ್ನೇ ಸೃಷ್ಟಿಸಿದ್ದರು. ಕನ್ನಡಪರ ಹೋರಾಟಗಳಲ್ಲೂ ಅವರು ಗುರುತಿಸಿಕೊಂಡಿದ್ದರು.

Instagram ನ 50+ ಟೂಲ್‌ಗಳ ಮೂಲಕ ನಿಮ್ಮ ಹರೆಯದವರು ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರಲು ಸಹಾಯ ಮಾಡಿ.

ನಮ್ಮ ಪ್ಲಾಟ್‌ಫಾರ್ಮ್‌ನಲ್ಲಿ ಹರೆಯದವರನ್ನು ರಕ್ಷಿಸಲು ಸಹಾಯ ಮಾಡಲು, Instagram ನ ಟೂಲ್‌ಗಳಾದ ಸೂಕ್ಷ್ಮ ಕಂಟೆಂಟ್ ನಿಯಂತ್ರಣದಂತದ್ದನ್ನು ಬಳಸಿ, ಅವು ಹರೆಯದವರ ಎಲ್ಲಾ ಖಾತೆಗಳು ಡೀಫಾಲ್ಟ್ ಆಗಿ ಕಡಿಮೆ ಸೂಕ್ಷ್ಮ ಕಂಟೆಂಟ್ ನೋಡುವಂತೆ ಸೆಟ್ ಮಾಡುತ್ತವೆ.

instagram.com/familytools ಇಲ್ಲಿ ನಮ್ಮ 50+ ಟೂಲ್‌ಗಳೊಂದಿಗೆ ಪ್ರಾರಂಭಿಸಿ



ಕೊಕ್ಕೊ ಪಂದ್ಯಾವಳಿ ವೀಕ್ಷಣೆಗೆ ಬಂದಿದ್ದ ವ್ಯಕ್ತಿಯ ಮೇಲೂ ಹಲ್ಲೆ: ನಾಲ್ವರ ಬಂಧನ

ಶಾಲೆಯಲ್ಲಿ ಚಾಕು ಹಿಡಿದು ಹೊಡೆದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯ ಬಿಳಿಶಿವಾಲೆ ಸಮೀಪದ ಸರ್ಕಾರಿ ಶಾಲಾ ಆವರಣದಲ್ಲಿ ನಡೆದ ಪ್ರೌಢಶಾಲೆಗಳ ಕ್ಲಸ್ಟರ್ ಮಟ್ಟದ ಕೊಕ್ಕೊ ಪಂದ್ಯಾವಳಿ ವೇಳೆ ದೊಣ್ಣೆ, ಡ್ಯಾಗರ್, ಚಾಕು ಹಾಗೂ ವಿಕೆಟ್ ಹಿಡಿದು ಬಡಿದಾಡಿಕೊಂಡಿದ್ದು, ಈ ಗಲಾಟೆಯಲ್ಲಿ ವ್ಯಕ್ತಿಯೊಬ್ಬರು ಗಾಯಗೊಂಡಿದ್ದಾರೆ. ಘಟನೆಯಿಂದ ಈ ಭಾಗದ ನಿವಾಸಿಗಳು ಬೆಚ್ಚಿಬಿದ್ದಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಕೊತ್ತನೂರು ಠಾಣೆ ಪೊಲೀಸರು, ಭವಿಷ್(20), ನಿರಂಜನ್(20) ಹಾಗೂ ಇಬ್ಬರು ಬಾಲಕರನ್ನು ಬಂಧಿಸಿದ್ದಾರೆ. ಆರೋಪಿಗಳ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಪರಸ್ಪರ ಡ್ಯಾಗರ್ ಹಾಗೂ ವಿಕೆಟ್ ಹಿಡಿದು ಹೊಡೆದಾಡಿಕೊಂಡ ದೃಶ್ಯವನ್ನು ಸ್ಥಳೀಯರೊಬ್ಬರು ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದರು. ಅದನ್ನು ಅವರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದರು. ವಿಡಿಯೊ ತುಣುಕು ಹರಿದಾಡುತ್ತಿದ್ದಂತೆಯೇ ಹಲವರು ಘಟನೆ ಖಂಡಿಸಿ, ಆರೋಪಿಗಳ ಬಂಧನಕ್ಕೆ ಆಗ್ರಹಿಸಿದ್ದರು. ಅದಾದ ಮೇಲೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ' ಎಂದು ಸ್ಥಳೀಯರು ಹೇಳಿದರು.

ಶಾಲಾ ಆವರಣದಲ್ಲಿ ಮಂಗಳವಾರ ಕ್ಲಸ್ಟರ್ ಮಟ್ಟದ ಕೊಕ್ಕೊ ಪಂದ್ಯಾವಳಿ ಆಯೋಜಿಸಲಾಗಿತ್ತು. ಹಲವು ಶಾಲೆಗಳ ನೂರಾರು ವಿದ್ಯಾರ್ಥಿಗಳು ಹಾಗೂ ಹಲವು ಶಿಕ್ಷಕರು ಪಾಲ್ಗೊಂಡಿದ್ದರು. ಅಲ್ಲದೇ, ಪಂದ್ಯಾವಳಿಯ ವೀಕ್ಷಣೆಗೆ ಸುತ್ತಮುತ್ತಲ ಬಡಾವಣೆಗಳ ಜನರೂ ಸೇರಿದ್ದರು. ಅವರೆಲ್ಲರ ಸಮ್ಮುಖದಲ್ಲೇ ಗಲಾಟೆ ನಡೆದಿದೆ.

ಬುದ್ಧಿಮಾತು ಹೇಳಿದ ವ್ಯಕ್ತಿ ಮೇಲೆಯೂ ಹಲ್ಲೆ: ಪಂದ್ಯಾವಳಿ ವೀಕ್ಷಣೆಗೆ ಬಂದಿದ್ದ ಶಬ್ಬೀರ್ ಎಂಬುವವರು ಗಲಾಟೆ ಬಿಡಿಸಲು ಮುಂದಾಗಿದ್ದರು. ಆದರೆ, ನಶೆಯಲ್ಲಿದ್ದ ಆರೋಪಿಗಳು ಶಬ್ಬೀರ್ ಅವರ ತಲೆಗೆ ಚಾಕುವಿನಿಂದ ಗುದ್ದಿ ಹಲ್ಲೆ ನಡೆಸಿದ್ದಾರೆ. ಅವರ ಮೊಬೈಲ್ ಸಹ ಒಡೆದು ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಠಾಣಾ ವ್ಯಾಪ್ತಿಯ ಬಡಾವಣೆಗಳಲ್ಲಿ ಪೊಲೀಸರು ಗಸ್ತು ತಿರುಗುತ್ತಿಲ್ಲ. ಇದರಿಂದ ಪುಂಡರ ಹಾವಳಿ ಮಿತಿಮೀರಿದೆ. ಈ ಭಾಗದಲ್ಲಿ ಪೊಲೀಸ್ ಗಸ್ತು ಹಾಗೂ ಹೊಯ್ಸಳ ವಾಹನ ಓಡಾಟವನ್ನು ಹೆಚ್ಚಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದರು.



ಡ್ಯಾಗರ್ ಹಿಡಿದು ಆರೋಪಿ ಓಡಾಟ



ವಿಕೆಟ್ ಹಿಡಿದು ಬೆದರಿಸಿದ ಆರೋಪಿ

ಭೀತಿಗೆ ಒಳಗಾದ ವಿದ್ಯಾರ್ಥಿಗಳು

'ಸೊಣ್ಣಪ್ಪನಹಳ್ಳಿ ಹಾಗೂ ಬಿಳಿಶಿವಾಲೆ ಶಾಲೆಗಳ ತಂಡದ ಮಧ್ಯೆ ಕೊಕ್ಕೊ ಪಂದ್ಯ ನಡೆಯುತ್ತಿದ್ದ ವೇಳೆ, ತೀರ್ಪಿನ ವಿಚಾರಕ್ಕೆ ಗಲಾಟೆ ಆರಂಭವಾಗಿದೆ. 'ತೀರ್ಪುಗಾರರು ತಪ್ಪು ತೀರ್ಪು ನೀಡಿದ್ದಾರೆ' ಎಂದು ಸೊಣ್ಣಪ್ಪನಹಳ್ಳಿಯ ವಿದ್ಯಾರ್ಥಿಗಳು ಆರೋಪಿಸಿದರು. ಆ ತಂಡವನ್ನು ಬೆಂಬಲಿಸುತ್ತಿದ್ದವರು ಗಲಾಟೆ ಆರಂಭಿಸಿದರು. ಗಲಾಟೆ ವಿಕೋಪಕ್ಕೆ ಹೋಗುತ್ತಿದ್ದಂತೆಯೇ ನಾಲ್ವರು ಆರೋಪಿಗಳು ದಿಢೀರ್ ಆಗಿ ಡ್ಯಾಗರ್ ಹಾಗೂ ಚಾಕುಗಳನ್ನು ಪ್ರದರ್ಶಿಸುತ್ತಾ ಮೈದಾನದ ಸುತ್ತ ಓಡಾಟ ನಡೆಸಿದರು. ಡ್ಯಾಗರ್ ಹಿಡಿದು ತೀರ್ಪುಗಾರರನ್ನು ಬೆದರಿಸಿದರು. ಸ್ಥಳದಲ್ಲಿದ್ದ ವಿದ್ಯಾರ್ಥಿಗಳು ಕ್ಷಣ ಕಾಲ ಭೀತಿಗೆ ಒಳಗಾದರು. ಆತಂಕಕ್ಕೆ ಒಳಗಾದ ಕೆಲವರು ಕಣ್ಣೀರು ಹಾಕಿದರು' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

'ಆರೋಪಿಗಳು ಮಾದಕವಸ್ತು ಸೇವಿಸಿರಬಹುದು' ಎಂದು ಸ್ಥಳೀಯರು ಶಂಕೆ ವ್ಯಕ್ತಪಡಿಸಿದ್ದಾರೆ.

ಸುದ್ದಿ 2 ನಿಮಿಷ

ಡಿಕೆಶಿ ಭೇಟಿಯಾದ ದರ್ಶನ್ ಪತ್ನಿ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿರುವ ನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು.

ಈ ಕುರಿತು ಪ್ರತಿಕ್ರಿಯಿಸಿರುವ ಶಿವಕುಮಾರ್, 'ನಮ್ಮ ಶಾಲೆಯಲ್ಲಿ ಓದುತ್ತಿದ್ದ ದರ್ಶನ್– ವಿಜಯಲಕ್ಷ್ಮಿ ದಂಪತಿಯ ಪುತ್ರ ಕಾರಣಾಂತರಗಳಿಂದ ಶಾಲೆ ತೊರೆದಿದ್ದರು. ಈಗ ಮತ್ತೆ ಸೇರಿಸಿಕೊಳ್ಳುವಂತೆ ಮನವಿ ಮಾಡಲು ಬಂದಿದ್ದರು. ನಮ್ಮ ಶಾಲೆಯ ಪಕ್ಕದಲ್ಲೇ ವಿಜಯಲಕ್ಷ್ಮಿ ಅವರ ಮನೆಯಿದೆ. ಪ್ರಾಂಶುಪಾಲರನ್ನು ಭೇಟಿ ಮಾಡುವಂತೆ ಅವರಿಗೆ ಹೇಳಿದ್ದೇನೆ' ಎಂದು ತಿಳಿಸಿದರು.

ಹಸ್ತಕ್ಷೇಪ ಮಾಡುವುದಿಲ್ಲ: 'ನಟ ದರ್ಶನ್‌ಗೆ ಅನ್ಯಾಯ ಆಗಿದ್ದರೆ ನ್ಯಾಯ ಕೊಡಿಸಲಾಗುವುದು' ಎಂದು ರಾಮನಗರದಲ್ಲಿ ಮಂಗಳವಾರ ನೀಡಿದ್ದ ಹೇಳಿಕೆ ಬಗ್ಗೆ ಕೇಳಿದಾಗ, 'ಚಾಮುಂಡೇಶ್ವರಿ ಕರಗ ಸಮಾರಂಭದಲ್ಲಿ ನೆರೆದಿದ್ದ ಯುವಕರು ದರ್ಶನ್ ಮೇಲಿನ ಅಭಿಮಾನದಿಂದ ನ್ಯಾಯ ಕೊಡಿಸಿ ಎಂದು ಗಲಾಟೆ ಮಾಡುತ್ತಿದ್ದರು. ಬಾಸ್, ಬಾಸ್ ಎಂದು ಕೂಗುತ್ತಿದ್ದರು. ಯಾರಪ್ಪ ಬಾಸ್ ಎಂದು ನೋಡಿದಾಗ ದರ್ಶನ್ ಫೋಟೊ ಹಿಡಿದುಕೊಂಡಿದ್ದರು. ಆಗ ಅವರ ಸಮಾಧಾನಕ್ಕೆ ನ್ಯಾಯ ಕೊಡಿಸೋಣ ಎಂದು ಹೇಳಿದ್ದೆ' ಎಂದು ಹೇಳಿದರು.

'ರಾಮನಗರದಲ್ಲಿ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿದ್ದಾಗ ವಿಜಯಲಕ್ಷ್ಮಿ ನನ್ನನ್ನು ಭೇಟಿ ಮಾಡಲು ಬಂದಿದ್ದರು. ಮನೆಗೆ ಬಂದು ಭೇಟಿ ಮಾಡುವಂತೆ ಸಮಯಾವಕಾಶ ನೀಡಿದ್ದೆ. ಬಹುಶಃ ದರ್ಶನ್ ಪ್ರಕರಣದ ವಿಚಾರವಾಗಿ ಮಾತನಾಡಲು ಬರುತ್ತಾರೆ ಎಂದು ನಾನು ಭಾವಿಸಿದ್ದೆ' ಎಂದರು.

'ದರ್ಶನ್ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ. ವಿಚಾರಣೆ, ನ್ಯಾಯ ಪ್ರಕ್ರಿಯೆಯಲ್ಲಿ ನಾವು ಯಾವುದೇ ಕಾರಣಕ್ಕೂ ಹಸ್ತಕ್ಷೇಪ ಮಾಡುವುದಿಲ್ಲ' ಎಂದರು.



ಕಿರುತೆರೆ ನಟನ ಬಂಧನ, ಬಿಡುಗಡೆ

ಬೆಂಗಳೂರು: ಪತ್ನಿ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣದಲ್ಲಿ ಕಿರುತೆರೆ ನಟ ಸನ್ನಿ ಮಹಿಪಾಲ್ ಅವರನ್ನು ಎಚ್‌ಎಎಲ್ ಠಾಣೆ ಪೊಲೀಸರು ಬುಧವಾರ ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

'ಸನ್ನಿ ಮಹಿಪಾಲ್ ಮತ್ತು ಯುವತಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರೂ ಪ್ರೀತಿಸಿ ಮದುವೆ ಆಗಿದ್ದರು. ಮನೆಯವರಿಗೆ ಈ ವಿಷಯ ತಿಳಿಸುವವರೆಗೂ ಬೇರೆ ಬೇರೆ ಮನೆಗಳಲ್ಲಿ ಇರಲು ಇಬ್ಬರೂ ನಿರ್ಧರಿಸಿದ್ದರು. ಈ ಮಧ್ಯೆ ಮಹಿಪಾಲ್ ಬೇರೆ ಯುವತಿಯೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡಿದ್ದರು ಎಂಬ ವಿಷಯ ತಿಳಿದು, ಪತ್ನಿ ವಿಜ್ಞಾನನಗರದ ಪತಿಯ ಮನೆಗೆ ಬಂದಿದ್ದರು. ಆಗ ಪತ್ನಿ ಮೇಲೆ ಸನ್ನಿ ಮಹಿಪಾಲ್ ಹಲ್ಲೆ ನಡೆಸಿದ್ದರು' ಎಂದು ಪೊಲೀಸರು ಹೇಳಿದರು.

ಸಂಚಾರ ನಿಯಮ ಉಲ್ಲಂಘನೆ: 1,330 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿರುವ ಸವಾರರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರೆಸಿರುವ ದಕ್ಷಿಣ ವಿಭಾಗದ ಸಂಚಾರ ಪೊಲೀಸರು, ಬುಧವಾರ ಒಂದೇ ದಿನ 1,330 ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.

ಬೆಳಿಗ್ಗೆ 11ರಿಂದ ಸಂಜೆ 4ರ ವರೆಗೆ ಕಾರ್ಯಾಚರಣೆ ನಡೆಸಲಾಯಿತು. ಸವಾರರು ಸಂಚಾರ ನಿಯಮ ಉಲ್ಲಂಘಿಸುತ್ತಿರುವುದನ್ನು ಪತ್ತೆಹಚ್ಚಿ ಅಂತಹವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಇದೇ ವೇಳೆ ವಿವಿಧ ಜಂಕ್ಷನ್‌ಗಳಲ್ಲಿ ಸವಾರರಿಗೆ ಸಂಚಾರ ನಿಮಯಗಳ ಬಗ್ಗೆಯೂ ಅರಿವು ಮೂಡಿಸಲಾಯಿತು ಎಂದು ಸಂಚಾರ ವಿಭಾಗದ ಡಿಸಿಪಿ ಶಿವಪ್ರಕಾಶ್ ದೇವರಾಜು ತಿಳಿಸಿದ್ದಾರೆ.

ಸ್ನೇಹಿತನ ಪತ್ನಿಯ ಚಿಕಿತ್ಸೆಗಾಗಿ ಕಳ್ಳತನ!

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿಗಳು

ಬೆಂಗಳೂರು: ದ್ವಿಚಕ್ರ ವಾಹನಗಳ ಕಳ್ಳತನ ಪ್ರಕರಣದ ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿದ ಗಿರಿನಗರ ಠಾಣೆ ಪೊಲೀಸರಿಗೆ ಮನಕಲಕುವ ವಿಷಯವೊಂದು ಗೊತ್ತಾಗಿದೆ.

'ಕ್ಯಾನ್ಸರ್‌ನಿಂದ ಬಳಲುತ್ತಿದ್ದ ತನ್ನ ಸ್ನೇಹಿತನ ಪತ್ನಿಯ ಚಿಕಿತ್ಸೆಗಾಗಿ ಬೈಕ್ ಕಳ್ಳತನ ಮಾಡುತ್ತಿರುವುದಾಗಿ ಒಬ್ಬ ಆರೋಪಿ ತಪ್ಪೊಪ್ಪಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಹೆಸರಘಟ್ಟದ ನಿವಾಸಿ ಅಶೋಕ್(30) ಮತ್ತು ಆತನ ಸಹಚರ ಸತೀಶ್ ಅಲಿಯಾಸ್ ಸತ್ಯ(34) ಎಂಬುವವರನ್ನು ಪೊಲೀಸರು ಬಂಧಿಸಿದ್ದು, ಅವರಿಂದ ₹10.71 ಲಕ್ಷ ಮೌಲ್ಯದ 8 ದ್ವಿಚಕ್ರ ವಾಹನ ಜಪ್ತಿ ಮಾಡಿಕೊಂಡಿದ್ದಾರೆ. ಠಾಣಾ ವ್ಯಾಪ್ತಿಯಲ್ಲಿ ಇತ್ತೀಚೆಗೆ ಸಾಫ್ಟ್‌ವೇರ್ ಎಂಜಿನಿಯರ್ ಮನೆ ಎದುರು ನಿಲುಗಡೆ ಮಾಡಿದ್ದ ಬೈಕ್ ಕಳ್ಳತನ ಆಗಿತ್ತು. ಅವರು ನೀಡಿದ್ದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು.

'ಆರೋಪಿ ಅಶೋಕ್ ಪತ್ನಿಯಿಂದ ದೂರವಾದ ಮೇಲೆ ಸ್ನೇಹಿತನ ಮನೆಯಲ್ಲಿ ನೆಲೆಸಿದ್ದರು. ಆಗ ಸ್ನೇಹಿತನ ಪತ್ನಿಗೆ ಕ್ಯಾನ್ಸರ್ ಇರುವುದು ಗೊತ್ತಾಗಿತ್ತು. ಆದರೆ, ಆಕೆಯ ಚಿಕಿತ್ಸೆ ವೆಚ್ಚ ಭರಿಸಲು ಸ್ನೇಹಿತನಿಂದ ಸಾಧ್ಯವಾಗುತ್ತಿಲ್ಲ ಎಂಬುದು ತಿಳಿದಿತ್ತು. ಹಣ ಹೊಂದಿಸಲು ಅಶೋಕ್ ಮುಂದಾಗಿದ್ದರು. ಎಲ್ಲಿಯೂ ಸಾಲ ಸಿಕ್ಕಿರಲಿಲ್ಲ. ನಂತರ, ಆರೋಪಿ ತನ್ನ ಸಹಚರ ಸತೀಶ್ ಜತೆ ಸೇರಿ ಕೆಟಿಎಂ ಮತ್ತು ಪಲ್ಸರ್ ಬೈಕ್‌ಗಳ ಹ್ಯಾಂಡಲ್ ಲಾಕ್ ಮುರಿದು ಕಳ್ಳತನ ಮಾಡುತ್ತಿದ್ದರು. ಬಳಿಕ ಅವುಗಳನ್ನು ಗ್ರಾಮಾಂತರ ಭಾಗದಲ್ಲಿ ಕಡಿಮೆ ಮೊತ್ತಕ್ಕೆ ಮಾರಾಟ ಮಾಡುತ್ತಿದ್ದರು. ಅದರಿಂದ ಬಂದ ಹಣವನ್ನು ಚಿಕಿತ್ಸೆಗೆ ಕೊಡಲು ಮುಂದಾಗಿದ್ದರು. ಆರೋಪಿಗಳ ಬಂಧನದಿಂದ ನಗರದ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ 8 ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಲೈಂಗಿಕ ಕಿರುಕುಳ: ಅರ್ಚಕನ ಬಂಧನ

ಬೆಂಗಳೂರು: ದೇವಸ್ಥಾನಕ್ಕೆ ಬಂದಿದ್ದ ಎಂಟು ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದ ಅಡಿ ಅರ್ಚಕರೊಬ್ಬರನ್ನು ಪೋಕ್ಸೊ (ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಕಾಯ್ದೆ ಅಡಿ ವಿದ್ಯಾರಣ್ಯಪುರ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಪ್ರಕಾಶ್ (30) ಬಂಧಿತ ಆರೋಪಿ. 'ಭಾನುವಾರ ಬಾಲಕಿ ದೇವಸ್ಥಾನಕ್ಕೆ ಬಂದಿದ್ದರು. ಆಗ ದೇವಸ್ಥಾನ ಪಕ್ಕದಲ್ಲಿದ್ದ ಕೊಠಡಿಗೆ ಕರೆದೊಯ್ದು ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗಿದೆ ಎಂದು ಆರೋಪಿಸಿ, ಆಕೆಯ ತಾಯಿ ದೂರು ನೀಡಿದ್ದರು. ದೂರನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು. 'ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದು' ಎಂದು ಪೊಲೀಸರು ತಿಳಿಸಿದರು.

ಆಯತಪ್ಪಿ ಬಿದ್ದು ಕಾರ್ಮಿಕ ಸಾವು

ಬೆಂಗಳೂರು: ನಗರದ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ನಿರ್ಮಾಣ ಹಂತದ ಕಟ್ಟಡದಿಂದ ಆಯತಪ್ಪಿ ಬಿದ್ದು ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ.

ತಮಿಳುನಾಡಿನ ಮುನಿರಾಜು (40) ಮೃತಪಟ್ಟ ಕಾರ್ಮಿಕ.

'ಆಸ್ಪತ್ರೆ ಆವರಣದಲ್ಲಿ ಒಂದು ಸಾವಿರ ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯ ಹೊಸ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಮುನಿರಾಜು ಅವರು, ಮಂಗಳವಾರ ಸಂಜೆ ಕಟ್ಟಡದ 11ನೇ ಮಹಡಿಯಲ್ಲಿ ಕೆಲಸ ಮಾಡುತ್ತಿದ್ದರು. ಆಗ ಆಯತಪ್ಪಿ ಮತ್ತೊಂದು ಮಹಡಿಗೆ ಬಿದ್ದರು. ಸ್ಥಳದಲ್ಲಿದ್ದವರು ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ದರು' ಎಂದು ಪೊಲೀಸರು ತಿಳಿಸಿದರು.

ಕಾಮಗಾರಿ ಸಂದರ್ಭದಲ್ಲಿ ನಿರ್ಲಕ್ಷ್ಯ ವಹಿಸಿದ ಆರೋಪದ ಅಡಿ ಗುತ್ತಿಗೆದಾರನ ವಿರುದ್ಧ ಪ್ರಕರಣ ದಾಖಲಾಗಿದೆ.

ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣ ಗ್ಯಾರಂಟಿ ಯೋಜನೆಗಳಿಗೆ ಬಳಕೆಗೆ ವಿರೋಧ

ಎಚ್‌.ಸಿ. ಮಹದೇವಪ್ಪ ಮನೆಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಹಣವನ್ನು ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳಿಗೆ ಬಳಸುವ ಮೂಲಕ ದಲಿತರಿಗೆ ದ್ರೋಹ ಬಗೆಯುತ್ತಿದೆ ಎಂದು ಆರೋಪಿಸಿ ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದ ಪದಾಧಿಕಾರಿಗಳು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಮನೆಗೆ ಬುಧವಾರ ಮುತ್ತಿಗೆ ಹಾಕಿದರು.

ದಲಿತರನ್ನು ಆರ್ಥಿಕವಾಗಿ ಬಲಪಡಿಸುವ ಉದ್ದೇಶದಿಂದ ವಿಶೇಷವಾಗಿ ಮೀಸಲಿರಿಸಿರುವ ಹಣವನ್ನು ಸಾಮಾನ್ಯ ಕಾರ್ಯಕ್ರಮಗಳಿಗೆ ಬಳಸುತ್ತಿರುವುದು ಸರ್ಕಾರದ ನಯವಂಚಕತನಕ್ಕೆ ಸಾಕ್ಷಿಯಾಗಿದೆ. ದಲಿತರ ಮೀಸಲು ಹಣ ದುರುಪಯೋಗವಾಗದಂತೆ ತಡೆಯಲು ಸರ್ಕಾರ ಕೂಡಲೇ ಎಸ್‌ಸಿಎಸ್‌ಪಿ–ಟಿಎಸ್‌ಪಿ ಕಾಯ್ದೆಯ ಸೆಕ್ಷನ್ '7ಸಿ' ರದ್ದುಪಡಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿರುವ ನಿಗಮಗಳಲ್ಲಿ ದಲಿತರ ಮೀಸಲು ಹಣ ಕಾಯಲು ಕಾನೂನು ಬದ್ಧವಾದ ಕಾವಲು ಸಮಿತಿಗಳನ್ನು ರಚನೆ ಮಾಡಬೇಕು. ಹೊರಗುತ್ತಿಗೆ ನೇಮಕಾತಿ ಮೀಸಲಾತಿಗೆ ವಿಧಿಸಿರುವ ಅವೈಜ್ಞಾನಿಕ ನಿಯಮಗಳನ್ನು ರದ್ದುಗೊಳಿಸಬೇಕು' ಎಂದು ಇಂದೂಧರ ಹೊನ್ನಾಪುರ ಆಗ್ರಹಿಸಿದರು.

'ಸಂವಿಧಾನ ವಿರೋಧಿ ಮನಃಸ್ಥಿತಿಗಳನ್ನು ದೂರ ಇಡಲು ಅನಿವಾರ್ಯವಾಗಿ ಕಾಂಗ್ರೆಸ್ ಬೆಂಬಲಿಸಿದ ದಲಿತರೇ ಇಂದು ಪಶ್ಚಾತ್ತಾಪ ಪಡುವಂತಾಗಿದೆ. ಈ ಲೋಪಗಳನ್ನು ಮುಖ್ಯಮಂತ್ರಿ ಸರಿಪಡಿಸಬೇಕು. ಇಲ್ಲದೇ ಇದ್ದಲ್ಲಿ ಹೋರಾಟ ಅನಿವಾರ್ಯವಾಗಲಿದೆ' ಎಂದು ಮಾವಳ್ಳಿ ಶಂಕರ್ ಎಚ್ಚರಿಸಿದರು.

ಪಿಟಿಸಿಎಲ್ ಕಾಯ್ದೆಯಡಿ ನೀಡುವ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಿರುವುದನ್ನು, ಎಸ್‌ಸಿ–ಎಸ್‌ಟಿ ಮಕ್ಕಳ ಮೆರಿಟ್ ಹಣ ಕಡಿತಗೊಳಿಸಿರುವುದನ್ನು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ದಲಿತ ವಿದ್ಯಾರ್ಥಿಗಳು ಸಂಶೋಧನಾ ಮಾಡಲು ಇದ್ದ ಪ್ರಬುದ್ಧ ಯೋಜನೆ ರದ್ದುಗೊಳಿಸಿರುವುದನ್ನು, ಬ್ಯಾಕ್ ಲಾಗ್ ಹುದ್ದೆ ಭರ್ತಿ ಮಾಡದೇ ಇರುವುದನ್ನು ಪ್ರತಿಭಟನಕಾರರು ಖಂಡಿಸಿದರು.

ಸ್ಥಳಕ್ಕೆ ಬಂದ ಎಚ್‌.ಸಿ. ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು. ಹೋರಾಟಗಾರರಾದ ಎನ್. ವೆಂಕಟೇಶ್, ವಿ.ನಾಗರಾಜ್, ಮರಿಯಪ್ಪ ಹಳ್ಳಿ, ಹುಲ್ಕೆರೆ ಮಹದೇವ್, ರಮೇಶ್ ಡಾಕುಳಕಿ, ಗಂಗನಂಜಯ್ಯ, ಬೆಟ್ಟಯ್ಯಕೋಟೆ, ಆಲಗೂಡು ಶಿವಕುಮಾರ್, ಸಿ.ಜಿ. ಗಂಗಪ್ಪ, ಆನಂದ್, ಹಾರೋಹಳ್ಳಿ ರವಿ, ಬಾಲಕೃಷ್ಣ, ಯರಿಯೂರು ರಾಜಣ್ಣ, ಬಿ.ಡಿ. ಶಿವಬುದ್ಧಿ, ನಂಜುಂಡಸ್ವಾಮಿ, ಶಂಭುಲಿಂಗ ಸ್ವಾಮಿ, ನಿಂಗರಾಜು, ಗದಗ್ ವೆಂಕಟೇಶಯ್ಯ, ಮರೆಪ್ಪ ಚಟೇರ್ಕರ್, ನಾಗರತ್ನ, ಜಯಂತಿ, ಜಯಮ್ಮ, ಕೃಷ್ಣಮೂರ್ತಿ ಸೇರಿ ನೂರಾರು ಮಂದಿ ಭಾಗವಹಿಸಿದ್ದರು.



ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣವನ್ನು ಸರ್ಕಾರವು ಗ್ಯಾರಂಟಿ ಯೋಜನೆಗಳಿಗೆ ಬಳಸಬಾರದು ಎಂಬುದೂ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಬುಧವಾರ ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದಿಂದ ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು

2ನೇ ವಿಮಾನ ನಿಲ್ದಾಣ, ಚರ್ಚೆ ಅಗತ್ಯ: ಎಂ.ಬಿ.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನ ಸಮೀಪ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಿಸಲು ಇನ್ನೂ ಸ್ಥಳ ನಿಗದಿಯಾಗಿಲ್ಲ. ಈ ಸಂಬಂಧ ಇನ್ನಷ್ಟು ಸಮಾಲೋಚನೆ ನಡೆಸುವ ಅವಶ್ಯ ಇದೆ' ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸುವ ಸಂಬಂಧ ವಿಮಾನಯಾನ ವಲಯದ ಪ್ರಮುಖರ ಜತೆಗೆ ಬುಧ ವಾರ ಅವರು ಸಭೆ ನಡೆಸಿದರು. 'ಬೆಂಗಳೂರು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಇಲ್ಲಿನ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ದಟ್ಟಣೆ ಎದುರಿಸುತ್ತಿದೆ. ಹೀಗಾಗಿ ಎರಡನೇ ವಿಮಾನ ನಿಲ್ದಾಣ ಬೇಕು ಎನ್ನುವುದ ರಲ್ಲಿ ಯಾವುದೇ ಅನುಮಾನವಿಲ್ಲ' ಎಂದರು.

'ಇದನ್ನು ಹೇಗೆ ಕಾರ್ಯಗತಗೊಳಿಸಬೇಕು ಎಂಬುದರ ಬಗ್ಗೆ ಉದ್ಯಮಿಗಳು ಮತ್ತು ಅಧಿಕಾರಿಗಳು ಸಭೆಯಲ್ಲಿ ಸಲಹೆಗಳನ್ನು ನೀಡಿದ್ದಾರೆ. ಈ ಸಂಬಂಧ ಇನ್ನಷ್ಟು ಚರ್ಚೆಗಳನ್ನು ನಡೆಸಲಾಗುವುದು' ಎಂದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹರಿ ಮರಾರ್, ಉದ್ಯಮಿ ಕ್ಯಾಪ್ಟನ್ ಗೋಪಿನಾಥ್, ಮುಖ್ಯಮಂತ್ರಿಯವರ ಹಾಗೂ ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಎನ್ ಮಂಜುಳಾ, ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ ಸಭೆಯಲ್ಲಿ ಪಾಲ್ಗೊಂಡಿದ್ದರು.

ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಅನ್ಯಾಯ: ಆರೋಪ

ಚೊಂಬು ಹಿಡಿದು ಪ್ರತಿಭಟಿಸಿದ ಎಎಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಬಜೆಟ್‌ನಲ್ಲಿ ರಾಜ್ಯದ ಯಾವುದೇ ಯೋಜನೆಗಳಿಗೆ ಅನುದಾನ ನೀಡಿಲ್ಲವೆಂದು ಆರೋಪಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಚೊಂಬು ಹಿಡಿದು ಪ್ರತಿಭಟನೆ ನಡೆಸಿದರು.

'ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ ಬಜೆಟ್‌ನಲ್ಲಿ ರಾಜ್ಯವನ್ನು ಕಡೆಗಣಿಸಲಾಗಿದೆ. ಕಳಸಾ ಬಂಡೂರಿ, ಮಹದಾಯಿ, ಎತ್ತಿನಹೊಳೆ, ಕೃಷ್ಣಾ ಮೇಲ್ದಂಡೆ ಮತ್ತು ಮೇಕೆದಾಟು ಅಂತಹ ಪ್ರಮುಖ ನೀರಾವರಿ ಯೋಜನೆಗಳಿಗೆ ಒಂದೇ ಒಂದು ಪೈಸೆಯನ್ನೂ ಕೊಟ್ಟಿಲ್ಲ. ರಾಜ್ಯಕ್ಕೆ ಏನು ಸಿಗುತ್ತದೆ ಎಂಬ ಕುತೂಹಲದಲ್ಲಿದ್ದ ಮತದಾರರಿಗೆ ನಿರ್ಮಲಾ ಅವರು ಚೊಂಬು ಕೊಟ್ಟಿದ್ದಾರೆ' ಎಂದು ಎಎಪಿ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ದೂರಿದರು.

'ನಮ್ಮ ಮೆಟ್ರೊ, ರೈಲ್ವೆ ಯೋಜನೆಗಳಿಗೂ ಅನುದಾನ ನೀಡಿಲ್ಲ. ಬೆಂಗಳೂರು ಉಪನಗರ ರೈಲು ಯೋಜನೆಗೆ ಮಾತ್ರ ₹350 ಕೋಟಿ ನೀಡಿದ್ದಾರೆ. ಬಜೆಟ್‌ನಲ್ಲಿ ಬಿಹಾರ ಮತ್ತು ಆಂಧ್ರ ಪ್ರದೇಶಕ್ಕೆ ಹೆಚ್ಚು ಅನುದಾನ ನೀಡಲಾಗಿದೆ. ರಾಜ್ಯದಿಂದ ಆಯ್ಕೆಯಾಗಿರುವ 19 ಮಂದಿ ಎನ್‌ಡಿಎ ಸಂಸದರು ನಾಲಾಯಕ್‌ಗಳಾಗಿದ್ದಾರೆ. ಅವರಿಗೆ ₹1 ತರಲೂ ಆಗಿಲ್ಲ' ಎಂದರು.



ಚೊಂಬು ತಲೆಯ ಮೇಲೆ ಇಟ್ಟುಕೊಂಡು ಎಎಪಿ ಕಾರ್ಯಕರ್ತೆ ಆಕ್ರೋಶ ವ್ಯಕ್ತಪಡಿಸಿದರು
—ಪ್ರಜಾವಾಣಿ ಚಿತ್ರ

ಯುವ ಕಾಂಗ್ರೆಸ್ ಪ್ರತಿಭಟನೆ

ಬೆಂಗಳೂರು: 'ಕೇಂದ್ರ ಸರ್ಕಾರ ಮಂಡಿಸಿದ ಬಜೆಟ್‌ನಲ್ಲಿ ಕರ್ನಾಟಕಕ್ಕೆ ತಾರತಮ್ಯ ಮಾಡಲಾಗಿದೆ. ರಾಜ್ಯದ ಬಿಜೆಪಿಯ ಸಂಸದರು ನ್ಯಾಯ ದೊರಕಿಸುವಲ್ಲಿ ವಿಫಲರಾಗಿದ್ದಾರೆ' ಎಂದು ರಾಜ್ಯ ಯುವ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಚ್.ಎಸ್. ಮಂಜುನಾಥ ಗೌಡ ವಾಗ್ದಾಳಿ ನಡೆಸಿದರು.

ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ದ್ರೋಹ ಬಗೆಯಲಾಗಿದೆ ಎಂದು ಆರೋಪಿಸಿ ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದ ಮುಂಭಾಗದಲ್ಲಿ ಯುವ ಕಾಂಗ್ರೆಸ್ ವತಿಯಿಂದ ಬುಧವಾರ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

'ರಾಜ್ಯಕ್ಕೆ ಉಪಯೋಗ ಆಗುವಂತಹ ಒಂದೇ ಒಂದು ಯೋಜನೆ ಬಜೆಟ್‌ನಲ್ಲಿ ಇಲ್ಲ. ರಾಜ್ಯಕ್ಕೆ ಯಾವುದೇ ಕೊಡುಗೆ ನೀಡದ ಮೊದಲ ಬಜೆಟ್ ಇದು' ಎಂದೂ ಹೇಳಿದರು.

'ಕರ್ನಾಟಕಕ್ಕೆ ಮೋದಿ ಚೊಂಬು' ಎಂಬ ಭಿತ್ತಿಪತ್ರಗಳನ್ನು ಪ್ರದರ್ಶಿಸಿದ ಪ್ರತಿಭಟನಕಾರರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ವಿಪಕ್ಷ ನಾಯಕರಾಗಿ ಛಲವಾದಿ: ಘೋಷಣೆ

ಬೆಂಗಳೂರು: ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಛಲವಾದಿ ನಾರಾಯಸ್ವಾಮಿ ಅಧಿಕೃತವಾಗಿ ಕಾರ್ಯಾರಂಭ ಮಾಡಿದ್ದಾರೆ.

ಸಭಾಪತಿ ಬಸವರಾಜ ಹೊರಟ್ಟಿ ಅವರು, ಪರಿಷತ್ತಿನಲ್ಲಿ ಬುಧವಾರ ಈ ಪ್ರಕಟಣೆ ಮಾಡಿದರು. 'ಹೋರಾಟದ ಹಾದಿಯಿಂದ ಜವಾಬ್ದಾರಿಯುತ ಸ್ಥಾನಕ್ಕೆ ಬಂದಿದ್ದೀರಿ. ಇನ್ನು ಜವಾಬ್ದಾರಿಯುತವಾಗಿ ಮಾತಾಡಬೇಕು' ಎಂದು ಹೊರಟ್ಟಿ ಸಲಹೆ ನೀಡಿದರು.

ಸಿಇಟಿ ಪಠ್ಯೇತರ ಪ್ರಶ್ನೆ: ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ ಏಪ್ರಿಲ್‌ನಲ್ಲಿ ನಡೆದ ಕರ್ನಾಟಕ ಸಿಇಟಿ ಪರೀಕ್ಷೆಗಳಲ್ಲಿ ಪಠ್ಯೇತರ ಪ್ರಶ್ನೆಗಳನ್ನು ಕೇಳಲಾಗಿದೆ' ಎಂಬ ಆರೋಪಗಳನ್ನು ಪರಿಶೀಲಿಸಲು ಸಮಿತಿ ರಚಿಸುವ ನಿರ್ಧಾರದ ಸಿಂಧುತ್ವ ಪರಿಶೀಲನೆ ಕೋರಿಕೆಯನ್ನು ಮಾನ್ಯ ಮಾಡಲು ನಿರಾಕರಿಸಿ ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶ ಪ್ರಶ್ನಿಸಲಾದ ಮೇಲ್ಮನವಿಯನ್ನು ಹೈಕೋರ್ಟ್ ವಿಭಾಗೀಯ ಪೀಠ ವಜಾಗೊಳಿಸಿದೆ.

ದಾಸರಹಳ್ಳಿಯ ಯು. ತನ್ಮಯ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ನೇತೃತ್ವದ ಪೀಠ ಬುಧವಾರ ವಿಚಾರಣೆ ನಡೆಸಿತು. ಈ ಮೊದಲು ರಿಟ್ ಅರ್ಜಿಯ ವಿಚಾರಣೆ ಏಕಸದಸ್ಯ ಪೀಠ, 'ಪ್ರಸಕ್ತ ಸಾಲಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನ ನೀಡುವುದು ಪ್ರಾಯೋಗಿಕ ಎನಿಸುವುದಿಲ್ಲ' ಎಂಬ ಅಭಿಪ್ರಾಯದೊಂದಿಗೆ ಅರ್ಜಿದಾರರ ಮನವಿ ಮಾನ್ಯ ಮಾಡಲು ನಿರಾಕರಿಸಿತ್ತು.

211 ಒತ್ತುವರಿದಾರರು

ಪ್ರಕರಣ ತೆರವಿಗೆ ಪ್ರಯತ್ನ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಗಳರಪಟೆಯಲ್ಲಿರುವ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿರುವ ಆಸ್ತಿಯಲ್ಲಿ 211 ಒತ್ತುವರಿದಾರರನ್ನು ಗುರುತಿಸಲಾಗಿದ್ದು, ಪ್ರಕರಣ ನ್ಯಾಯಾಲಯದಲ್ಲಿದೆ. ಇದನ್ನು ತೆರವುಗೊಳಿಸಿ, ಆಸ್ತಿಯನ್ನು ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಲಾಗುವುದು ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಭರವಸೆ ನೀಡಿದರು.

ಧರ್ಮರಾಯಸ್ವಾಮಿ ದೇವಳ



ಸಾಂದರ್ಭಿಕ ಚಿತ್ರ

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಎನ್‌. ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸರ್ವೆ ನಂ. 79ರಲ್ಲಿ 15 ಎಕರೆ 12 ಗುಂಟೆ ಜಾಗವಿದೆ. 1989ರಲ್ಲಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲಾಗಿದ್ದು, 1990ರ ತೀರ್ಪಿನಂತೆ, 1992ರಲ್ಲಿ ಉತ್ತರ ತಾಲ್ಲೂಕಿನ ತಹಶೀಲ್ದಾರ್ ಅವರು ಮುಜರಾಯಿ ಸಹಾಯಕರಿಗೆ ಜಮೀನು ಹಸ್ತಾಂತರಿಸಿದ್ದಾರೆ' ಎಂದು ಮಾಹಿತಿ ನೀಡಿದರು.

'ಈ ಜಮೀನನ್ನು ಇಲಾಖೆಗೆ ಹಸ್ತಾಂತರಿಸುವ ಪೂರ್ವದಲ್ಲೇ ಒತ್ತುವರಿ ಇದ್ದು, 2015ರಲ್ಲಿ ಸರ್ವೆ ನಡೆಸಿದಾಗ 211 ಒತ್ತುವರಿದಾರರು 6 ಎಕರೆ 12 ಗುಂಟೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂಬುದು ಕಂಡುಬಂದಿದೆ. ಭೂಕಬಳಿಕೆ ನಿಷೇಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, ಇತ್ಯರ್ಥ ಬಾಕಿ ಇದೆ. 2011-12ರಿಂದ 2022-23ರವರೆಗೆ ಎಂ. ಮೋಹನ್ ಕುಮಾರ್, ಜೆ. ಪುರುಷೋತ್ತಮ್, ಎಂ. ನಾರಾಯಣಸ್ವಾಮಿ, ಟಿ. ಸೆಲ್ವಮಣಿ, ಟಿ.ಎನ್‌. ಮಂಜುಳಾ, ವಿ. ಶ್ರೀನಿವಾಸ ಮೂರ್ತಿ ಅವರ ಕರ್ತವ್ಯ ಲೋಪದಿಂದ ಒತ್ತುವರಿಯಾಗಿರುವುದು ಕಂಡುಬಂದಿದ್ದು, ಲೋಪ ಸಾಬೀತಾದರೆ ಅವರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

ಈ ಉತ್ತರವನ್ನು ಒಪ್ಪದ ರವಿಕುಮಾರ್, 'ಇಲಾಖೆ ವಶದಲ್ಲೇ ಇರುವ ಒಂಬತ್ತು ಎಕರೆ ಜಮೀನಿಗೆ ಕಾಂಪೌಂಡ್ ನಿರ್ಮಿಸಲು 2017ರಲ್ಲಿ ಹಣ ಬಿಡುಗಡೆ ಮಾಡಿದ್ದರೂ ಕಾಮಗಾರಿ ನಡೆದಿಲ್ಲ. ಅಧಿಕಾರಿಗಳು, ಗುತ್ತಿಗೆದಾರರು ಒಳಒಪ್ಪಂದ ಮಾಡಿಕೊಂಡಿದ್ದಾರೆಯೇ? ನಿಮ್ಮ ಉತ್ತರ ಸರಿಯಿಲ್ಲ. ಕೂಡಲೇ ಕ್ರಮವಾಗಬೇಕು' ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಆಡಳಿತ ಹಾಗೂ ಪ್ರತಿಪಕ್ಷಗಳ ಸದಸ್ಯರ ನಡುವೆ ವಾದ-ವಿವಾದಗಳು ನಡೆದವು. ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರು, 'ಸ್ಪಷ್ಟ ಭರವಸೆ ಕೊಡಬೇಕು' ಎಂದು ಆಗ್ರಹಿಸಿದರು.

'ನ್ಯಾಯಾಲಯದಲ್ಲಿರುವ ಪ್ರಕರಣವನ್ನು ಕಾಲಮಿತಿಯಲ್ಲಿ ತೆರವುಗೊಳಿಸಲು ಅಡ್ವೊಕೇಟ್ ಜನರಲ್ ಅವರೊಂದಿಗೆ ಮಾತುಕತೆ ನಡೆಸಲಾಗುತ್ತದೆ. ಕೆಆರ್‌ಐಡಿಎಲ್ ಅವರಿಗೆ ಕಾಂಪೌಂಡ್ ನಿರ್ಮಿಸಲು ಹಣ ಬಿಡುಗಡೆ ಮಾಡಲಾಗಿದ್ದು, ಆ ಕಾಮಗಾರಿ ನಡೆಸಲೂ ಸೂಚಿಸಲಾಗುತ್ತದೆ' ಎಂದು ರಾಮಲಿಂಗಾರೆಡ್ಡಿ ಭರವಸೆ ನೀಡಿದರು.

ಡೆಂಗಿ ಪ್ರಕರಣ: ಅಮಿಕಸ್ ಕ್ಯೂರಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರವೂ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಡೆಂಗಿ ಜ್ವರ ವ್ಯಾಪಿಸುತ್ತಿರುವುದನ್ನು ತಡೆಯಲು ಸರ್ಕಾರಕ್ಕೆ ಅಗತ್ಯ ನಿರ್ದೇಶನ ನೀಡುವ ನಿಟ್ಟಿನಲ್ಲಿ ದಾಖಲಿಸಿಕೊಂಡಿರುವ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಕುರಿತಾದ ಪ್ರಕರಣದಲ್ಲಿ ಹಿರಿಯ ವಕೀಲ ಕೆ.ಎನ್‌.ಫಣೀಂದ್ರ ಅವರನ್ನು ಅಮಿಕಸ್ ಕ್ಯೂರಿಯನ್ನಾಗಿ (ನ್ಯಾಯಾಲಯಕ್ಕೆ ಸಹಕರಿಸುವ) ಹೈಕೋರ್ಟ್ ನೇಮಿಸಿದೆ.

ಡೆಂಗಿ ಪ್ರಕರಣ ಹೆಚ್ಚುತ್ತಿರುವ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳನ್ನು ಆಧರಿಸಿ ಹೈಕೋರ್ಟ್ ದಾಖಲಿಸಿಕೊಂಡಿರುವ ಈ ಸ್ವಯಂಪ್ರೇರಿತ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್‌. ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

'ಅರ್ಜಿ ಕುರಿತು ಹೈಕೋರ್ಟ್‌ಗೆ ಅಗತ್ಯ ಸಲಹೆ ಹಾಗೂ ನೆರವು ನೀಡಲು ಕೆ.ಎನ್‌.ಫಣೀಂದ್ರ ಅವರನ್ನು ಅಮಿಕಸ್ ಕ್ಯೂರಿಯಾಗಿ ನೇಮಿಸಲಾಗುತ್ತಿದೆ' ಎಂದು ತಿಳಿಸಿತು. 'ಅರ್ಜಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಫಣೀಂದ್ರ ಅವರಿಗೆ ಹಸ್ತಾಂತರಿಸಬೇಕು' ಎಂದು ರಿಜಿಸ್ಟ್ರಿಗೆ ಸೂಚಿಸಿ ವಿಚಾರಣೆಯನ್ನು ಇದೇ 31ಕ್ಕೆ ಮುಂದೂಡಿತು.

ಶಾಸಕರಿಂದ ಭಜನೆ, ಹರಟೆ, ಚಟಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ಅಹೋರಾತ್ರಿ ಧರಣಿ ಆರಂಭಿಸಿದ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಬೇಸರ ನೀಗಲು ಭಜನೆ ಮತ್ತು ಹರಟೆಯಲ್ಲಿ ತೊಡಗಿದ್ದರು.

ಮೊಗಸಾಲೆಯಲ್ಲಿ ಹಾಸ್ಯ ಚಟಾಕಿಗಳನ್ನು ಹಾರಿಸಿದರು. ಸರ್ಕಾರ ಚರ್ಚೆಗೆ ಅವಕಾಶ ನೀಡದ ಕಾರಣ ಸಭಾಧ್ಯಕ್ಷರ ಊಟವನ್ನು ನಿರಾಕರಿಸಿದ ಬಿಜೆಪಿ ಸದಸ್ಯರು, ತಾವೇ ಊಟದ ವ್ಯವಸ್ಥೆಯನ್ನು ಮಾಡಿಕೊಂಡರು. ರಾತ್ರಿ ಮಲಗಲು ದಿಂಬು ಮತ್ತು ಹೊದಿಕೆಗಳನ್ನು ತರಿಸಿಕೊಂಡರು.



ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಹಾಗೂ ಮುಡಾ ಹಗರಣದ ವಿರುದ್ಧ ವಿಧಾನಸಭೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಅಹೋರಾತ್ರಿ ಧರಣಿ ಜೊತೆಯಲ್ಲಿ ಭಜನೆ ಮಾಡಿದರು

ಮಾತಿನ ಚಕಮಕಿ: ದೊಡ್ಡಬಳ್ಳಾಪುರ ಶಾಸಕ ಧೀರಜ್ ಮುನಿರಾಜು ಮತ್ತು ಪೊಲೀಸ್ ಅಧಿಕಾರಿಯ ಮಧ್ಯೆ ಮಾತಿನ ಚಕಮಕಿ ನಡೆದಿದೆ.

ಧರಣಿ ವೇಳೆ ವಿಧಾನಸಭೆಯಿಂದ ಹೊರಹೋಗಿದ್ದ ಧೀರಜ್ ಮುನಿರಾಜು ಅವರು ಟಿ-ಶರ್ಟ್ ಧರಿಸಿ ವಾಪಸಾಗಿದ್ದರು. ಆದರೆ ಅವರು ಶಾಸಕ ಎಂಬುದನ್ನು ಗುರುತಿಸದ ವಿಧಾನಸೌಧ ಭದ್ರತಾ ವಿಭಾಗದ ಡಿಸಿಪಿ ಕರಿಬಸವನಗೌಡ, ಹೊರ ಹೋಗುವಂತೆ ಏಕವಚನದಲ್ಲಿ ಸೂಚಿಸಿದರು ಎನ್ನಲಾಗಿದೆ.

ಡಿಸಿಪಿ ಅವರ ನಡೆಗೆ ಧೀರಜ್ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಇದರಿಂದ ಇಬ್ಬರ ಮಧ್ಯೆಯೂ ಮಾತಿನ ಚಕಮಕಿ ನಡೆಯಿತು. ಆನಂತರ ಧೀರಜ್ ಅವರು ಶಾಸಕ ಎಂಬುದು ಗೊತ್ತಾದ ನಂತರ, ಡಿಸಿಪಿ ಕರಿಬಸವನಗೌಡ ಅವರು ಕ್ಷಮೆ ಕೇಳಿದರು ಎನ್ನಲಾಗಿದೆ.

ಪೊಲೀಸ್ ಅಧಿಕಾರಿ ವರ್ತನೆಗೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರೂ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. 'ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಹೇಳುವವರನ್ನು ಬಿಡುತ್ತೀರಿ. ಆದರೆ, ಶಾಸಕರನ್ನು ಬಿಡುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ಕಾನೂನು ಸಚಿವ ಎಚ್‌.ಕೆ. ಪಾಟೀಲ ಅವರು ಪ್ರತಿಭಟನಾನಿರತ ಶಾಸಕರನ್ನು ಭೇಟಿಮಾಡಿ, ಯೋಗಕ್ಷೇಮ ವಿಚಾರಿಸಿದರು.

'ಪರಿಷತ್ತಿನಲ್ಲಿ ಕಾರ್ಯದರ್ಶಿ–2 ಹುದ್ದೆಗೆ ಅವಕಾಶವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ ಸಚಿವಾಲಯದಲ್ಲಿ (ಅಧಿಕಾರಿಗಳು ಮತ್ತು ನೌಕರರ ನೇಮಕಾತಿ ಹಾಗೂ ಸೇವಾ ಷರತ್ತುಗಳು) ನಿಯಮದ ಅನ್ವಯ ಕಾರ್ಯದರ್ಶಿ-2 ಹುದ್ದೆಗೆ ಅವಕಾಶವಿಲ್ಲ ಎಂದು ಪರಿಷತ್ ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮಿ ಅವರು ಆರ್ಥಿಕ ಇಲಾಖೆಗೆ ತಿಳಿಸಿದ್ದಾರೆ.

ಪರಿಷತ್‌ ಸಚಿವಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಸ್‌. ನಿರ್ಮಲಾ ಅವರು ನಿವೃತ್ತಿ ಹೊಂದುವವರೆಗೆ ತಾತ್ಕಾಲಿಕವಾಗಿ ಕಾರ್ಯದರ್ಶಿ-2 ಹುದ್ದೆ ಸೃಜಿಸುವ ಬಗ್ಗೆ ಆರ್ಥಿಕ ಇಲಾಖೆ ಕೇಳಿರುವ ಮಾಹಿತಿಗೆ ಕಾರ್ಯದರ್ಶಿ ಸುದೀರ್ಘ ಟಿಪ್ಪಣಿ ಬರೆದಿದ್ದಾರೆ.

ವಿಧಾನ ಪರಿಷತ್ತು ಇರುವ ಇತರೆ ರಾಜ್ಯಗಳಲ್ಲಿ ಎಲ್ಲಿಯೂ ಎರಡು ಕಾರ್ಯದರ್ಶಿ ಹುದ್ದೆಗಳು ಇಲ್ಲ ಎಂದು ತಿಳಿಸಿದ್ದಾರೆ.

ರಾಜ್ಯ ವಿಧಾನಸಭೆಯಲ್ಲಿ 225 ಶಾಸಕರಿದ್ದಾರೆ, ಅಲ್ಲಿ 900 ಮಂದಿ ಅಧಿಕಾರಿ, ಸಿಬ್ಬಂದಿ ಇದ್ದಾರೆ. ಅಲ್ಲಿಯೂ ಹೆಚ್ಚುವರಿ ಕಾರ್ಯದರ್ಶಿ ಹುದ್ದೆ ಮತ್ತು ಕಾರ್ಯದರ್ಶಿ-2 ಹುದ್ದೆ ಇರುವುದಿಲ್ಲ. ವಿಧಾನ ಪರಿಷತ್ತಿನಂತಹ ಚಿಕ್ಕ ಸಚಿವಾಲಯಕ್ಕೆ ಎರಡು ಕಾರ್ಯದರ್ಶಿ ಹುದ್ದೆಗಳ ಅವಶ್ಯಕತೆ ಇರುವುದಿಲ್ಲ. ಇಲ್ಲಿ 75 ಸದಸ್ಯರಿದ್ದು, 284 ಅಧಿಕಾರಿ, ಸಿಬ್ಬಂದಿ ಇದ್ದಾರೆ. ಹೆಚ್ಚುವರಿ ಕಾರ್ಯದರ್ಶಿ ಹುದ್ದೆಯು ಕೆಳಗಿನ ಹಂತದ ಹುದ್ದೆಯಾಗಿದೆ. ಅದನ್ನು ಕಾರ್ಯದರ್ಶಿ-2 ಹುದ್ದೆಗೆ ಉನ್ನತೀಕರಿಸುವುದರಿಂದ ಎರಡು ಕಾರ್ಯದರ್ಶಿ ಹುದ್ದೆಗಳು ಸಮಾನಾಂತರ ಹುದ್ದೆಗಳಾಗುತ್ತವೆ. ಎರಡೂ ಕಾರ್ಯದರ್ಶಿ ಹುದ್ದೆಗಳಿಗೆ ಕಾರ್ಯ ಹಂಚಿಕೆ ಆಗುವುದರಿಂದ ಕಚೇರಿ ಆಡಳಿತದಲ್ಲಿ ವಿನಾಕಾರಣ ಗೊಂದಲ, ಭಿನ್ನಾಭಿಪ್ರಾಯ, ತಿಕ್ಕಾಟಗಳಿಗೆ, ಗುಂಪುಗಾರಿಕೆಗೆ ಕಾರಣವಾಗುತ್ತದೆ ಎಂದು ಹೇಳಿದ್ದಾರೆ.

ನಿರ್ಮಲಾ ಅವರು ಹೆಚ್ಚುವರಿ ಕಾರ್ಯದರ್ಶಿ ಹುದ್ದೆಗೆ ಬಡ್ತಿ ಹೊಂದಿ ಎರಡು ವರ್ಷಗಳಾಗಿದ್ದು, ದೀರ್ಘ ಕಾಲ ಆ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿರುವುದಿಲ್ಲ. ಅಲ್ಲದೇ, ನೌಕರರ ಜೇಷ್ಠತೆ ಮತ್ತು ಸೇವಾ ಹಿರಿತನವನ್ನು ಕಾಪಾಡಬೇಕಾಗಿದೆ. ಈ ಎಲ್ಲಾ ಕಾರಣಗಳಿಂದ ಹೆಚ್ಚುವರಿ ಕಾರ್ಯದರ್ಶಿ ಹುದ್ದೆಯನ್ನು ಕಾರ್ಯದರ್ಶಿ-2 ಹುದ್ದೆಗೆ ಉನ್ನತೀಕರಿಸುವುದು ಸೂಕ್ತವಲ್ಲ ಎಂದು ಅಭಿಪ್ರಾಯ ತಿಳಿಸಿದ್ದಾರೆ.

ಪ್ರಮುಖ ದಿನಾಚರಣೆ

ಯು.ಟಿ.ಆಯಿಷಾ ಫರ್ಜಾನ

ಯುಪಿಎಸ್‌ಸಿ ಪ್ರಿಲಿಮ್ಸ್, ಕೆಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ - 2 ಹಾಗೂ ಎಲ್ಲಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಸಾಮಾನ್ಯ ಜ್ಞಾನದ ಮಾಹಿತಿಗಳಿವು.

ಜೀವವೈವಿಧ್ಯ ದಿನ (IDB) 2024 - ಮೇ 22

ಜೀವ ವೈವಿಧ್ಯ ಅಂತರರಾಷ್ಟ್ರೀಯ ದಿನ (IDB) 2024 ಅನ್ನು ಮೇ 22, 2024ರಂದು 'Be part of the plan'(ಯೋಜನೆಯ ಭಾಗವಾಗಿರಿ) ವಿಷಯದಡಿ ಆಚರಿಸಲಾಯಿತು. ಈ ಥೀಮ್ ಜೀವವೈವಿಧ್ಯ ಯೋಜನೆ ಎಂದೂ ಕರೆಯಲ್ಪಡುವ ಕುನ್ಮಿಂಗ್-ಮಾಂಟ್ರಿಯಲ್ ಗ್ಲೋಬಲ್ ಬಯೋಡೈವರ್ಸಿಟಿ ಫ್ರೇಮ್‌ವರ್ಕ್‌ನ ಅನುಷ್ಠಾನವನ್ನು ಬೆಂಬಲಿಸುವ ಮೂಲಕ ಜೀವವೈವಿಧ್ಯ ನಷ್ಟವನ್ನು ನಿಲ್ಲಿಸಲು ಮತ್ತು ಹಿಮ್ಮೆಟ್ಟಿಸಲು ಎಲ್ಲಾ ಭಾಗೀಗಾರರಿಗೆ ಒಂದು ಮಹತ್ವದ ಕರೆಯಾಗಿತ್ತು.

ಹವಾಮಾನ ಸಂರಕ್ಷಣೆಯ ವಿಚಾರದಲ್ಲಿ ಪ್ಯಾರಿಸ್ ಒಪ್ಪಂದ ಹೇಗೆ ಮಹತ್ವದ್ದೋ ಜೀವವೈವಿಧ್ಯ ಸಂರಕ್ಷಣೆಗೆ ಕುನ್ಮಿಂಗ್ ಮಾಂಟ್ರಿಯಲ್ ಒಪ್ಪಂದವೂ ಅಷ್ಟೇ ಪ್ರಮುಖವಾಗಿದೆ.

- ಜೀವವೈವಿಧ್ಯ ಯೋಜನೆಯು ಎಲ್ಲಾ ಕಡೆಯ ಪಾಲುದಾರರ ನಡುವೆ ಸಹಕಾರ ಮತ್ತು ಪಾಲುದಾರಿಕೆಗೆ ಅವಕಾಶಗಳನ್ನು ನೀಡುತ್ತದೆ. ಈ ದಿನದಂದು ಸರ್ಕಾರಗಳು, ಸ್ಥಳೀಯ ಜನರು ಮತ್ತು ಸ್ಥಳೀಯ ಸಮುದಾಯಗಳು, ಸರ್ಕಾರೇತರ ಸಂಸ್ಥೆಗಳು, ಶಾಸಕರು, ಮತ್ತು ನಾಗರಿಕರು ಸೇರಿ ಕುನ್ಮಿಂಗ್-ಮಾಂಟ್ರಿಯಲ್ ಗ್ಲೋಬಲ್ ಬಯೋಡೈವರ್ಸಿಟಿ ಫ್ರೇಮ್‌ವರ್ಕ್‌ನ ಅನುಷ್ಠಾನವನ್ನು ಹೇಗೆಲ್ಲಾ ಬೆಂಬಲಿಸಬಹುದು ಎಂಬ ವಿಧಾನಗಳನ್ನು ಪ್ರಚುರಪಡಿಸಲು ಪ್ರೋತ್ಸಾಹಿಸಲಾಯಿತು.
- IDB 2024 ಅಕ್ಟೋಬರ್ 21ರಿಂದ ನವೆಂಬರ್ 1, 2024 ರವರೆಗೆ ಕೊಲಂಬಿಯಾದಲ್ಲಿ ನಡೆಯಲಿರುವ ಜೀವ ವೈವಿಧ್ಯ ಸಮಾವೇಶದ (COP 16) ಕಾನ್ಫರೆನ್ಸ್ ಆಫ್ ಪಾರ್ಟೀಸ್ ಹದಿನಾರನೇ ಸಭೆಗೆ ಎಲ್ಲಾ ವಿಧದಲ್ಲೂ ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ.

ವಿಶ್ವ ಪರಿಸರ ದಿನ - ಜೂನ್ 5

ಪರಿಸರ ಸಂರಕ್ಷಣೆಯ ತತ್ವಗಳ ವ್ಯಾಪಕ ಜಾಗೃತಿಗಾಗಿ ಮೀಸಲಾದ ವಿಶ್ವ ಪರಿಸರ ದಿನವನ್ನು ಜೂನ್ 5, 2024 ರಂದು ಆಚರಿಸಲಾಗುತ್ತದೆ.



- ಯುನೈಟೆಡ್ ನೇಷನ್ಸ್ ಎನ್ವಿರಾನ್ಮೆಂಟ್ ಪ್ರೋಗ್ರಾಂ (UNEP) ನೇತೃತ್ವದ ಈ ಆಚರಣೆಯನ್ನು 1973ರಿಂದ ವಾರ್ಷಿಕವಾಗಿ ಆಚರಿಸಲಾಗುತ್ತಿದೆ. ಇದು ಪರಿಸರ ಸಂರಕ್ಷಣೆಯ ಪ್ರಚಾರದ ಅತಿದೊಡ್ಡ ಜಾಗತಿಕ ವೇದಿಕೆಯಾಗಿ ಬೆಳೆದಿದೆ.
- 2024 ರಲ್ಲಿ, ಸೌದಿ ಅರೇಬಿಯಾವು ವಿಶ್ವ ಪರಿಸರ ದಿನವನ್ನು ಆಯೋಜಿಸಿದ್ದು ಈ ವರ್ಷದ ಥೀಮ್ 'ಭೂಮಿ ಪುನಃಸ್ಥಾಪನೆ, ಮರುಭೂಮೀಕರಣ ಮತ್ತು ಬರ ಸ್ಥಿತಿಸ್ಥಾಪಕತ್ವ'ದ ಮೇಲೆ ಸಮಾವೇಶವನ್ನು ಕೇಂದ್ರೀಕರಿಸಿತ್ತು.
- ಭೂ ಪುನಃಸ್ಥಾಪನೆಯು ಯುಎನ್ ಡಿಕೇಡ್ ಆನ್ ಎಕೋಸಿಸ್ಟಮ್ ರಿಸ್ಟೋರೇಶನ್ (2021-2030) ನ ಪ್ರಮುಖ ತತ್ವವಾಗಿದೆ. ಇದು ವಿಶ್ವದಾದ್ಯಂತ ಪರಿಸರ ವ್ಯವಸ್ಥೆಗಳ ರಕ್ಷಣೆ ಮತ್ತು ಪುನರುಜ್ಜೀವನಕ್ಕಾಗಿ ಒಂದು ಮಹತ್ವದ ಕರೆಯಾಗಿದ್ದು, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ನಿರ್ಣಾಯಕ ಅಂಶವಾಗಿದೆ.

ವಿಶ್ವ ಭೂಮಿ ದಿನ - ಏಪ್ರಿಲ್ 22

ಪ್ರತಿ ವರ್ಷ ಏಪ್ರಿಲ್ 22 ರಂದು ವಿಶ್ವ ಭೂ ದಿನ ಆಚರಿಸಲಾಗುತ್ತದೆ.



- 2024ರ ವಿಶ್ವ ಭೂ ದಿನದ ಥೀಮ್ 'ಪ್ಲಾನೆಟ್ ವರ್ಸಸ್ ಪ್ಲಾಸ್ಟಿಕ್ಸ್' ಆಗಿದೆ. ಇದು ಪ್ಲಾಸ್ಟಿಕ್ ಮಾಲಿನ್ಯದ ತೀವ್ರ ಸಮಸ್ಯೆ ಮತ್ತು ಪ್ರಕೃತಿಯ ಮೇಲೆ ಅದರ ಹಾನಿಕಾರಕ ಪರಿಣಾಮಗಳನ್ನು ಎತ್ತಿ ತೋರಿಸುತ್ತದೆ.
- 2024 ರ ಭೂಮಿಯ ದಿನಕ್ಕಾಗಿ, EARTHDAY.ORG ಈ ಭೂಮಿಯ ಆರೋಗ್ಯಕ್ಕಾಗಿ ಪ್ಲಾಸ್ಟಿಕ್ ಅನ್ನು ಕೊನೆಗೊಳಿಸಬೇಕು ಮತ್ತು ಈ ನಿಟ್ಟನಲ್ಲಿ 2040ರ ವೇಳೆಗೆ ಎಲ್ಲಾ ಪ್ಲಾಸ್ಟಿಕ್‌ಗಳ ಉತ್ಪಾದನೆಯಲ್ಲಿ 60 ಪ್ರತಿಶತದಷ್ಟು ಕಡಿತ ಮಾಡಬೇಕೆಂದು ಕರೆ ನೀಡಿತು.

(2023ರ ವಿಶ್ವ ಪರಿಸರ ದಿನದ ಥೀಮ್ 'ಬೀಟ್ ಪ್ಲಾಸ್ಟಿಕ್ ಪೊಲ್ಯೂಷನ್' ಎಂದಾಗಿತ್ತು ಎನ್ನುವುದನ್ನು ವಿದ್ಯಾರ್ಥಿಗಳು ನೆನಪಿನಲ್ಲಿ ಇಡಬೇಕು.)

ವಿಶ್ವ ತಂಬಾಕುರಹಿತ ದಿನ - ಮೇ 31

- ಮೇ 31ರಂದು ವಿಶ್ವ ತಂಬಾಕುರಹಿತ ದಿನ (WNTD) ಎಂದು ಗುರುತಿಸಲಾಗಿದೆ. ಈ ವರ್ಷ ಮತ್ತೊಮ್ಮೆ ಪ್ರಪಂಚದಾದ್ಯಂತದ WHO ಮತ್ತು ಸಾರ್ವಜನಿಕ ಆರೋಗ್ಯ ಚಾಂಪಿಯನ್‌ಗಳು ಯುವಕರ ಮೇಲೆ ತಂಬಾಕು ಉದ್ಯಮದಿಂದಾಗುವ ಹಾನಿಕಾರಕ ಪ್ರಭಾವಗಳ ಬಗ್ಗೆ ಜಾಗೃತಿ ಮೂಡಿಸಲು ಚಟುವಟಿಕೆಗಳನ್ನು ನಡೆಸಿದರು.
- WNTD 2024ರ ವಿಷಯವು ಹಾನಿಕಾರಕ ತಂಬಾಕು ಉತ್ಪನ್ನಗಳಿಂದ ಯುವಕರನ್ನು ದೂರವಿರಿಸಬೇಕೆಂಬ ಅಂಶದ ಮೇಲೆ ಕೇಂದ್ರೀಕರಿಸಿದೆ.




- ಈ ಉಪಕ್ರಮವು ಜಾಗತಿಕವಾಗಿ ಯುವಜನರು, ನೀತಿ ನಿರೂಪಕರು ಮತ್ತು ತಂಬಾಕು ನಿಯಂತ್ರಣ ಆಸಕ್ತರಿಗೆ ಈ ಸಮಸ್ಯೆಯನ್ನು ಚರ್ಚಿಸಲು ವೇದಿಕೆಯನ್ನು ಒದಗಿಸಿತಲ್ಲದೇ, ಯುವಜನರನ್ನು ರಕ್ಷಿಸುವ ನೀತಿಗಳನ್ನು ಅಳವಡಿಸಿಕೊಳ್ಳಲು ಸರ್ಕಾರಗಳನ್ನು ಒತ್ತಾಯಿಸುತ್ತದೆ. ತಂಬಾಕು ನಿಯಂತ್ರಣ ಪ್ರಯತ್ನಗಳಿಂದಾಗಿ ಸಿಗರೇಟ್ ಸೇವನೆಯು ಇತ್ತೀಚಿನ ವರ್ಷಗಳಲ್ಲಿ ಕಡಿಮೆಯಾಗಿದೆಯಾದರೂ, ಇನ್ನೂ ಜಾಗೃತಿ ಮೂಡಿಸಲು ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕಾಗಿದೆ.
- 2022ರ ಮಾಹಿತಿಯ ಪ್ರಕಾರ, ವಿಶ್ವದಾದ್ಯಂತ, 13-15 ವರ್ಷ ವಯಸ್ಸಿನ ಕನಿಷ್ಠ 37 ಮಿಲಿಯನ್ ಯುವಜನರು ತಂಬಾಕನ್ನು ಬಳಸುತ್ತಾರೆ. WHO ಪ್ರಕಾರ ಯುರೋಪಿಯನ್ ಪ್ರದೇಶದಲ್ಲಿ, 13-15 ವರ್ಷ ವಯಸ್ಸಿನ ಶೇ 11.5 ಹುಡುಗರು ಮತ್ತು ಶೇ 10.1 ಹುಡುಗಿಯರು ತಂಬಾಕು ಬಳಕೆದಾರರಾಗಿದ್ದಾರೆ (ಸುಮಾರು 4 ಮಿಲಿಯನ್ ಜನರು).

ವಿಶ್ವ ವಲಸೆ ಹಕ್ಕಿ ದಿನ - ಮೇ 11 ಮತ್ತು ಅಕ್ಟೋಬರ್ 12

ಮೇ 11 ರಂದು, ವಿಶ್ವ ವಲಸೆ ಹಕ್ಕಿಗಳ ದಿನದ ಅಭಿಯಾನವು ವಲಸೆ ಹಕ್ಕಿಗಳಿಗೆ ಕೀಟಗಳ ಪ್ರಾಮುಖ್ಯತೆಯ ಮೇಲೆ ಕೇಂದ್ರೀಕರಿಸಿದ್ದು, 2024ರ ಕೀಟಗಳ ದಿನದ ಥೀಮ್ 'ಕೀಟಗಳನ್ನು ರಕ್ಷಿಸಿ ಹಕ್ಕಿಗಳನ್ನು ರಕ್ಷಿಸಿ' ಎಂದಾಗಿತ್ತು. ಈ ನಿಟ್ಟನಲ್ಲಿ ಕೀಟಗಳ ಸಂಖ್ಯೆ ಕಡಿಮೆಯಾಗುವುದಕ್ಕೆ ಸಂಬಂಧಿಸಿದ ಕಾಳಜಿಯನ್ನು ಎತ್ತಿ ತೋರಿಸಿತು.

ಪಕ್ಷಿಗಳು ವರ್ಷದಲ್ಲಿ ಎರಡು ಬಾರಿ ಉತ್ತರಧ್ರುವ ಮತ್ತು ದಕ್ಷಿಣ ಧ್ರುವಗಳ ನಡುವೆ ವಲಸೆಪ್ರಯಾಣವನ್ನು ಹೊಂದಿರುವ ಕಾರಣ ಮೇಲಿನ ಎರಡೂ ದಿನಗಳಲ್ಲಿ ವಲಸೆ ಹಕ್ಕಿಗಳ ದಿನವನ್ನು ಆಚರಿಸಲಾಗುತ್ತದೆ.

- ಕೀಟಗಳು ಅನೇಕ ವಲಸೆ ಪಕ್ಷಿ ಪ್ರಭೇದಗಳಿಗೆ ಶಕ್ತಿಯ ಅಗತ್ಯ ಮೂಲಗಳಾಗಿ ಕಾರ್ಯನಿರ್ವಹಿಸುತ್ತವೆ. ಸಂತಾನೋತ್ಪತ್ತಿಯ ಋತುಗಳಲ್ಲಿ ಮಾತ್ರವಲ್ಲದೆ ಅವುಗಳ ದೂರ ಪ್ರಯಾಣದ ಸಮಯದಲ್ಲಿ, ಪಕ್ಷಿ ವಲಸೆಯ ಸಮಯ, ಅವಧಿ ಮತ್ತು ಒಟ್ಟಾರೆ ಯಶಸ್ಸಿನ ಮೇಲೆ ಮಹತ್ವದ ಪರಿಣಾಮ ಬೀರುತ್ತವೆ.



- ಸಂತಾನೋತ್ಪತ್ತಿ ಸ್ಥಳಗಳಲ್ಲಿ ಮತ್ತು ಪಕ್ಷಿಗಳ ವಲಸೆ ಮಾರ್ಗಗಳಲ್ಲಿ ಕೀಟಗಳ ಸಂಖ್ಯೆಯ ನಷ್ಟ ಮತ್ತು ಅಡಚಣೆಯು ಪಕ್ಷಿಗಳ ಉಳಿವು ಮತ್ತು ಯೋಗಕ್ಷೇಮಕ್ಕೆ ಬೆದರಿಕೆಯನ್ನುಂಟುಮಾಡುತ್ತದೆ. ಇದು ತೀವ್ರವಾದ ಕೃಷಿನಷ್ಟ , ನಗರಾಭಿವೃದ್ಧಿ ಮತ್ತು ಬೆಳಕಿನ ಮಾಲಿನ್ಯದಂತಹ ಸಂಬಂಧಿತ ಪರಿಣಾಮಗಳಿಗೆ ಕಾರಣವಾಗಿದೆ.
- ಬೆಳೆಗಳನ್ನು ರಕ್ಷಿಸುವ ಉದ್ದೇಶದಿಂದ ಬಳಸುವ ಕೀಟನಾಶಕಗಳು ಮತ್ತು ಸಸ್ಯನಾಶಕಗಳಿಂದಾಗಿ ಪಕ್ಷಿಗಳು ಆಹಾರಕ್ಕಾಗಿ ಅವಲಂಬಿಸಿರುವ ಕೀಟಗಳು ನಾಶವಾಗುತ್ತವೆ. ಶಕ್ತಿ ಮತ್ತು ಪ್ರೊಟೀನ್-ಭರಿತ ಕೀಟಗಳ ಕೊರತೆಯು ಪಕ್ಷಿಗಳ ವಲಸೆ ಮತ್ತು ಸಂತಾನೋತ್ಪತ್ತಿಗೆ ಅಡ್ಡಿಯಾಗಬಹುದು. ಮತ್ತು ಇದು ದುರ್ಬಲ ಪ್ರತಿರಕ್ಷಣಾ ವ್ಯವಸ್ಥೆಗಳಿಗೆ ಕಾರಣವಾಗುತ್ತದೆ.

ಸಂತಾನೋತ್ಪತ್ತಿಯನ್ನು ಕಡಿಮೆ ಮಾಡುತ್ತದೆ ಮತ್ತು ಪಕ್ಷಿ ಸಂತತಿಗಳಲ್ಲಿ ಮರಣ ಪ್ರಮಾಣವನ್ನು ಹೆಚ್ಚಿಸುತ್ತದೆ.

- ಪರಾಗಸ್ಪರ್ಶ ಮತ್ತು ಕೀಟ ನಿಯಂತ್ರಣದಲ್ಲಿ ಪಕ್ಷಿಗಳು ನಿರ್ಣಾಯಕ ಪಾತ್ರವನ್ನು ವಹಿಸಿವೆ. ಮತ್ತು ಕೀಟಗಳ ಕೊರತೆಯು ಈ ಪರಿಸರ ವ್ಯವಸ್ಥೆಯ ಸುಗಮ ಕಾರ್ಯಗಳಿಗೆ ಅಡ್ಡಿಪಡಿಸುತ್ತವೆ. ಪಕ್ಷಿಗಳಂತಹಾ ನೈಸರ್ಗಿಕ ಪರಭಕ್ಷಕಗಳಿಲ್ಲದ ಕೆಲವು ಕೀಟಗಳ ಅಧಿಕ ಸಂಖ್ಯೆಯು ಸಸ್ಯಗಳ ಆರೋಗ್ಯ ಮತ್ತು ಕೃಷಿಗೆ ಹಾನಿಯನ್ನುಂಟುಮಾಡುತ್ತದೆ.
- 2024ರಲ್ಲಿ ವಿಶ್ವ ವಲಸೆ ಹಕ್ಕಿ ದಿನದ ಅಭಿಯಾನವು ಈ ನಿಟ್ಟಿನಲ್ಲಿ ಪೂರ್ವಭಾವಿ ಸಂರಕ್ಷಣಾ ಕ್ರಮಗಳ ಅಗತ್ಯವನ್ನು ಒತ್ತಿಹೇಳಿತು. ಕೀಟನಾಶಕಗಳು ಮತ್ತು ರಸಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡುವುದು ಮತ್ತು ಸಾಧ್ಯವಾದರೆ ಕೃಷಿಯನ್ನು ಸಾವಯವ ಕೃಷಿಗೆ ಬದಲಾಯಿಸುವುದು ಇದರಲ್ಲಿ ಸೇರಿದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಅಂತರರಾಷ್ಟ್ರೀಯ ಪ್ಲಾಸ್ಟಿಕ್ ಬ್ಯಾಗ್ ಮುಕ್ತ ದಿನವನ್ನು ಪ್ರತಿ ವರ್ಷ ಜುಲೈ 3 ರಂದು ಆಚರಿಸಲಾಗುತ್ತದೆ.

ಬಿ. ನಮ್ಮ ಪರಿಸರದ ಮೇಲೆ ಪ್ಲಾಸ್ಟಿಕ್ ಚೀಲಗಳ ಹಾನಿಕಾರಕ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು ಅಂತರರಾಷ್ಟ್ರೀಯ ಪ್ಲಾಸ್ಟಿಕ್ ಬ್ಯಾಗ್ ಮುಕ್ತ ದಿನದ ಉದ್ದೇಶವಾಗಿದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

2. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಭಾರತವು ಜುಲೈ 1 2024 ರಿಂದ ಏಕ-ಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳಾದ ಟ್ರೇಗಳು, ಪ್ಲೇಟ್ ಗಳು, ಕಪ್ ಗಳು, ಸ್ಟ್ರಾಗಳು ಮತ್ತು ಪಾಲಿಸ್ಟೈರೀನ್ ಕಂಟೈನರ್ ಗಳ ಉತ್ಪಾದನೆ, ವಿತರಣೆ ಮತ್ತು ಬಳಕೆಯನ್ನು ನಿಷೇಧಿಸಿದೆ.

ಬಿ. ಭಾರತದಲ್ಲಿ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ ಅನ್ನು ಏಕ-ಬಳಕೆಯ ಪ್ಲಾಸ್ಟಿಕ್ ವಸ್ತುಗಳ ಪಟ್ಟಿಯಿಂದ ಹೊರಗಿಡಲಾಗಿದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಸಿ

3. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು/ವು ಪ್ಲಾಸ್ಟಿಕ್ ಚೀಲಗಳ ಬಳಕೆಯ ಸಮಸ್ಯೆಗೆ ಪರಹಾರಗಳಾಗಿವೆ.

ಎ. ಪಾಲಿಪ್ರೊಪಿಲೀನ್ ಚೀಲಗಳ ಬಳಕೆಯನ್ನು ಬಳಕೆ ಮಾಡುವುದು.

ಬಿ. ಪರಿಸರ ಸ್ನೇಹಿ ಪರ್ಯಾಯ ವಸ್ತುಗಳಾದ ಹತ್ತಿ, ಸೆಣಬು ಮತ್ತು ಇತ್ಯಾದಿಗಳಿಂದ ತಯಾರಿಸಿದ ಚೀಲಗಳನ್ನು ಬಳಸುವುದು.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

4. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯು 1995ರಲ್ಲಿ ಪ್ರಾರಂಭವಾದ ಕೇಂದ್ರ ವಲಯದ ಯೋಜನೆಯಾಗಿದೆ.

ಬಿ. ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಪ್ರತಿ ಎಂಪಿ ಕ್ಷೇತ್ರಕ್ಕೆ ವಾರ್ಷಿಕವಾಗಿ ₹ 5 ಕೋಟಿ ಒದಗಿಸಲಾಗುತ್ತದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಬಿ

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ರಾಜ್ಯದಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು 2001-02ರಲ್ಲಿ ಪ್ರಾರಂಭಿಸಲಾಗಿದೆ.

ಬಿ. ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಪ್ರತಿ ಕ್ಷೇತ್ರಕ್ಕೆ ತಲಾ ₹500.00 ಲಕ್ಷಗಳನ್ನು ಒದಗಿಸಲಾಗುತ್ತದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಎ

ITBPಯಲ್ಲಿ 143 ಕಾನ್‌ಸ್ಟೆಬಲ್ ಹುದ್ದೆಗಳು

ಇಂಡೊ ಟಿಬೆಟಿಯನ್ ಬಾರ್ಡರ್ ಪೊಲೀಸ್ ಪಡೆಯಲ್ಲಿ (ITBP) ಕಾನ್‌ಸ್ಟೆಬಲ್ ಕ್ಷೌರಿಕ, ಸಫಾಯಿ ಕರ್ಮಚಾರಿ ಹಾಗೂ ಮಾಲಿ ಎಂಬ ಒಟ್ಟು 143 ಹುದ್ದೆಗಳಿಗೆ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ.

ಇದೇ ಜುಲೈ 28 ರಿಂದ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಲಿದ್ದು ಆಗಸ್ಟ್ 26 ಕಡೆಯ ದಿನ. ಅರ್ಹ ಪುರುಷ, ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.ಅರ್ಜಿ ಸಲ್ಲಿಸಲು ಅರ್ಜಿ ಶುಲ್ಕ ₹ 100 ಇದ್ದು, ಎಸ್‌ಸಿ/ಎಸ್‌ಟಿ, ಮಹಿಳೆ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ.

ಕಾನ್‌ಸ್ಟೆಬಲ್ ಕ್ಷೌರಿಕ, ಸಫಾಯಿ ಕರ್ಮಚಾರಿ ಹುದ್ದೆಗಳಿಗೆ ಕನಿಷ್ಠ 18 ಹಾಗೂ ಗರಿಷ್ಠ 23 ವರ್ಷ ವಯಸ್ಸು ಮೀರಿರಬಾರದು. ಮಾಲಿ ಹುದ್ದೆಗಳಿಗೆ ಕನಿಷ್ಠ 18 ಹಾಗೂ ಗರಿಷ್ಠ 25 ವರ್ಷ ವಯಸ್ಸು ಮೀರಿರಬಾರದು.

ಈ ಮೂರೂ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು 10ನೇ ತರಗತಿ ಪಾಸಾಗಿರಬೇಕು ಅಥವಾ ತತ್ಸಮಾನವಾದ ಶೈಕ್ಷಣಿಕ ಅರ್ಹತೆ ಹೊಂದಿರಬೇಕು. ಜೊತೆಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಠ 2 ವರ್ಷ ಕೆಲಸದ ಅನುಭವ ಹೊಂದಿರಬೇಕು.

ವಿವರವಾದ ಅಧಿಸೂಚನೆಗೆ ಹಾಗೂ ಆನ್‌ಲೈನ್ ಅರ್ಜಿ ಸಲ್ಲಿಸಲು recruitment.itbpolice.nic.in ವೆಬ್‌ಸೈಟ್ ಪರಿಶೀಲಿಸಬೇಕು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇಂಗ್ಲಿಷ್

Second Language ENGLISH

Unit-2 PROSE

There's a Girl by the Tracks!

Speak well

Task -1: ***Imagine some of Roma's colleagues (Ramani, Tejas and Shalini) visit Roma's house some days later, after the incident. They begin to talk. Read the dialogues taking the roles.***

Shalini: Hi! Roma, how're you now? We're sorry to hear about the accident.

Roma: Please come in. I'm ok. Still, That accident haunts me.

Tejas: That's really a pity. We can't even imagine how all that happened.

Roma: Yes, it was really horrible. You know, I was in a hurry that day. Foolishly, I tried to board the running train.

Ramani: Really? You shouldn't have done that!

Roma: Well, with great risk I boarded it. The train was full and I got squeezed and a minute or two later, I was pushed out.

Tejas: How dreadful!

Roma: The very next moment, I was on the track. I didn't know how I got there.

Shalini: How terrible!

Roma: It was all God's grace that I didn't die. A young chap risked his life and saved me.

Tejas: Did he? Anyway, take care Roma. For heaven's sake, don't you ever run any more risks.

Roma: Thank you all.

Ramani: Meet you again. Take care. Bye!

Roma: Bye, friends.

Task 2: ***Imagine something bad has happened in your friend's life. You meet him/her. You need to sympathise with and instill confidence in him/her. Write a dialogue.***

Note: The following expressions are used to convey sympathy.

I'm sorry to hear about ....
That's so sad........
I'm awfully/dreadfully sorry about ......
That's a pity/hard luck/I know how it feels ....
How upsetting/ annoying/ oh, how dreadful/ terrible/ awful ......
You must be very upset ....
I'm extremely sorry to hear that/ Im/was deeply sorry to hear/ learn about ....
Bad luck ......
Can I help you in any way ...?
Don't worry it'll turn out all right...
It may not be as bad as it looks...
Well, these things happen, don't they ...?

Dialogue -

Me: Hi Vinay! How are you?

Vinay: I am sad friend. I lost my cousin brother in a bike accident last week.

Me: I'm sorry to hear about that.

Vinay: He was just 21 years old.

Me: That's so sad. That's really terrifying.

Vinay: He sustained serious head injuries when his bike hit a half cut electric pole.

Me: Oh! I'm dreadfully sorry about that.

Vinay: Instead of removing the pole completely from bottom with its embedment in concrete, the pole was cut few inches above road level, resulting in accident.

Me: It's a pity that a young chap had to die for someone else's negligence. I know how it feels...

Vinay: And it happened during the night in a poorly lit street.

Me: How awful..! the maintenance of roads and street lights by municipality is terrible.

Vinay: True.

Me: You must be very upset...

Vinay: Yes, I am very sad for losing my cousin brother for no fault of his. His mother had to be admitted to hospital when she lost her consciousness after hearing about his death.

Me: I'm extremely sorry to hear that ...

Vinay: She is yet to recover from the shock ...

Me: Bad luck ...

Vinay: It is not bad luck but it is the murder by municipality.

Me: Can I help you in any way ...?

Vinay: No, thanks. I will definitely ask for it, if required.

Me: Don't worry it'll turn out all right...She will recover soon...

Vinay: I am praying God that your words come true.

Me: It may not be as bad as it looks...

Vinay: Hope so...

Me: Well, these things happen, don't they ...?

Vinay: Due to the corruption in municipalities, these things are happening more frequently...

Read and respond

Task 1 : Look at the picture- 1 in column 'A'. Some statements are made in column 'B' about the actions as seen in 'A'. Some of the statements are wrong, and some of them are right. If they are wrong, correct them. If they are right mark (√) (Contd.....)

II PUC CHEMISTRY

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

CHEMICAL KINETICS

25. What is Pseudo first order reaction?

Ans:- A chemical reaction of higher order can be converted into first order by taking the other reactants except one in a large excess. Such a reaction is called Pseudo first order reaction.

Eg:- Hydrolysis of sucrose or the inversion of cane sugar.

$$\underset{(Sucrose)}{C_{12}H_{22}O_{11}} + H_2O \xrightarrow{H^+} \underset{(Glucose)}{C_6H_{12}O_6} + \underset{(Fructose)}{C_6H_{12}O_6}$$

26. The first order reaction is 87.5% complete in 120 min. Calculate its half life?

Soln:- For a first order reaction,

$$k = \frac{2.303}{t}\log\frac{a}{a-x}$$

Substituting for $a = 100$, $t = t_{87.5\%} = 120$ min and $a - x = 12.5\%$ in the above equation we get,

$$k = \frac{2.303}{120}\log\frac{100}{100-87.5} = \frac{2.303}{120}\log\frac{100}{12.5}$$

$$= \frac{2.303}{120}(\log 100 - \log 12.5)$$

$$= \frac{2.303}{120}(2.0000 - 1.0969)$$

$$= \frac{2.303}{120} \times 0.9031 = 0.01733\ min^{-1}$$

$$\text{Half life, } t_{\frac{1}{2}} = \frac{0.693}{k} = \frac{0.693}{0.01733}$$

$$= 39.98\ minutes$$

27. How does the concentration of the reactants influence the rate of a reaction?

Ans:- The concentration of the reactants is maximum at the start of the reaction and therefore, the rate of change of concentration is also maximum. As the concentration of the reactants decreases, it brings about the corresponding decrease in the rate of the reaction. This means that the rate of the reaction is directly proportional to the concentration of the reactants. *Eg:-* The rate of the burning of the wood depends upon the concentration of oxygen, a piece of wood burns slowly in air containing about 20% of oxygen but burns rapidly in pure oxygen (100% oxygen)

28. How does the temperature of the system influence the rate of a reaction?

Ans:- An increase in temperature increases the rate of almost all the chemical reactions and a decrease in temperature decreases the rate. The effect is observed in both the exothermic and endothermic reactions. Generally the reaction rate for most of the chemical reactions becomes almost double, for every 10^0C rise in the temperature.

29. How does the nature of the reactants and the products influence the rate of a reaction?

Ans:- A chemical reaction involves the breaking of old bonds and formation of the new bonds. The reactivity of the substance can, therefore, be related to the ease with which the specific bonds are broken or formed and the number of such bonds involved.

Eg:- The oxidation of nitric oxide to nitrogen dioxide takes place rapidly while the oxidation of carbon monoxide to carbon dioxide takes place slowly.

$$2NO + O_2 \rightarrow 2NO_2 \quad (fast)$$

$$2CO + O_2 \rightarrow 2CO_2 \quad (slow)$$

30. How does the surface area influence the rate of a reaction? Explain with an example.

Ans:- The larger the surface area of the reactants, the faster is the rate of the reaction.

Eg:- The log of wood burns slowly but if it is cut into small wooden chips, the burning takes place rapidly.

This is due to the fact that the total surface area of the smaller particles is greater than the large particles and this permits more molecules of the reactants to come in contact and form products.

31. How does the Intensity of light in the case of photosensitive reactions influence the rate of a reaction?

Ans:- The rate of the chemical reaction is considerably increased by the use of certain radiations. The photons of these radiations having frequencies (ν) possess sufficient energies (E= h ν) to break certain bonds in the reactants. *Eg:-* The reaction of hydrogen and chlorine takes place very slowly in the absence of light. However in the presence of light, the reaction takes place very rapidly.

32. What is meant by the order of the reaction?


Ans:- The sum of the powers to which the concentration of the terms are raised in the rate law expression is known as the order of the reaction.


Eg:- The rate of the reaction $aA + bB + cC \rightarrow products$; is given by the rate law as

$$Rate = -\frac{dx}{dt} = k[A]^p[B]^q[C]^r$$

then the order of the reaction, n, is $n = p + q + r$. Where, p, q, r are the orders with respect to individual reactants and overall order of the reaction is the sum of these exponents that is, $p + q + r$. The order of the reaction cannot be directly obtained from the balanced chemical equation. It is always obtained from the experimentally determined rate equation.

33. What is first order reaction? (Contd.......)





(1) ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಶೀಲಹಳ್ಳಿ ಸಮೀಪದ ಕೃಷ್ಣಾ ನದಿ ಸೇತುವೆ ಮುಳುಗಡೆಯಾಗಿದೆ –ಪ್ರಜಾವಾಣಿ ಚಿತ್ರ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ ಅಣೆಕಟ್ಟೆಯಲ್ಲಿ ಬುಧವಾರ ನೀರಿನ ಮಟ್ಟ 124.80 ಅಡಿಗೆ (ಗರಿಷ್ಠ ಮಟ್ಟ) ತಲುಪಿದ್ದು, ಭರ್ತಿಯಾಗಿದೆ (2) –ಪ್ರಜಾವಾಣಿ ಚಿತ್ರ: ಗಣಂಗೂರು ನಂಜೇಗೌಡ

ಆಲಮಟ್ಟಿ: 2.25 ಲಕ್ಷ ಕ್ಯುಸೆಕ್ ನೀರು ನದಿಗೆ • ತುಂಗಭದ್ರಾ: 10 ಕ್ರಸ್ಟ್‌ಗೇಟ್‌ಗಳಿಂದ ನೀರು ಬಿಡುಗಡೆ

ಧಾರಾಕಾರ ಮಳೆ; ಜಲಾಶಯಗಳು ಭರ್ತಿ

ಪ್ರಜಾವಾಣಿ ವಾರ್ತೆ

ಬೆಳಗಾವಿ/ಹಾವೇರಿ/ವಿಜಯಪುರ/ಕಾರವಾರ/ ಹೊಸಪೇಟೆ (ವಿಜಯನಗರ): ಬೆಳಗಾವಿ, ಹಾವೇರಿ, ವಿಜಯನಗರ, ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಬುಧವಾರವೂ ಧಾರಾಕಾರ ಮಳೆಯಾಯಿತು. ಬಹುತೇಕ ಕಡೆ ಪ್ರವಾಹ ಪರಿಸ್ಥಿತಿ ಇತ್ತು.

ಬೆಳಗಾವಿ ನಗರ ಸೇರಿ ತಾಲ್ಲೂಕಿನಾದ್ಯಂತ ಮಳೆಯಾಯಿತು. ನಗರದ ಹೊರವಲಯದ ಬಸವನ ಕುಡಚಿಯ ಹಲವು ಮನೆಗಳು, ಅಂಗಡಿಗಳಿಗೆ ನೀರು ನುಗ್ಗಿ, ಜನರು ಪರದಾಡಿದರು. ಕೆಎಲ್‌ಇ ಸಂಕಲ್ಪ ವೆಲ್‌ನೆಸ್ ಸೆಂಟರ್‌ಗೆ ನೀರು ನುಗ್ಗಿ ಔಷಧಿ ಮತ್ತು ವೈದ್ಯಕೀಯ ಪರಿಕರಗಳಿಗೆ ಹಾನಿಯಾಯಿತು. ನೀರು ಹೊರಹಾಕಲು ಪಾಲಿಕೆಯವರು ಹರಸಾಹಸಪಟ್ಟರು.

ಮಹಾರಾಷ್ಟ್ರ ಹಾಗೂ ಚಿಕ್ಕೋಡಿ ಉಪ ವಿಭಾಗ ವ್ಯಾಪ್ತಿಯಲ್ಲಿ ಬುಧವಾರ ಮಳೆ ಪ್ರಮಾಣ ಮತ್ತೆ ಹೆಚ್ಚಳವಾಗಿದೆ. ಕೊಯ್ನಾದಲ್ಲಿ 16.2 ಸೆಂ.ಮೀ., ವಾರಣಾದಲ್ಲಿ 16.8 ಸೆಂ.ಮೀ., ಕಾಳಮ್ಮವಾಡಿಯಲ್ಲಿ 8 ಸೆಂ.ಮೀ., ಮಹಾಬಳೇಶ್ವರದಲ್ಲಿ 15.7 ಸೆಂ.ಮೀ., ನವಜಾದಲ್ಲಿ 15.7 ಸೆಂ.ಮೀ., ರಾಧಾನಗರಿಯಲ್ಲಿ 12 ಸೆಂ.ಮೀ. ಮಳೆ ದಾಖಲಾಗಿದೆ. ಕೃಷ್ಣಾ ಹಾಗೂ ಉಪ ನದಿಗಳಲ್ಲಿ ನೀರಿನ ಹರಿವಿನ ಮಟ್ಟ ಇನ್ನೂ ಹೆಚ್ಚಾಗಬಹುದು. ದೂಧಗಂಗಾ ನದಿಗೆ ಕಲ್ಲೋಳ ಬಳಿ 32,730 ಕ್ಯುಸೆಕ್ ನೀರು ಹರಿಯುತ್ತಿದೆ. ದೂಧಗಂಗಾ ನದಿಯ 3 ಹಾಗೂ ವೇದಗಂಗಾ ನದಿಯ 3 ಸೇತುವೆಗಳು ಒಂದು ವಾರದಿಂದ ಮುಳುಗಿವೆ.

ಘಟಪ್ರಭಾ ನದಿಗೆ ನಿರ್ಮಿಸಲಾದ ಇಲ್ಲಿನ ರಾಜಾ ಲಖಮಗೌಡ ಜಲಾಶಯದಿಂದ (ಹಿಡಕಲ್ ಅಣೆಕಟ್ಟು) ಎಲ್ಲ ಹತ್ತು ಕ್ರೆಸ್ಟ್ ಗೇಟ್‌ಗಳನ್ನು ತೆರೆದು 10 ಸಾವಿರ ಕ್ಯುಸೆಕ್ ನೀರು ನದಿಗೆ ಬಿಡಲಾಯಿತು.



ತುಂಗಭದ್ರಾ ಅಣೆಕಟ್ಟೆ ಬಹುತೇಕ ತುಂಬಿರುವುದರಿಂದ ಬುಧವಾರ ನೀರು ಹರಿಸಲಾಯಿತು –ಪ್ರಜಾವಾಣಿ ಚಿತ್ರ/ ಲವ ಕೆ.

'ಮಹಾರಾಷ್ಟ್ರ ಹಾಗೂ ಘಟಪ್ರಭಾ ಜಲಾನಯನ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಮುಂದುವರಿದಿದೆ. ಒಳ ಹರಿವು ಹೆಚ್ಚಾದರೆ ನದಿಗೆ ನೀರು ಹರಿಸುವ ಪ್ರಮಾಣ 20 ಸಾವಿರ ಕ್ಯುಸೆಕ್‌ಗೆ ಏರಿಸಲಾಗುವುದು' ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅರವಿಂದ ಜಮಖಂಡಿ 'ಪ್ರಜಾವಾಣಿ'ಗೆ ತಿಳಿಸಿದರು.

ಮನೆಗಳಿಗೆ ಹಾನಿ: ಹಾವೇರಿ ಜಿಲ್ಲೆಯಲ್ಲಿ ನಿರಂತರ ಮಳೆಯಿಂದ 610 ಮನೆಗಳಿಗೆ ಹಾನಿಯಾಗಿದೆ. ಜಿಲ್ಲೆಯ ಹಾನಗಲ್, ಹಾವೇರಿ, ರಾಣೆಬೆನ್ನೂರು, ಹಿರೇಕೆರೂರು, ಬ್ಯಾಡಗಿ, ರಟ್ಟೀಹಳ್ಳಿ, ಶಿಗ್ಗಾವಿ ಹಾಗೂ ಸವಣೂರು ತಾಲ್ಲೂಕಿನಲ್ಲಿ ಮಳೆಯಾಗಿದೆ. ಜಿಲ್ಲೆಯಲ್ಲಿ ತುಂಬಿ ಹರಿಯುತ್ತಿದ್ದ ತುಂಗಭದ್ರಾ ಹಾಗೂ ವರದಾ ನದಿಗಳ ನೀರಿನ ಮಟ್ಟ ಕೊಂಚ ಇಳಿಕೆಯಾಗಿದೆ.

ಆತಂಕದಲ್ಲಿ ಕೃಷ್ಣಾ ತೀರದ ಗ್ರಾಮಸ್ಥರು: ಬೆಳಗಾವಿ, ಜಮಖಂಡಿ ಹಾಗೂ ಮಹಾರಾಷ್ಟ್ರದ ಕೃಷ್ಣಾ ತೀರದಲ್ಲಿ ಮಹಾಪುರ ಸೃಷ್ಟಿಯಾಗುತ್ತಿದ್ದು, ಮುಂಜಾಗ್ರತಾ ಕ್ರಮವಾಗಿ ಆಲಮಟ್ಟಿ ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆ ಮಾಡಲು ಬುಧವಾರ ರಾತ್ರಿ 7ರಿಂದ ಹೊರಹರಿವನ್ನು 2.25 ಲಕ್ಷ ಕ್ಯುಸೆಕ್‌ಗೆ ಹೆಚ್ಚಿಸಲಾಗಿದೆ.

ಜಲಾಶಯದ 26 ಗೇಟ್‌ಗಳಿಂದ ನೀರು ಬಿಡಲಾಗುತ್ತಿದೆ. ಆಲಮಟ್ಟಿ ಜಲಾಶಯದ ಮುಂಭಾಗದ ಕೃಷ್ಣಾ ತೀರದ ಅರಳದಿನ್ನಿ, ಯಲಗೂರು, ಕಾಶಿನಕುಂಟಿ, ಯಲ್ಲಮ್ಮನಬೂದಿಹಾಳ, ಮಸೂತಿ ಗ್ರಾಮಗಳ ಜಮೀನಿಗೆ ನೀರು ನುಗ್ಗುವ ಆತಂಕ ಎದುರಾಗಿದೆ.

ತುಂಗಭದ್ರಾ ಜಲಾಶಯದ ನೀರು ಬಿಡುಗಡೆ: ತುಂಗಭದ್ರಾ ಅಣೆಕಟ್ಟೆ ತುಂಬಲು ಒಂದೂವರೆ ಅಡಿಯಷ್ಟೇ ಬಾಕಿ ಇದೆ, ಬುಧವಾರ ಸಂಜೆ 10 ಕ್ರಸ್ಟ್‌ಗೇಟ್‌ಗಳನ್ನು ತೆರೆದು ನೀರನ್ನು ನದಿಗೆ ಬಿಡಲಾಯಿತು.

'105 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ 98.06 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. 87,700 ಕ್ಯುಸೆಕ್‌ನಷ್ಟು ಒಳಹರಿವು ಇರುವುದರಿಂದ ಗುರುವಾರ ಬೆಳಿಗ್ಗೆ ವೇಳೆಗೆ ಜಲಾಶಯ ಭರ್ತಿಯಾಗುವ ನಿರೀಕ್ಷೆ ಇದೆ' ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

ಶೀಲಹಳ್ಳಿ ಸೇತುವೆ ಮುಳುಗಡೆ: ಲಿಂಗಸುಗೂರು (ರಾಯಚೂರು ವರದಿ) ನಾರಾಯಣಪುರದ ಬಸವಸಾಗರ ಜಲಾಶಯದಿಂದ ಹೆಚ್ಚುವರಿ ನೀರು ಕೃಷ್ಣಾ ನದಿಗೆ ಹರಿಸುತ್ತಿರುವುದರಿಂದ ಬುಧವಾರ ತಾಲ್ಲೂಕಿನ ಶೀಲಹಳ್ಳಿ ಸೇತುವೆ ಮುಳುಗಿದೆ.

ಮಂಗಳವಾರ ಮಧ್ಯರಾತ್ರಿಯಿಂದ 2.02 ಲಕ್ಷ ಕ್ಯುಸೆಕ್ ನೀರನ್ನು ಜಲಾಶಯದಿಂದ ಹರಿಬಿಡಲಾಗುತ್ತಿತ್ತು. ಬುಧವಾರ ರಾತ್ರಿ ನೀರಿನ ಹೊರಹರಿವಿನ ಪ್ರಮಾಣ 2.30 ಲಕ್ಷಕ್ಕೆ ಏರಿಕೆಯಾಗಿದೆ. ಶೀಲಹಳ್ಳಿ ಸೇತುವೆ ಮುಳುಗಡೆಯಾಗಿರುವುದರಿಂದ ಹಂಚಿನಾಳ, ಯಳಗುಂದಿ, ಯರಗೋಡಿ, ಕಡದರಗಡ್ಡಿ ನಡುಗಡ್ಡೆ ಗ್ರಾಮಗಳ ಜನರು 45 ಕಿ.ಮೀ. ಸುತ್ತು ಬಳಸಿ ತಾಲ್ಲೂಕು ಕೇಂದ್ರಕ್ಕೆ ಬರಬೇಕಾಗಿದೆ. ಶೀಲಹಳ್ಳಿ ಸೇತುವೆ ಮೇಲೆ ವಾಹನ, ಜನ ಸಂಚರಿಸದಂತೆ ತಹಶೀಲ್ದಾರ್ ಶಂಶಾಲಂ ಪೊಲೀಸ್ ಕಾವಲು ಹಾಕಿಸಿದ್ದಾರೆ.

ಪ್ರವಾಹ ಹೆಚ್ಚಿದ್ದರಿಂದ ಕೃಷ್ಣಾ ನದಿ ತಟದಲ್ಲಿನ ರೈತರ ಪಂಪ್‌ಸೆಟ್ ಹಾಗೂ ಪೈಪ್‌ಗಳು ಕೊಚ್ಚಿ ಹೋಗಿವೆ. ವಿದ್ಯುತ್ ಕಂಬಗಳು ವಾಲಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದೆ ಎಂದು ರೈತ ಮೌನೇಶ ಪೂಜಾರಿ ತಿಳಿಸಿದರು.

ಯರಗೋಡಿ ಗ್ರಾಮದಲ್ಲಿನ 15 ಗರ್ಭಿಣಿಯರು ಸುರಕ್ಷಿತ ಸ್ಥಳಕ್ಕೆ ಬರಲು ಒಪ್ಪುತ್ತಿಲ್ಲ. ಹೀಗಾಗಿ, ಜಿಲ್ಲಾ ಆರೋಗ್ಯ ಇಲಾಖೆಯ ಅಧಿಕಾರಿಗಳು ಗ್ರಾಮಕ್ಕೆ ಸಿಬ್ಬಂದಿ ನಿಯೋಜಿಸಿದ್ದಾರೆ. ಆಂಬುಲೆನ್ಸ್ ವ್ಯವಸ್ಥೆಯನ್ನೂ ಮಾಡಿದ್ದಾರೆ.

ಕಲಬುರಗಿ, ಬೀದರ್, ಯಾದಗಿರಿಯ ಹಲವೆಡೆ ದಿನವಿಡೀ ಜಿಟಿಜಿಟಿ ಮಳೆ ಸುರಿಯಿತು. ಬೀದರ್‌ನ ಔರಾದ್ ತಾಲ್ಲೂಕಿನಲ್ಲಿ ಆರು ಮನೆಗಳ ಗೋಡೆ ಕುಸಿದು ಬಿದ್ದಿವೆ.

ಗಾಳಿ ಅಬ್ಬರ: ಮರ ಬಿದ್ದು ಯುವಕ ಸಾವು

ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಗಾಳಿಯ ಅಬ್ಬರಕ್ಕೆ ಹಲವೆಡೆ ಮರಗಳು ಬಿದ್ದಿವೆ. ಯಲ್ಲಾಪುರ ತಾಲ್ಲೂಕಿನ ಮಾಳಕೊಪ್ಪ ಬಳಿ ಮರ ಬಿದ್ದು, ದ್ವಿಚಕ್ರ ವಾಹನ ಸವಾರ, ಕಬ್ಬಿನಗದ್ದೆ ಗ್ರಾಮದ ವಿನಯ ಗಾಡಿಗ (27) ಎಂಬುವರು ಮೃತಪಟ್ಟಿದ್ದಾರೆ.

ಹೊನ್ನಾವರ ತಾಲ್ಲೂಕಿನ ಹಳದಿಪುರದಲ್ಲಿ ಆಲದ ಮರ ಬಿದ್ದು ನಾಲ್ವರಿಗೆ ಗಾಯಗಳಾಗಿವೆ. ಕಾರವಾರ, ಶಿರಸಿ, ಸಿದ್ದಾಪುರ, ಕುಮಟಾ ಸೇರಿ ಹಲವೆಡೆ ಮರ ಬಿದ್ದು ವಿದ್ಯುತ್ ತಂತಿ, ಮನೆಯ ಗೋಡೆಗಳಿಗೆ ಹಾನಿ ಆಗಿದೆ.

ನೀರಿನಲ್ಲಿ ಕೊಚ್ಚಿ ಹೋದ ಯುವಕ

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಮಳಗಿ ಬಳಿ ಬುಧವಾರ ಧರ್ಮಾ ಜಲಾಶಯದ ವೀಕ್ಷಣೆಗೆಂದು ತೆರಳಿದ್ದ ಶ್ರೀಕಾಂತ (20) ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ.

'ತಾಲ್ಲೂಕಿನ ಮುಡಸಾಲಿ ಗ್ರಾಮದ ಎಂಟು ಮಂದಿ ಧರ್ಮಾ ಜಲಾಶಯಕ್ಕೆ ಬುಧವಾರ ಹೋಗಿದ್ದರು. ಅವರಲ್ಲಿ ಇಬ್ಬರು ಯುವಕರು ನೀರಿಗಿಳಿದಿದ್ದರು. ಒಬ್ಬರು ನೀರಿನ ಸೆಳೆತದಿಂದ ಪಾರಾಗಿ ದಡ ಸೇರಿದರೆ, ಶ್ರೀಕಾಂತ ನೀರಿನಲ್ಲಿ ಕೊಚ್ಚಿ ಹೋದರು. ಅವರಿಗಾಗಿ ಶೋಧ ಮುಂದುವರಿದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕುರಿಗಾಹಿಯ ಶವ ಪತ್ತೆ: (ವಿಜಯಪುರ ವರದಿ) 'ನಾರಾಯಣ ಪುರ ಎಡದಂಡೆ ಕಾಲುವೆಗೆ ಬಿದ್ದಿದ್ದ ಕುರಿಮರಿ ರಕ್ಷಣೆಗೆ ಪ್ರಯತ್ನಿಸಿ ನೀರಿನಲ್ಲಿ ಕೊಚ್ಚಿ ಹೋಗಿದ್ದ ಮುದ್ದೇಬಿಹಾಳ ತಾಲ್ಲೂಕು ನಾಗಬೇನಾಳ ಗ್ರಾಮದ ಕುರಿಗಾಹಿ ಮಂಜುನಾಥ ಮಾದರ (28) ಅವರ ಮೃತದೇಹ ಯಾದಗಿರಿ ಜಿಲ್ಲೆ ಹುಣಸಗಿ ತಾಲ್ಲೂಕಿನ ಹಗರಟಗಿ ಹೊರಟ್ಟಿ ಗ್ರಾಮದ ಬಳಿ ಪತ್ತೆಯಾಗಿದೆ' ಎಂದು ನಾರಾಯಣಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

2 ವರ್ಷಗಳ ನಂತರ ಕೆಆರ್‌ಎಸ್ ಭರ್ತಿ

ಪ್ರಜಾವಾಣಿ ವಾರ್ತೆ

ಮಂಡ್ಯ: ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ ಅಣೆಕಟ್ಟೆಯು ಎರಡು ವರ್ಷಗಳ ಬಳಿಕ ಬುಧವಾರ ಸಂಜೆ ವೇಳೆಗೆ ಭರ್ತಿಯಾಗಿದೆ.

ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗೆ ನೀರು ತಲುಪಿದೆ. ಜಲಾಶಯದಲ್ಲಿ ಪ್ರಸಕ್ತ 49.452 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಅದರಲ್ಲಿ 41.073 ಟಿಎಂಸಿ ಅಡಿ ಮಾತ್ರ ಬಳಕೆ ಮಾಡಬಹುದಾಗಿದ್ದು, 8 ಟಿಎಂಸಿ ಅಡಿ ನೀರು 'ಡೆಡ್ ಸ್ಟೋರೇಜ್' ಎಂದು ಪರಿಗಣಿಸಲಾಗುತ್ತದೆ. ಕಳೆದ ವರ್ಷ ಭೀಕರ ಬರಗಾಲದಿಂದ ಅಣೆಕಟ್ಟೆ ತುಂಬಿರಲಿಲ್ಲ. ಹೀಗಾಗಿ ರೈತರಿಗೆ ಬೇಸಿಗೆ ಬೆಳೆ ಬೆಳೆಯಲು ನಾಲೆಗಳಿಗೆ ನೀರು ಬಿಟ್ಟಿರಲಿಲ್ಲ. ಇರುವ ನೀರನ್ನು ಕುಡಿಯಲು ಮತ್ತು ತಮಿಳುನಾಡಿನ ಪಾಲು ಕೊಡುವುದಕ್ಕೆ ಬಳಸಲಾಗಿತ್ತು. ಈ ಬಾರಿ ಅಣೆಕಟ್ಟೆ ತುಂಬಿರುವುದರಿಂದ ಜಿಲ್ಲೆಯ ರೈತರು ಸಂತಸ ವ್ಯಕ್ತಪಡಿಸಿ, ಕಾವೇರಿ ಮಾತೆಯ ಮೂರ್ತಿಗೆ ಪೂಜೆ ಸಲ್ಲಿಸಿದ್ದಾರೆ.

ಜಲಾಶಯಕ್ಕೆ ಬುಧವಾರ 41,099 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಅಣೆಕಟ್ಟೆ ತುಂಬಿರುವುದರಿಂದ ಅಷ್ಟೇ ಪ್ರಮಾಣದ ನೀರನ್ನು ಕಾವೇರಿ ನದಿಗೆ ಹರಿಸಲಾಗುತ್ತಿದೆ.

ಪ್ರವಾಹ ಮುನ್ನೆಚ್ಚರಿಕೆ: ಕೃಷ್ಣರಾಜ ಸಾಗರಜಲಾನಯನ ಪ್ರದೇಶದಲ್ಲಿ ಮಳೆಯಾಗುತ್ತಿ ರುವುದರಿಂದ, ಜಲಾಶಯಕ್ಕೆ ಹೆಚ್ಚಿನ ನೀರು ಬರುತ್ತಿದ್ದು, ಸುಮಾರು 50,000 ಕ್ಯುಸೆಕ್ ನೀರನ್ನು ಕಾವೇರಿ ನದಿಗೆ ಬಿಡಲಾಗುವುದು. ಈ ಪ್ರಮಾಣವು ಹೆಚ್ಚಾಗುವ ಸಾಧ್ಯತೆಯೂ ಇದೆ.

'ಕಾವೇರಿ ನದಿಯ ತಗ್ಗು ಪ್ರದೇಶದಲ್ಲಿರುವ ಮತ್ತು ನದಿಯ ಎರಡೂ ದಂಡೆಗಳಲ್ಲಿರುವ ಸಾರ್ವಜನಿಕರು ಆಸ್ತಿ ಹಾಗೂ ಜಾನುವಾರು ರಕ್ಷಣೆಗೆ ಸೂಕ್ತ ಮುಂಜಾಗ್ರತೆ ಕೈಗೊಂಡು ಸುರಕ್ಷಿತ ಸ್ಥಳಗಳಿಗೆ ತೆರಳಬೇಕು' ಎಂದು ಕೃಷ್ಣರಾಜಸಾಗರದ ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಎಂಜಿನಿಯರ್ ಜಯಂತ್ ತಿಳಿಸಿದ್ದಾರೆ.

ತಡೆಗೋಡೆ ಕುಸಿತ

ಶ್ರೀರಂಗಪಟ್ಟಣ: ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆಯಿಂದ ನದಿಗೆ ನೀರು ಹರಿಯುವ ಇಳಿಜಾರಿನಲ್ಲಿ, ನಗುವನ ತೋಟದ ತಡೆಗೋಡೆ ನೀರಿನ ರಭಸಕ್ಕೆ ಕೊಚ್ಚಿ ಹೋಗಿದೆ.

ಜಲಾಶಯದ 103 ಅಡಿ ಎತ್ತರದ ಗೇಟ್‌ಗಳ ಮೂಲಕ ಮೂರು ದಿನಗಳ ಹಿಂದೆ ನದಿಗೆ 52 ಸಾವಿರ ಕ್ಯುಸೆಕ್ ನೀರನ್ನು ಹರಿಸಿದಾಗ ಸುಮಾರು 10 ಅಡಿ ಎತ್ತರದ ರಕ್ಷಣಾ ಗೋಡೆ 10 ಮೀಟರ್ ಉದ್ದದಷ್ಟು ಕುಸಿದಿತ್ತು. ನದಿಗೆ ನೀರು ಹರಿಸಲು ಇರುವ ಎರಡು ಇಳಿಜಾರುಗಳ ನಡುವಿನ ತೋಟಗಾರಿಕೆ ಇಲಾಖೆಗೆ ಸೇರಿದ ನಡುಗಡ್ಡೆಯ ತಡೆಗೋಡೆಯ ಕಲ್ಲುಗಳು ಜಾರಿ ಪ್ರವಾಹದಲ್ಲಿ ಕೊಚ್ಚಿ ಹೋಗಿವೆ.

'ರಕ್ಷಣಾ ಗೋಡೆ ಪುನರ್ ನಿರ್ಮಿಸಲು ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಎಂಜಿನಿಯರ್‌ಗೆ ಪತ್ರ ಬರೆಯಲಾಗಿದೆ' ಎಂದು ಕೆ.ಆರ್.ಎಸ್ ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕಿ ಸೌಮ್ಯ ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	41,099	41,099
ಹಾರಂಗಿ	2,859	2,856.99	100.4	400
ಕಬಿನಿ	2,284.00	2,283.25	14,912	12,000
ಹೇಮಾವತಿ	2,922	2,921.02	23,363	22,532
ಲಿಂಗನಮಕ್ಕಿ	1,819	1,801	58,619	1,892.4
ಸೂಪಾ (ಮೀ)	564	546.47	42,448	--
ಮಾಣಿ	595	582.92	4,881	-
ತುಂಗಭದ್ರಾ	1,633	1,631.28	87,700	24,176
ಮಲಪ್ರಭಾ	2,079.50	2,066	16,386	194
ಘಟಪ್ರಭಾ	2,175	2,165	31,153	2,536
ಭದ್ರಾ	186	169.5	15,383	197
ಆಲಮಟ್ಟಿ (ಮೀ)	519.6	517.58	1,59,812	2,00,000
ನಾರಾಯಣಪುರ (ಮೀ)	492.25	491.4	2,25,000	2,30,000

* ನೆಲಮಟ್ಟದಿಂದ

ಹಾಸನ, ಕೊಡಗಿನಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯಲ್ಲಿ ಬುಧವಾರ ಮತ್ತೆ ಮಳೆಯ ಆರ್ಭಟ ಹೆಚ್ಚಾಗಿದ್ದು, ನಗರದ ಜವೇನಹಳ್ಳಿ ಮಠದ ಕಾಂಪೌಂಡ್ ಮೇಲೆ ಬೃಹತ್ ಬನ್ನಿ ಮರ ಉರುಳಿ ಬಿದ್ದಿದೆ.

ಹಾಸನ, ಸಕಲೇಶಪುರ, ಆಲೂರು, ಬೇಲೂರು ಭಾಗದಲ್ಲಿ ಮಳೆ ಹೆಚ್ಚಾಗಿದೆ. ಅರಕಲಗೂಡು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹತ್ತು ಮನೆಗಳ ಗೋಡೆಗಳು ಕುಸಿದಿವೆ.

ಹೆತ್ತೂರು ಸಮೀಪದ ಐಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರಗಳ್ಳಿ– ಚಿಕ್ಕದೂಂದು ಸಮೀಪ ರಸ್ತೆಗೆ ಮರ ಬಿದ್ದು ಕೆಲಕಾಲ ಸಂಚಾರಕ್ಕೆ ಅಡ್ಡಿಯಾಯಿತು. ಹೆತ್ತೂರು ಸಮೀಪದ ಬಾಚ್ಚಿಹಳ್ಳಿಯ ಕಾಫಿ ತೋಟದಲ್ಲಿ ಭೂ ಕುಸಿತ ಉಂಟಾಗಿದೆ.

ಹೇಮಾವತಿ ಜಲಾಶಯ ಭರ್ತಿಗೆ ಇನ್ನೊಂದು ಅಡಿ ಬಾಕಿ ಇದೆ.

40 ಶಾಲೆಗಳಿಗೆ ರಜೆ

ಮಡಿಕೇರಿ: ಕೊಡಗು ಜಿಲ್ಲೆಯ ಸೋಮವಾರಪೇಟೆ ಭಾಗದಲ್ಲಿ ಬಿರುಸಿನ ಮಳೆ ಬುಧವಾರವೂ ಮುಂದುವರಿದಿದೆ.

ಮಳೆಯಿಂದ ಕುಟ್ಟ-ಮಡಿಕೇರಿ ರಸ್ತೆಯ ಒಂದು ಪಾರ್ಶ್ವ ಪೊನ್ನಂಪೇಟೆಯ ಸಮೀಪ ಕುಸಿದಿದೆ. ಮಳೆ ಬಿರುಸಾಗಿರುವುದರಿಂದ ಪೊನ್ನಂಪೇಟೆ ತಾಲ್ಲೂಕಿನ ಕುಟ್ಟ ಮತ್ತು ಟಿ.ಶೆಟ್ಟಿಗೇರಿ ವ್ಯಾಪ್ತಿಯ 40 ಶಾಲೆಗಳಿಗೆ ಜುಲೈ 25ರಂದು ರಜೆ ಘೋಷಿಸಲಾಗಿದೆ.

ಸೋಮವಾರಪೇಟೆ ಹಾಗೂ ಕುಶಾಲನಗರ ತಾಲ್ಲೂಕುಗಳ ಶಾಲಾ, ಕಾಲೇಜುಗಳಿಗೆ ಬುಧವಾರ ರಜೆ ನೀಡಲಾಗಿತ್ತು.

ಲಿಂಗನಮಕ್ಕಿ: ಯಾವುದೇ ಕ್ಷಣ ನದಿಗೆ ನೀರು

ಪ್ರಜಾವಾಣಿ ವಾರ್ತೆ

ಕಾರ್ಗಲ್: ಶೇ65ರಷ್ಟು ಭರ್ತಿಯಾಗಿರುವ ಲಿಂಗನಮಕ್ಕಿ ಜಲಾಶಯದಿಂದ ಯಾವುದೇ ಕ್ಷಣದಲ್ಲಿ ನೀರನ್ನು ಹೊರಬಿಡುವ ಸಾಧ್ಯತೆ ಇದ್ದು, ಜಲಾಶಯದ ಮುಂಭಾಗದ ಗ್ರಾಮಗಳ ಜನತೆ ನದಿಗೆ ಇಳಿಯಬಾರದು ಎಂದು ಕರ್ನಾಟಕ ಕೆಪಿಸಿ ಎಚ್ಚರಿಕೆ ನೀಡಿದೆ.

1,819 ಅಡಿ ಗರಿಷ್ಠ ಪ್ರಮಾಣದ ಜಲಾಶಯದ ನೀರಿನ ಮಟ್ಟ ಬುಧವಾರ 1801.60 ಅಡಿ ತಲುಪಿದ್ದು, ಒಟ್ಟು ನೀರಿನ ಸಂಗ್ರಹ ಸಾಮರ್ಥ್ಯದ ಶೇ 65ರಷ್ಟಾಗಿದೆ. ಸದ್ಯ ಒಳಹರಿವು 58,000 ಕ್ಯುಸೆಕ್‌ಗಿಂತಲೂ ಹೆಚ್ಚು ಒಳಹರಿವು ದಾಖಲಾಗಿದೆ. ದಿನೇದಿನೇ ಜಲಾಶಯದಲ್ಲಿ ಸಂಗ್ರಹವಾಗುವ ನೀರಿನ ಪ್ರಮಾಣದಲ್ಲಿ ಏರಿಕೆ ಉಂಟಾಗುತ್ತಿದೆ. ಯಾವುದೇ ಕ್ಷಣದಲ್ಲಿ ನೀರನ್ನು ನದಿಗೆ ಹರಿಸುವ ಸಾಧ್ಯತೆಯಿದೆ ಎಂದು ಕೆಪಿಸಿ ಕಾರ್ಯನಿರ್ವಾಹಕ ಎಂಜಿನಿಯರ್ ಆರ್. ಶಿವಕುಮಾರ್ ಹೇಳಿದ್ದಾರೆ.



ಕಾರ್ಗಲ್ ಸಮೀಪದ ಲಿಂಗನಮಕ್ಕಿ ಅಣೆಕಟ್ಟೆಯಲ್ಲಿ 1801.60 ಅಡಿ ನೀರು ಸಂಗ್ರಹವಾಗಿರುವುದು

ಶರಾವತಿ ನದಿ ದಂಡೆಯ ನಿವಾಸಿಗಳು ನೀರಿಗಿಳಿದು ಮೀನು ಹಿಡಿಯುವುದು, ಜಾನುವಾರುಗಳನ್ನು ಹೊಳೆದಂಡೆಗೆ ಬಿಡುವುದು, ಅನಗತ್ಯ ನೀರಿಗಿಳಿಯುವುದನ್ನು ಮಾಡಬಾರದು. ಪ್ರವಾಹ ಸ್ಥಿತಿ ತಲೆದೋರಿದಲ್ಲಿ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಗೊಳ್ಳಲು ಸಿದ್ಧತೆ ಮಾಡಿಕೊಳ್ಳಬೇಕು' ಎಂದು ಅವರು ಎಚ್ಚರಿಸಿದ್ದಾರೆ.

1983ರಲ್ಲಿ ಜಲಾಶಯಕ್ಕೆ ಏಕಾಏಕಿ ನೀರಿನ ಹರಿವು ಹೆಚ್ಚಾಗಿದ್ದರಿಂದ ಯಾವುದೇ ಮುನ್ಸೂಚನೆ ನೀಡದೇ ನದಿಗೆ ನೀರು ಹರಿಸಲಾಗಿತ್ತು. ನದಿ ಪಾತ್ರದ ಕಾರ್ಗಲ್ ಭಾಗದ ಮರಳುಕೋರೆ, ಗಿಳಾಲಗುಂಡಿ, ಜೋಗ್ ಸೀತಾಕಟ್ಟೆ ಪ್ರದೇಶ, ಕಾರವಾರ ಜಿಲ್ಲೆಯ ಗೇರುಸೊಪ್ಪ, ಹೊನ್ನಾವರ ಸೇರಿದಂತೆ ಅನೇಕ ಜನವಸತಿ ಪ್ರದೇಶಗಳು ನೀರಿನಲ್ಲಿ ಕೊಚ್ಚಿ ಹೋಗಿದ್ದವು. ಈ ಹಿನ್ನೆಲೆಯಲ್ಲಿ ರಚನೆಯಾಗಿದ್ದ ತನಿಖಾ ಆಯೋಗ ಎಲ್ಲಾ ಆಯಾಮಗಳನ್ನು ಪರಿಶೀಲಿಸಿ ಲಿಂಗನಮಕ್ಕಿ ಕೆಳದಂಡೆ ಪ್ರದೇಶಗಳಲ್ಲಿ 3 ಸುತ್ತಿನ ಎಚ್ಚರಿಕೆ ಸಂದೇಶವನ್ನು ನೀಡಬೇಕು ಎಂದು ಆದೇಶಿಸಿತ್ತು. ಇದೀಗ ಕೆಪಿಸಿ ಮೊದಲ ಹಂತದ ಎಚ್ಚರಿಕೆ ನೀಡಿದೆ.

8 ಜಿಲ್ಲೆಗಳಿಗೆ ಭಾರಿ ಮಳೆ ಮುನ್ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವೆಡೆ ಗುರುವಾರವೂ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಕರಾವಳಿಯ ಉತ್ತರ ಕನ್ನಡಕ್ಕೆ 'ಆರೆಂಜ್ ಅಲರ್ಟ್' ಹಾಗೂ ಏಳು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ ಜಿಲ್ಲೆಯ ಕೆಲ ಸ್ಥಳಗಳಲ್ಲಿ ನಿರಂತರ ಗಾಳಿಯೊಂದಿಗೆ ಧಾರಾಕಾರ ಮಳೆಯಾಗುವ ಸಂಭವವಿದೆ. ಕಲಬುರಗಿ, ವಿಜಯಪುರ, ಬೆಳಗಾವಿ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿಯೂ ಕೆಲವೆಡೆ ಭಾರಿ ಮಳೆಯೊಂದಿಗೆ ಗಾಳಿಯ ವೇಗವು 40ರಿಂದ 50 ಕಿ.ಮೀ. ತಲುಪುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿ ಉದ್ದಕ್ಕೂ ಬಿರುಗಾಳಿಯಿಂದ ಕೂಡಿದ ಹವಾಮಾನ ಇರಲಿದೆ. ಗಂಟೆಗೆ 35 ಕಿ.ಮೀ.ಯಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ, ಮೀನುಗಾರರು ಎಚ್ಚರಿಕೆ ವಹಿಸಬೇಕು ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಗಾಳಿಯ ವೇಗವು 30 ಕಿ.ಮೀ.ಯಿಂದ 40 ಕಿ.ಮೀ. ತಲುಪುವ ಸಂಭವವಿದೆ ಎಂದು ತಿಳಿಸಿದೆ.

ಶುಕ್ರವಾರವೂ ಕರಾವಳಿ ಹಾಗೂ ಮಲೆನಾಡಿನ ಆರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದ್ದು, ಈ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ನಡುಗಡ್ಡೆಯಾದ ಜನವಸತಿ ಪ್ರದೇಶ

ಅಥಣಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಹುಲಗಬಾಳಿ ಗ್ರಾಮದ ವ್ಯಾಪ್ತಿಯ ಮಾಂಗ ಜನವಸತಿ ಪ್ರದೇಶವನ್ನು ಕೃಷ್ಣಾ ನದಿ ನೀರು ಸುತ್ತುವರಿದಿದ್ದು, 50 ಕುಟುಂಬಗಳು ನಡುಗಡ್ಡೆಯಲ್ಲಿ ಸಿಲುಕಿವೆ. ಅಲ್ಲಿನ ಜನ ಮತ್ತು ಜಾನುವಾರುಗಳನ್ನು ಬುಧವಾರ ಸಂಜೆ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು. ಸಂತ್ರಸ್ತರಿಗೆ ಹುಲುಗಬಾಳಿ ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾತ್ಕಾಲಿಕ ಪುನರ್ವಸತಿ ಕೇಂದ್ರ ಸ್ಥಾಪಿಸಲಾಗಿದೆ.

ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ ವೇಳೆ ಆಕ್ರೋಶಗೊಂಡ ಜನ, 'ನಮಗೆ ಶಾಶ್ವತ ನೆಲೆ ಕಲ್ಪಿಸಬೇಕು. ಪ್ರತಿ ವರ್ಷ ತಾತ್ಕಾಲಿಕ ಸ್ಥಳಾಂತರ ಬೇಡ. ಅಲ್ಲಿಯವರೆಗೆ ಸ್ಥಳದಿಂದ ಕದಲುವುದಿಲ್ಲ' ಎಂದು ಪಟ್ಟು ಹಿಡಿದರು. ಅವರನ್ನು ಸಮಾಧಾನಪಡಿಸಿದ ಅಧಿಕಾರಿಗಳು, 'ಸಮಸ್ಯೆಯನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗುವುದು. ಸದ್ಯ ಅಪಾಯದ ಮಟ್ಟವಿದೆ. ಸುರಕ್ಷಿತ ಸ್ಥಳದಲ್ಲಿ ವ್ಯವಸ್ಥೆ ಮಾಡಲಾಗಿದೆ' ಎಂದರು.



ಸುಭಾಷಿತ

ಹೃದಯಹೀನರ ಹತ್ತಿರ ಪ್ರೀತಿಯ ಭಿಕ್ಷೆ ಬೇಡಬೇಡ.

–ಗೌತಮ ಬುದ್ಧ

ಆರ್‌ಎಸ್‌ಎಸ್‌ನಲ್ಲಿ ಸರ್ಕಾರಿ ನೌಕರರು ರಾಜಕೀಯ ಸಂಬಂಧ ಸರಿಯಲ್ಲ

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಚಟುವಟಿಕೆಗಳಲ್ಲಿ ಕೇಂದ್ರ ಸರ್ಕಾರದ ನೌಕರರು ಭಾಗಿಯಾಗಲು ಇದ್ದ ನಿರ್ಬಂಧವನ್ನು ಕೇಂದ್ರ ಸರ್ಕಾರವು ತೆಗೆದುಹಾಕಿದೆ. ಸರ್ಕಾರದ ಈ ತೀರ್ಮಾನವನ್ನು ಬಿಜೆಪಿ ಹಾಗೂ ಅದರ ಸೈದ್ಧಾಂತಿಕ ಮಾರ್ಗದರ್ಶಿಯ ಸ್ಥಾನದಲ್ಲಿರುವ ಆರ್‌ಎಸ್‌ಎಸ್ ನಡುವಿನ ಸಂಬಂಧದಲ್ಲಿ ಉಂಟಾಗಿದ್ದ ಬಿಗುವಿನ ಸ್ಥಿತಿಯು ತಿಳಿಯಾಗುತ್ತಿದೆ ಎಂಬ ಮಾತುಗಳ ಹಿನ್ನೆಲೆಯಲ್ಲಿ ಗ್ರಹಿಸಬೇಕು, ಅರ್ಥ ಮಾಡಿಕೊಳ್ಳಬೇಕು. ಸರ್ಕಾರ ಕೈಗೊಂಡಿರುವ ಈ ತೀರ್ಮಾನವು ಆರ್‌ಎಸ್‌ಎಸ್ ನಾಯಕತ್ವವನ್ನು ಸಮಾಧಾನಪಡಿಸಲು ನಡೆಸಿರುವ ಒಂದು ಯತ್ನವಾಗಿರಬಹುದು. ಈಚಿನ ದಿನಗಳಲ್ಲಿ ಬಿಜೆಪಿ ಹಾಗೂ ಆರ್‌ಎಸ್‌ಎಸ್ ನಾಯಕತ್ವದ ಕಡೆಯಿಂದ ಬಂದ ಕೆಲವು ಮಾತುಗಳು ಎರಡೂ ಸಂಘಟನೆಗಳ ನಡುವೆ ಅಂತರ ಸೃಷ್ಟಿಯಾಗಿರುವುದನ್ನು ತೋರಿಸುತ್ತಿದ್ದವು. ಆರ್‌ಎಸ್‌ಎಸ್‌ನ ಸರಸಂಘಚಾಲಕ ಮೋಹನ್ ಭಾಗವತ್ ಸೇರಿದಂತೆ ಅದರ ಹಲವು ನಾಯಕರು, ಯಾರ ಹೆಸರನ್ನೂ ಉಲ್ಲೇಖಿಸದೆ ಬಿಜೆಪಿಯನ್ನು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿದ್ದರು. ಬಿಜೆಪಿಯು ಸ್ವತಂತ್ರವಾಗಿದೆ, ತನ್ನ ಚಟುವಟಿಕೆಗಳನ್ನು ತಾನೇ ನಿಭಾಯಿಸಿಕೊಳ್ಳುವ ಸಾಮರ್ಥ್ಯ ಹೊಂದಿದೆ ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹೇಳಿದ್ದರು. ಸಂಬಂಧವನ್ನು ಉತ್ತಮಪಡಿಸಿಕೊಳ್ಳುವ ಉದ್ದೇಶದಿಂದಲೇ ಈಗ ಕೇಂದ್ರವು ಈ ನಿರ್ಧಾರವನ್ನು ತೆಗೆದುಕೊಂಡಿರಬಹುದು. ಕೇಂದ್ರದಲ್ಲಿ ಬಿಜೆಪಿಯು 10 ವರ್ಷ ಬಹುಮತದೊಂದಿಗೆ ಆಡಳಿತ ನಡೆಸಿದ್ದಾಗ ಈ ತೀರ್ಮಾನವನ್ನು ತೆಗೆದುಕೊಳ್ಳದೆ, ಮಿತ್ರಪಕ್ಷಗಳ ಬೆಂಬಲದೊಂದಿಗೆ ಸರ್ಕಾರ ನಡೆಸಬೇಕಿರುವ ಸ್ಥಿತಿಯಲ್ಲಿ ಇರುವಾಗ ಇಂತಹ ತೀರ್ಮಾನ ಕೈಗೊಂಡಿರುವುದು ಈ ವಾದಕ್ಕೆ ಹೆಚ್ಚು ಬಲ ನೀಡುತ್ತದೆ. ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಕೇಂದ್ರ ಸರ್ಕಾರದ ನೌಕರರು ಭಾಗಿಯಾಗಬಾರದು ಎಂಬ ನಿರ್ಬಂಧವು 50ಕ್ಕೂ ಹೆಚ್ಚು ವರ್ಷಗಳಿಂದ ಜಾರಿಯಲ್ಲಿ ಇತ್ತು ಎಂಬುದು ಗಮನಾರ್ಹ.



ಸರ್ಕಾರದ ಈ ನಿರ್ಧಾರವು ದೇಶದ ಆಡಳಿತದಲ್ಲಿ ಅತ್ಯಂತ ಸ್ಥಿರವಾದ ವ್ಯವಸ್ಥೆಯೊಂದರ ಮೇಲೆ ನಿಯಂತ್ರಣ ಸಾಧಿಸುವ ಯತ್ನವೇ ಆಗಿದೆ

1966, 1970 ಹಾಗೂ 1980ರಲ್ಲಿ ಕೇಂದ್ರ ಸರ್ಕಾರವು ಹೊರಡಿಸಿದ್ದ ಸುತ್ತೋಲೆಗಳು, ಕೇಂದ್ರ ಸರ್ಕಾರದ ನೌಕರರು ಆರ್‌ಎಸ್‌ಎಸ್ ಮತ್ತು ಜಮಾತ್–ಎ–ಇಸ್ಲಾಮಿಯಂತಹ ಸಂಘಟನೆಗಳ ಸದಸ್ಯರಾಗುವುದನ್ನು ಅಥವಾ ಅವುಗಳ ಚಟುವಟಿಕೆಗಳಲ್ಲಿ ಭಾಗಿಯಾಗುವುದನ್ನು ನಿಷೇಧಿಸಿದ್ದವು. ಅಖಿಲ ಭಾರತ ಸೇವಾ ನಿಯಮಗಳಲ್ಲಿ ಕೂಡ ಈ ಮಾತು ಇತ್ತು. ಕೇಂದ್ರ ಸರ್ಕಾರದ ನೌಕರರು ರಾಜಕೀಯ ಪಕ್ಷಗಳನ್ನು ಅಥವಾ ರಾಜಕೀಯ ಪಕ್ಷಗಳ ಜೊತೆ ನಂಟು ಹೊಂದಿರುವ ಸಂಘಟನೆಗಳನ್ನು ಸೇರುವುದನ್ನು ಈ ನಿಯಮಗಳು ನಿಷೇಧಿಸಿವೆ. ಆದರೆ ಕೇಂದ್ರ ಸರ್ಕಾರವು ಜುಲೈ 9ರಂದು ಹೊರಡಿಸಿರುವ ಜ್ಞಾಪನಾಪತ್ರವು ಈ ಹಿಂದಿನ ಆದೇಶಗಳಲ್ಲಿ ಇದ್ದ 'ಆರ್‌ಎಸ್‌ಎಸ್' ಉಲ್ಲೇಖವನ್ನು ತೆಗೆದುಹಾಕಿದೆ. ಆ ಮೂಲಕ ಆರ್‌ಎಸ್‌ಎಸ್‌ನ ಚಟುವಟಿಕೆಗಳಲ್ಲಿ ಭಾಗಿಯಾಗುವುದಕ್ಕೆ ಇದ್ದ ನಿರ್ಬಂಧವನ್ನು ತೆರವು ಮಾಡಿದಂತಾಗಿದೆ. ಈ ವಿಚಾರವಾಗಿ ಕೆಲವು ರಾಜ್ಯಗಳ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳು ಇದ್ದವು. ರಾಜಕೀಯ ಹಾಗೂ ಆಡಳಿತವು ಪ್ರತ್ಯೇಕವಾಗಿ ಇರಬೇಕು, ಇವೆರಡೂ ಪರಸ್ಪರ ಪೂರಕವಾದರೂ ನೌಕರರು ಅವೆರಡನ್ನು ಪ್ರತ್ಯೇಕಿಸುವ ಗೆರೆಯನ್ನು ದಾಟಬಾರದು ಎಂಬ ತತ್ವದ ಆಧಾರದಲ್ಲಿ ಸರ್ಕಾರಿ ನೌಕರರ ಮೇಲೆ ಈ ನಿರ್ಬಂಧ ವಿಧಿಸಲಾಗಿತ್ತು. ಅಧಿಕಾರಿಶಾಹಿ ವ್ಯವಸ್ಥೆಯು ಶಾಶ್ವತ, ಅದು ಕಾಲಕಾಲಕ್ಕೆ ಬದಲಾಗುವುದಿಲ್ಲ. ಆದರೆ ಸರ್ಕಾರದ ನೇತೃತ್ವವನ್ನು ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆ ಪಕ್ಷಗಳು ವಹಿಸುತ್ತವೆ. ಹೀಗಾಗಿ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕಾರಿಗಳು ಯಾವುದೇ ಸರ್ಕಾರದ ಜೊತೆ ರಾಜಕೀಯವಾಗಿ ನಂಟು ಹೊಂದಿರುವುದು ಸರಿಯಲ್ಲ. ರಾಜಕಾರಣಿಗಳು ಹಾಗೂ ಅಧಿಕಾರಿಗಳು ನಿರ್ವಹಿಸಬೇಕಿರುವ ಜವಾಬ್ದಾರಿಗಳ ನಡುವೆ ಸ್ಪಷ್ಟ ವ್ಯತ್ಯಾಸ ಇದೆ.

ಬಿಜೆಪಿಯ ಪಾಲಿಗೆ ಆರ್‌ಎಸ್‌ಎಸ್ ಸೈದ್ಧಾಂತಿಕ ಮಾರ್ಗದರ್ಶಕ ಇದ್ದಂತೆ. ಆರ್‌ಎಸ್‌ಎಸ್ ಎಂಬುದು ಸಾಂಸ್ಕೃತಿಕ ಸಂಘಟನೆ ಮಾತ್ರ ಎಂಬ ವಾದವನ್ನು ಯಾರೂ ಒಪ್ಪುವುದಿಲ್ಲ. ಆರ್‌ಎಸ್‌ಎಸ್‌ಗೆ ಸ್ಪಷ್ಟವಾದ ರಾಜಕೀಯ ಉದ್ದೇಶಗಳು ಇವೆ, ಈ ಸಂಘಟನೆಯ ಪ್ರಮುಖ ರಾಜಕೀಯ ಅಂಗ ಬಿಜೆಪಿ. ಸರ್ಕಾರಿ ನೌಕರರಿಗೆ ಆರ್‌ಎಸ್‌ಎಸ್‌ನ ಚಟುವಟಿಕೆಗಳಲ್ಲಿ ಭಾಗಿಯಾಗಲು ಅವಕಾಶ ಕಲ್ಪಿಸುವುದು, ಅಧಿಕಾರಿಶಾಹಿಯು ತಟಸ್ಥವಾಗಿರಬೇಕು ಎಂಬ ತತ್ವಕ್ಕೆ ವಿರುದ್ಧ. ಈ ನಿರ್ಧಾರದ ಕಾರಣದಿಂದಾಗಿ ಅಧಿಕಾರಿಶಾಹಿಯಲ್ಲಿ ರಾಜಕೀಯ ಬೆರೆಯುತ್ತದೆ, ಸರ್ಕಾರದ ನೇತೃತ್ವ ವಹಿಸಿದ ರಾಜಕೀಯ ಪಕ್ಷ ಬದಲಾದಾಗ ಅಧಿಕಾರಿಗಳು ಹಾಗೂ ಸರ್ಕಾರದ ನಡುವೆ ಸಂಘರ್ಷ ಮೂಡಬಹುದು. ಸರ್ಕಾರದ ನಿರ್ಧಾರವು ದೇಶದ ಆಡಳಿತದಲ್ಲಿ ಅತ್ಯಂತ ಸ್ಥಿರವಾದ ವ್ಯವಸ್ಥೆಯೊಂದರ ಮೇಲೆ ನಿಯಂತ್ರಣ ಸಾಧಿಸುವ ಯತ್ನ. ದೇಶದ ಹಲವು ರಾಜ್ಯ ಸರ್ಕಾರಗಳು ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗಿಯಾಗಬಾರದು ಎಂದು ತಮ್ಮ ನೌಕರರ ಮೇಲೆ ವಿಧಿಸಿರುವ ನಿರ್ಬಂಧವು ಜಾರಿಯಲ್ಲಿ ಇನ್ನೂ ಇದೆ ಎಂಬುದು ಇಲ್ಲಿ ಉಲ್ಲೇಖಾರ್ಹ.

ಈ ಕಾರ್ಯಕ್ಕೆ ಪೂರಕವಾದ ತಂತ್ರಜ್ಞಾನ ರೂಪಿಸುವುದು ಆದ್ಯತೆಯಾಗಬೇಕು

ಸುಸ್ಥಿರ ಕೃಷಿಯಿಂದ ಮಾಲಿನ್ಯ ತಡೆ



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಮಾಧ್ಯಮಗಳಲ್ಲಿ ಒಂದೆರಡು ತಿಂಗಳ ಹಿಂದೆ ಪ್ರಕಟಗೊಂಡ ವರದಿಯೊಂದು ಐರ್ಲೆಂಡ್ ರೈತರನ್ನು ಕೆರಳಿಸಿತ್ತು. ಮುಂದಿನ ಮೂರು ವರ್ಷಗಳಲ್ಲಿ ಎರಡು ಲಕ್ಷ ಹಸುಗಳನ್ನು ವಧೆ ಮಾಡುವ ಉದ್ದೇಶದ ಆದೇಶವೊಂದನ್ನು ಹೊರಡಿಸಲು ಸರ್ಕಾರವು ಗುಟ್ಟಾಗಿ ಮಾಡಿಕೊಂಡ ತಯಾರಿಯ ಸುದ್ದಿಯು ಮಾಧ್ಯಮಗಳಿಗೆ ಸೋರಿಕೆ ಆಗಿಬಿಟ್ಟಿತ್ತು.

ವಧೆಗೆ ಒಳಗಾಗುವ ಹಸುಗಳ ಪರಿಹಾರಾರ್ಥವಾಗಿ ದೊಡ್ಡ ಮಟ್ಟದ ಹಣ ನೀಡುವುದಾಗಿ ಸರ್ಕಾರವು ರೈತರಿಗೆ ಭರವಸೆ ನೀಡುವುದರಲ್ಲಿತ್ತು. ಜಾನುವಾರು ವಧೆಯ ಮಾಹಿತಿ ಸೋರಿಕೆಯಾಗಿ ಜನರಿಗೆ ತಿಳಿದದ್ದೇ ತಡ, ಭಾರಿ ಪ್ರತಿಭಟನೆ ವ್ಯಕ್ತವಾಯಿತು. ಜನರ ಆಕ್ರೋಶಕ್ಕೆ ಮಣಿದ ಸರ್ಕಾರ ಸದ್ಯಕ್ಕೆ ತನ್ನ ನಿರ್ಧಾರದಿಂದ ಹಿಂದೆ ಸರಿದಿದೆ. 'ನಾವಿನ್ನೂ ಲೆಕ್ಕ ಹಾಕುತ್ತಿದ್ದೇವೆ. ವಧಿಸುತ್ತೇವೆ ಎಂದು ಎಲ್ಲಿ ಆದೇಶ ಮಾಡಿದ್ದೇವೆ? ಯಾಕೀ ಪ್ರತಿಭಟನೆ?' ಎಂದು ತಿಪ್ಪೆ ಸಾರಿಸಿ ಕೈ ತೊಳೆದುಕೊಂಡಿದೆ.

ಸಾಕಿದ ದನ-ಕರುಗಳಿಂದ ಹೊಮ್ಮುವ ಮೀಥೇನ್, ವಾತಾವರಣದ ಶಾಖವನ್ನು ತ್ವರಿತಗತಿಯಲ್ಲಿ ಏರಿಸುತ್ತಿದೆ ಎಂಬ ಅಂಶದ ಆಧಾರದ ಮೇಲೆ ಜಾನುವಾರುಗಳ ವಧೆಗೆ ಯೋಜಿಸಿದ್ದ ಐರ್ಲೆಂಡ್ ಸರ್ಕಾರವು ರೈತರ ಪ್ರತಿಭಟನೆಗೆ ಹೆದರಿ ಯೋಜನೆಯನ್ನು ತಾತ್ಕಾಲಿಕವಾಗಿ ಕೈಬಿಟ್ಟಿದೆ.

ಜಗತ್ತಿನಾದ್ಯಂತ ಜಾರಿಯಲ್ಲಿರುವ, ಚಾಲ್ತಿಯಲ್ಲಿರುವ ಕೃಷಿ ಪದ್ಧತಿಗಳಿಂದ ವಾಯುಗುಣ ಹದಗೆಡುತ್ತಿದೆ ಎಂಬ ಹೇಳಿಕೆ ವಿಶ್ವ ವೇದಿಕೆಗಳಲ್ಲಿ ಪ್ರಕಟಗೊಳ್ಳಲು ಶುರುವಾಗಿ ಒಂದು ದಶಕವೇ ಕಳೆದಿದೆ. ಆರ್ಥಿಕ ಸುಧಾರಣೆ ಬಯಸುತ್ತಿರುವ ದೇಶಗಳಲ್ಲಿ ಕೃಷಿ ಮತ್ತು ಜಾನುವಾರು ಸಾಕಣೆ ಮುಖ್ಯ ಚಟುವಟಿಕೆಯಾಗಿದೆ. ಜನರಿಗೆ ಅನ್ನ, ಬಟ್ಟೆ, ವಸತಿ ಕಲ್ಪಿಸುವಲ್ಲಿ ಕೃಷಿ ವಲಯ ಬಹುದೊಡ್ಡ ಕೊಡುಗೆ ನೀಡುತ್ತಿದೆ. ಹೆಚ್ಚಿನ ಇಳುವರಿಗಾಗಿ ರಾಸಾಯನಿಕ ಗೊಬ್ಬರದ ಬಳಕೆ ನಡೆಯುವುದರಿಂದ ಭೂಮಿಯ ಸತ್ವ ನಾಶವಾಗಿ ನೆಲ, ಜಲ ಮಾಲಿನ್ಯ ಎರಡೂ ಏಕಕಾಲಕ್ಕೆ ಸಂಭವಿಸುತ್ತಿವೆ. ಕೋಟ್ಯಂತರ ಸಂಖ್ಯೆಯಲ್ಲಿರುವ ಜಾನುವಾರುಗಳು ತಮ್ಮ ತೇಗು ಮತ್ತು ಸಗಣಿಯ ಮೂಲಕ ಅತ್ಯಧಿಕ ಪ್ರಮಾಣದ ಮೀಥೇನ್ ಹೊಮ್ಮಿಸುತ್ತಿರುವುದು ನಿಜವಾದ್ದರಿಂದ ಅದನ್ನು ನಿಯಂತ್ರಿಸಲೇಬೇಕಿದೆ.

ಆದ್ದರಿಂದ ಉನ್ನತ ವರಮಾನವಿರುವ ದೇಶಗಳೀಗ ಕೃಷಿ ಕ್ಷೇತ್ರದ ಕಡೆ ಹೆಚ್ಚಿನ ಗಮನ ಹರಿಸಲು ಶುರುಮಾಡಿವೆ. ಕೃಷಿಯಿಂದ ಹೊಮ್ಮುತ್ತಿರುವ ಶಾಖವರ್ಧಕ ಅನಿಲಗಳನ್ನು ಹೇಗಾದರೂ ಮಾಡಿ ನಿಯಂತ್ರಿಸಲೇಬೇಕೆಂದು ವಿವಿಧ ಯೋಜನೆಗಳನ್ನು ರೂಪಿಸುತ್ತಿವೆ. ಆಹಾರ ಭದ್ರತೆಯನ್ನು ಕಾಪಾಡುತ್ತಲೇ ಕೃಷಿ ಕ್ಷೇತ್ರಕ್ಕೆ ಅಂಟಿರುವ ಕಳಂಕವನ್ನು ತೊಡೆಯುವ ನಿರ್ಧಾರ ಮಾಡಿರುವ ಮುಂದುವರಿದ ದೇಶಗಳು, ಜಾನುವಾರುಗಳ ವಧೆಗೂ ಕೈ ಹಾಕಿರುವುದು ಈಗ ವಿವಾದ ಸೃಷ್ಟಿಸಿದೆ.

ವಾಸ್ತವದಲ್ಲಿ ನಮ್ಮ ಕೃಷಿ ಪದ್ಧತಿಗಳಿಂದ ಭೂಮಿಯ ವಾತಾವರಣಕ್ಕೆ ಶಾಖವರ್ಧಕ ಅನಿಲಗಳು ಸೇರ್ಪಡೆ ಆಗುತ್ತಿರುವುದು ನಿಜ. ಸಾಧಾರಣ ಕಾರ್ಬನ್ ಡೈಆಕ್ಸೈಡ್‌ಗಿಂತ ನಲವತ್ತು ಪಟ್ಟು ಅಪಾಯಕಾರಿಯಾಗಿರುವ ಮೀಥೇನ್‌ನ ನಿಯಂತ್ರಣ ಆಗಲೇಬೇಕು ಮತ್ತು ಸಾರಜನಕಯುಕ್ತ ರಸಗೊಬ್ಬರಗಳಿಂದ ಹೊಮ್ಮುವ ನೈಟ್ರಸ್ ಆಕ್ಸೈಡ್ ಭೂಮಿಯ ಬಿಸಿ ಹೆಚ್ಚಿಸುವ ಪ್ರಮುಖ ಶಾಖವರ್ಧಕ ಅನಿಲವಾಗಿದ್ದು, ಅದರ ನಿಯಂತ್ರಣಕ್ಕೂ ಕ್ರಮ ವಹಿಸಬೇಕಿದೆ. ಪಳೆಯುಳಿಕೆ ಇಂಧನದಿಂದ ಹೊಮ್ಮುವ ಮೀಥೇನ್, ವಾತಾವರಣಕ್ಕೆ ಇಂಗಾಲದ ಡೈಆಕ್ಸೈಡನ್ನು (ಇಂಡೈ) ಸೇರಿಸುತ್ತದೆ. ತಜ್ಞರು ಮೀಥೇನ್ ಅನಿಲವನ್ನು 'ಶಾರ್ಟ್ ಲಿವ್ಡ್ ಪಲ್ಯೂಟೆಂಟ್' ಎಂದು ಕರೆದಿದ್ದಾರೆ. ನೈಸರ್ಗಿಕವಾಗಿ ತರಿ ಭೂಮಿ, ಕೆರೆ ಕುಂಟೆ, ಜೊಂಡು ತುಂಬಿದ ಹೊಂಡ, ಹಸಿರು ಮೇಯುವ ಪ್ರಾಣಿ ಹಾಗೂ ಗದ್ದಲುಗಳಿಂದ ಮತ್ತು ತೈಲ- ಅನಿಲ ಬಾವಿ, ಕೃಷಿ ಮೂಲಗಳಿಂದ ಮೀಥೇನ್ ಹೊಮ್ಮುತ್ತದೆ.

ವಾತಾವರಣದಲ್ಲಿರುವ ಮೀಥೇನ್‌ನ ಆಯಸ್ಸು ಬರೀ 12 ವರ್ಷಗಳಾದರೆ, ಇಂಡೈ 200 ವರ್ಷಗಳವರೆಗೂ ನಮ್ಮ ನಡುವೆಯೇ ಇದ್ದು ತೊಂದರೆ ಕೊಡುತ್ತದೆ. ಇಂಡೈಗಿಂತ ಮೀಥೇನ್ 84 ಪಟ್ಟು ಹೆಚ್ಚು ಪ್ರಮಾಣದಲ್ಲಿ ಭೂಮಿಯ ಬಿಸಿಯನ್ನು ಹಿಡಿದಿಡುವುದರಿಂದ ಅದನ್ನು 'ಸೂಪರ್ ವಾರ್ಮರ್' ಎಂದು ಕರೆಯುತ್ತಾರೆ. ದಾಖಲೆಗಳ ಪ್ರಕಾರ, ಕೃಷಿಯಿಂದ ಶೇ 40, ಪಳೆಯುಳಿಕೆ (ಫಾಸಿಲ್) ಇಂಧನಗಳಿಂದ ಶೇ 35 ಮತ್ತು ತ್ಯಾಜ್ಯದಿಂದ ಶೇ 20ರಷ್ಟು ಮೀಥೇನ್ ಹೊರಬರುತ್ತಿದೆ. 'ವರ್ಲ್ಡ್ ಮೀಥೇನ್ ಅಸೆಸ್ಮೆಂಟ್' ಪ್ರಕಾರ, ಕಲ್ಲಿದ್ದಲು ಗಣಿ, ತೈಲ ಮತ್ತು ಅನಿಲ ಬಾವಿಗಳಿಂದ ಸೋರುವ ಮೀಥೇನನ್ನು ಹಿಡಿದಿಟ್ಟರೆ ಭಾರಿ ಪ್ರಮಾಣದ ಮೀಥೇನ್ ಮಾಲಿನ್ಯ ತಡೆಯಬಹುದು.

ಮೀಥೇನ್ ನಿಯಂತ್ರಣಕ್ಕಾಗಿ- ಕೃಷಿ ಕ್ಷೇತ್ರದಿಂದ ಹೊಮ್ಮುವ ಮೀಥೇನ್ ನಿಯಂತ್ರಿಸಲು ಈಗಾಗಲೇ ಎರಡು ವಿಶ್ವ ಮಟ್ಟದ ಒಪ್ಪಂದಗಳಾಗಿವೆ, ಒಡಂಬಡಿಕೆಗಳಾಗಿವೆ. ಅಮೆರಿಕದ ಎನ್‌ವಿರಾನ್‌ಮೆಂಟಲ್ ಪ್ರೊಟೆಕ್ಷನ್ ಏಜೆನ್ಸಿಯ ಲೆಕ್ಕಾಚಾರದ ಪ್ರಕಾರ, ವಿಶ್ವದ ಶಾಖವರ್ಧಕ ಅನಿಲಗಳ ಪೈಕಿ ಮೀಥೇನ್‌ನ ಪಾಲು ಶೇ 16ರಷ್ಟಿದ್ದರೆ, ನೈಟ್ರಸ್ ಆಕ್ಸೈಡ್‌ನ ಪಾಲು ಶೇ 6ರಷ್ಟಿದೆ. 2021ರ ಜಾಗತಿಕ ಮೀಥೇನ್ ಒಡಂಬಡಿಕೆಗೆ ವಿಶ್ವದ 149 ದೇಶಗಳು ಸಹಿ ಮಾಡಿವೆ. ಇನ್ನೈದು ವರ್ಷಗಳಲ್ಲಿ ಮೀಥೇನ್ ಹೊಮ್ಮುವಿಕೆಯನ್ನು ಶೇ 25ರಷ್ಟು ಕಡಿಮೆ ಮಾಡುತ್ತೇವೆ ಎಂದು ಸಹಿ ಮಾಡಿರುವ ದೇಶಗಳು, ಕಡಿತವಾದ ನಂತರ ವಾತಾವರಣದ ಮೀಥೇನ್‌ನ ಪ್ರಮಾಣ 2020ರಲ್ಲಿ ಇದ್ದಷ್ಟು ಇರುತ್ತದೆ ಎಂದಿವೆ.



ಐರೋಪ್ಯ ದೇಶಗಳು 'ಗ್ರೀನ್ ಡೀಲ್' ಎಂಬ ಒಡಂಬಡಿಕೆ ಮಾಡಿಕೊಂಡಿದ್ದು, 2030ರ ವೇಳೆಗೆ ಶೇ 55ರಷ್ಟು ಶಾಖವರ್ಧಕ ಅನಿಲಗಳನ್ನು ನಿಯಂತ್ರಿಸುವ ನಿರ್ಧಾರ ಮಾಡಿವೆ. ಅಲ್ಲದೆ ಪ್ರಕೃತಿ ಪುನರ್‌ಸ್ಥಾಪನಾ ಕಾನೂನಿನಂತೆ (ನೇಚರ್ ರೆಸ್ಟೊರೇಷನ್ ಲಾ) ಯುರೋಪಿನ ನೆಲದ ಶೇ 20ರಷ್ಟು ಭಾಗವನ್ನು ಹಸಿರಿನಿಂದ ಸಮೃದ್ಧಗೊಳಿಸುತ್ತೇವೆ ಎಂದಿವೆ.

ಮೇಲಿನ ಒಪ್ಪಂದಗಳಂತೆ ಶಾಖವರ್ಧಕ ಅನಿಲಗಳನ್ನು ನಿಯಂತ್ರಿಸಲು ದೇಶಗಳು ಮಾಡುತ್ತಿರುವ ಕೆಲಸಗಳಿಂದ ನಿರೀಕ್ಷಿತ ಫಲ ಅಷ್ಟು ಸುಲಭವಾಗಿ ಸಿಗುವುದಿಲ್ಲ ಎನ್ನುತ್ತಾರೆ ತಜ್ಞರು. ಜಾನುವಾರುಗಳು ರೈತರ ಬಹುದೊಡ್ಡ ಆದಾಯದ ಮೂಲ ಎಂಬುದನ್ನು ಸರ್ಕಾರಗಳು ಮರೆಯಬಾರದು, ಅದನ್ನು ಮರೆತು ಅವುಗಳನ್ನು ವಧಿಸುತ್ತೇವೆ ಎನ್ನುವುದು ಬೇಜವಾಬ್ದಾರಿತನದ ಪರಮಾವಧಿ ಎನ್ನುತ್ತಾರೆ.

ಐರೋಪ್ಯ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷ ಸೀತಾವಾನ್ ಕಿಂಪೆಮಾ '2022ರಲ್ಲಿ ಕೃಷಿ ಕ್ಷೇತ್ರವು ಶೇ 65ರಷ್ಟು ಸಾರಜನಕ ಹೊಮ್ಮುವಿಕೆಯನ್ನು ಕಡಿತಗೊಳಿಸಿತ್ತು. ಆದರೆ ಸರಕು ಸಾಗಣೆ ಮತ್ತು ಔದ್ಯೋಗಿಕ ರಂಗಗಳಿಂದ ಅಂಥ ಯಾವ ಕೊಡುಗೆಯೂ ಇರಲಿಲ್ಲ. ಅವರಿಗೆ ಸಂಪೂರ್ಣ ವಿನಾಯಿತಿ ನೀಡಿ, ಭೂಮಿಯ ಬಿಸಿ ಏರಲು ಕೃಷಿ ಪದ್ಧತಿಗಳೇ ಕಾರಣ ಎನ್ನುವವರು ಇದನ್ನೇಕೆ ಗಮನಿಸುತ್ತಿಲ್ಲ' ಎಂದು ಕೇಳುತ್ತಾರೆ. ಕೃಷಿಯಿಂದ ಮಾತ್ರ ಮೀಥೇನ್ ಹೊಮ್ಮುತ್ತಿಲ್ಲ, ಪಳೆಯುಳಿಕೆ ಇಂಧನ ಬಳಕೆಯಿಂದಲೂ ಮೀಥೇನ್ ಯಥೇಚ್ಛವಾಗಿ ಹೊಮ್ಮುತ್ತಿರುವುದು ಯಾಕೆ ಕಾಣಿಸುತ್ತಿಲ್ಲ ಎಂದು ಸಿಟ್ಟಿಗೇಳುವ ಸೀತಾವಾನ್, ಕೃಷಿಗೆ ಖಳನಾಯಕನ ಪಟ್ಟ ಕಟ್ಟುತ್ತಿರುವುದು ಸರಿಯಲ್ಲ ಎನ್ನುತ್ತಾರೆ.

ಮೀಥೇನ್‌ನಲ್ಲಿ ಬಯೊಜೆನಿಕ್ ಮತ್ತು ಪಳೆಯುಳಿಕೆ ಎಂಬ ಎರಡು ವಿಧಗಳಿವೆ. ಗಿಡ– ಮರ ಮತ್ತು ಪ್ರಾಣಿಗಳಿಂದ ಉದಿಸುವ ಮೀಥೇನ್ ಬಯೊಜೆನಿಕ್ ಎನಿಸಿದರೆ, ಲಕ್ಷಾಂತರ ವರ್ಷಗಳಿಂದ ಭೂಮಿಯ ಅಡಿ ಬಂದಿಯಾಗಿರುವುದು ಪಳೆಯುಳಿಕೆ ಎನಿಸುತ್ತದೆ. ಜೈವಿಕ ಮೀಥೇನ್ ವಾತಾವರಣದಲ್ಲಿ ಹತ್ತು ವರ್ಷಗಳ ಕಾಲ ಇರುತ್ತದೆ ಮತ್ತು ಅಂತಿಮವಾಗಿ ಇಂಡೈ ಆಗಿ ಬದಲಾಗಿ ಸಸ್ಯಗಳನ್ನು ಸೇರುತ್ತದೆ. ಮೇವಿನ ಮೂಲಕ ಪ್ರಾಣಿಗಳ ಹೊಟ್ಟೆ ಸೇರುತ್ತದೆ. ನಂತರ ಪ್ರಾಣಿಗಳ ತೇಗು ಮತ್ತು ಸಗಣಿಯ ಮೂಲಕ ವಾತಾವರಣಕ್ಕೆ ವಾಪಸ್ ಸೇರುತ್ತದೆ. ಜಾನುವಾರುಗಳು ಇರುವವರೆಗೂ ಈ ಚಕ್ರ ಸುತ್ತುತ್ತಲೇ ಇರುತ್ತದೆ.

ಕೃಷಿಯಿಂದ ಹೊಮ್ಮುವ ಶಾಖವರ್ಧಕ ಅನಿಲಗಳನ್ನು ನಿಯಂತ್ರಿಸಿ ನೈಸರ್ಗಿಕ ಪ್ರದೇಶಗಳನ್ನು ಕಾಪಾಡಲು ವಿಶ್ವದಾದ್ಯಂತ ಇರುವ ರೈತರ ನೆರವಿಗೆ ನಿಲ್ಲಲೇಬೇಕಾದ ಅನಿವಾರ್ಯ ಇದೆ. ಆಹಾರದ ವಿಷಯದಲ್ಲಿ ದನದ ಮಾಂಸೋದ್ಯಮ ಅತಿಹೆಚ್ಚಿನ ಶಾಖವರ್ಧಕ ಅನಿಲಗಳನ್ನು ಹೊರಸೂಸುತ್ತದೆ. ಅದಕ್ಕೆ ಸಿಗುತ್ತಿರುವ ಹಣಕಾಸಿನ ಬೆಂಬಲ ಕಡಿಮೆಯಾಗಬೇಕು ಎಂಬುದು ತಜ್ಞರ ಮಾತು.

ವಿಶ್ವದಲ್ಲಿ ಈಗ ಸುಮಾರು 150 ಕೋಟಿ ಜಾನುವಾರುಗಳಿವೆ. ಹೆಚ್ಚು ಜಾನುವಾರು, ಹೆಚ್ಚು ಮಾಂಸ ಉತ್ಪಾದನೆ ಸಮಸ್ಯೆ ಅಲ್ಲ. ಸಾಕಣೆ ಮತ್ತು ಉತ್ಪಾದನಾ ವಿಧಾನಗಳು ಸುಸ್ಥಿರ ಅಭಿವೃದ್ಧಿ ಮಾದರಿಗೆ ಹೊಂದುತ್ತಿಲ್ಲ. ಈಗಿರುವ ತಂತ್ರಜ್ಞಾನ ಅದಕ್ಕೆ ಪೂರಕವಾಗಿಲ್ಲ. ವಿಜ್ಞಾನ ಇಲ್ಲಿ ತನ್ನ ಶಕ್ತಿಯನ್ನು ತೋರಿಸಬೇಕು. ಸುಸ್ಥಿರ ಕೃಷಿಗೆ ಬೇಕಾದ ತಂತ್ರಜ್ಞಾನವನ್ನು ರೂಪಿಸುವುದು ಆದ್ಯತೆಯಾಗಬೇಕು.

ಚುರುಮುರಿ



ಕನ್ನಡದ ಮಕ್ಕಳು

• ಗುರು ಪಿ.ಎಸ್.

'ದರ್ಶನ ಕೊಡು ತಾಯಿ' ಪ್ರಾರ್ಥಿಸಿದೆ. ಪ್ರತ್ಯಕ್ಷಳಾದಳು ಕನ್ನಡ ತಾಯಿ ಭುವನೇಶ್ವರಿ.

'ಮಾತೆ, ಕನ್ನಡಿಗರೆಲ್ಲ ಸಂಕಷ್ಟದಲ್ಲಿದ್ದೇವೆ'.

'ಸರಿ, ನಾನೇನು ಮಾಡಬೇಕು ಹೇಳು'.

'ತಾಯಿ, ನಮ್ಮ ರಾಜ್ಯಕ್ಕೆ ಒಬ್ಬ ಲೀಡರ್ ಬೇಕು'.

'ಪುತ್ರ, ಹೀಗೆ ಕೇಳುವ ಮೂಲಕ ರಾಜ್ಯದ ನಾಯಕರನ್ನ ಅವಮಾನಿಸುತ್ತಿರುವೆ'.

'ಅವಮಾನಿಸುವುದು ಉದ್ದೇಶವಲ್ಲ ತಾಯಿ, ಆಂಧ್ರ–ಬಿಹಾರದ ನಾಯಕರಂತೆ ನಮ್ಮವರೂ ಆಗಬೇಕೆಂಬ ಆಸೆಯಷ್ಟೇ'.

'ಅವರವು ಮಿತ್ರಪಕ್ಷಗಳು, ಹಾಗಾಗಿ ಆ ಭಾಗ್ಯ'.

'ನಮ್ಮ ರಾಜ್ಯದಲ್ಲೂ ಒಂದು ಮಿತ್ರಪಕ್ಷ ಇದೆಯಲ್ಲವೇ ತಾಯಿ?'

'ದಡ್ಡನಂತೆ ಮಾತನಾಡಬೇಡ, ರಾಜಕೀಯದಲ್ಲಿ ಸಂಖ್ಯೆಯೇ ಮುಖ್ಯವಲ್ಲವೇ?'

'ಹೋಗಲಿಬಿಡು ತಾಯಿ, ಬಜೆಟ್‌ನಲ್ಲಿ ರಾಜ್ಯಕ್ಕೆ ಹೆಚ್ಚು ಕೊಡುಗೆ ಇರದ ಬಗ್ಗೆಯೂ ಬೇಸರವಿದೆ'.

'ದೇಶದಲ್ಲಿಯೇ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಿದ್ದಾರಲ್ಲವೇ ಪುತ್ರ'.

'ಏನ್ ಬಿಡಮ್ಮ, ಖಾಸಗಿಯಲ್ಲಿ ಕನ್ನಡದ ಮಕ್ಕಳಿಗೆ ಮೀಸಲಾತಿ ಕಡ್ಡಾಯ ಮಾಡ್ತೀವಿ ಅಂತ ಆಸೆ ತೋರಿಸಿ ಇವರು ಸುಮ್ಮನಾಗಿಬಿಟ್ರು. ಹೆಂಗಾದರೂ ಆಗ್ಲಿ, ನಾವೂ ಇಂಗ್ಲಿಷ್ ಕಲಿತು ಐ.ಟಿ. ಕಂಪನಿಗೆ ಸೇರ್ಕೊಂಡು ಕೆಲಸ ಮಾಡ್ತಿದ್ರೆ, ಈಗ ದಿನಕ್ಕೆ 14 ತಾಸು ಕೆಲಸ ಕೊಡೋದಕ್ಕೆ ಯೋಚನೆ ಮಾಡ್ತಿದ್ದಾರೆ, ಹೊಟ್ಟೆ ಉರಿಯಲ್ವ ತಾಯಿ'.

'ನೀನು ಸೋಮಾರಿಯಾಗಬಾರದು ಎಂಬ ಕಾರಣಕ್ಕೆ ಸರ್ಕಾರ ಆ ರೀತಿ ಮಾಡುತ್ತಿದೆ ಕಂದ, ಮೇಲಾಗಿ ನೀನು ಹೆಚ್ಚು ದುಡಿದು, ಹೆಚ್ಚು ಟ್ಯಾಕ್ಸ್ ಕಟ್ಟಬೇಡವೇ ಮಗು...'

'ಯಾಕಮ್ಮ, ನಾವು ತೆರಿಗೆ ಕಟ್ಟಿ ಉತ್ತರ, ಪೂರ್ವದ ರಾಜ್ಯಗಳನ್ನ ಉದ್ಧಾರ ಮಾಡೋಕಾ?'

'ಉದ್ಧಟತನ ಬೇಡ, ಇಂಥವೆಲ್ಲ ಮಾತನಾಡಿ ದೇಶದ್ರೋಹಿ ಆಗಬೇಡ'.

'ತಾಯಿ, ನಾವಿನ್ನೇನು ಮಾಡಬೇಕು ಹೇಳು'.

'ಕನ್ನಡದವರಿಗೆ ಕೆಲಸ ನೀಡುವ ವಿಚಾರವನ್ನ ವಿರೋಧಿಸಿದವರ 'ಪೇ ಆ್ಯಪ್' ಅನ್ನು ಕನ್ನಡಿಗರು ಅನ್‌ಇನ್‌ಸ್ಟಾಲ್ ಮಾಡಿದರಲ್ಲವೇ?'

'ಹೌದು ತಾಯಿ'.

'ಅದೇ ರೀತಿ, ರಾಷ್ಟ್ರೀಯ ಪಕ್ಷಗಳನ್ನೂ ರಾಜ್ಯದಿಂದ ಅನ್‌ಇನ್‌ಸ್ಟಾಲ್ ಮಾಡಿಬಿಡಿ' ಆದೇಶಿಸಿ ಮಾಯವಾದಳು ಮಾತೆ ಭುವನೇಶ್ವರಿ.

ದಿನದ ಟ್ವೀಟ್

ಆದ್ಯತೆಯ ವಿಷಯವಾಗಲಿ



ಬೆಂಗಳೂರು ಎದುರಿಸುತ್ತಿರುವ ಸವಾಲುಗಳಿಗೆ ವಲಸಿಗರನ್ನು ದೂರುವಾಗ ಇನ್ನೂ ದೊಡ್ಡದಾದ ವಿಷಯಗಳ ಬಗ್ಗೆ ನಿರ್ಲಕ್ಷ್ಯ ವಹಿಸಲಾಗುತ್ತದೆ. ಅವುಗಳೆಂದರೆ, ನಗರ ಯೋಜನೆ ಬಗ್ಗೆ ಕಾಳಜಿ ಇಲ್ಲದಿರುವುದು, ಅಸಮರ್ಪಕ ಮೂಲಸೌಕರ್ಯ ಮತ್ತು ಪರಿಸರದ ಕಡೆಗಣನೆ.

ರಿಷಿಕಾ ರಂಗ

ಕಿಡಿನುಡಿ



1. ಜಿಎಸ್‌ಟಿ ಸಂಗ್ರಹ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿದೆ.
2. ಒಟ್ಟಾರೆ ತೆರಿಗೆ ಸಂಗ್ರಹವು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿದೆ.
3. ಭಾರತದ ಜಿಡಿಪಿ ಸಾರ್ವಕಾಲಿಕ ಹೆಚ್ಚಿನ ಮಟ್ಟದಲ್ಲಿದೆ.
ಅಷ್ಟಾದರೂ ಮಧ್ಯಮ ವರ್ಗದವರ ಮೇಲಿನ ತೆರಿಗೆ ಕೂಡ ಸಾರ್ವಕಾಲಿಕವಾಗಿ ಅತಿ ಹೆಚ್ಚಿನ ಪ್ರಮಾಣದಲ್ಲಿಯೇ ಇದೆ (ಇತ್ತೀಚಿನ ಇತಿಹಾಸವನ್ನು ಪರಿಗಣಿಸಿದರೆ ಹಾಗೆ ಕಾಣುತ್ತದೆ). ಇದರಿಂದ ಕಲಿತ ಪಾಠವೇನು? ರಾಷ್ಟ್ರವು ತೆರಿಗೆ ರೂಪದಲ್ಲಿ ಹಣ ಸಂಗ್ರಹಿಸಿ ಅದನ್ನು ಪ್ರತಿಮೆ ಸ್ಥಾಪನೆ, ಕಳಪೆ ರಸ್ತೆಗಳು, ಉಚಿತ ಕೊಡುಗೆಗಳಿಗಾಗಿ ವ್ಯರ್ಥ ಮಾಡಿದರೆ, ಅದು ಅಭಿವೃದ್ಧಿಯಂತೆ ಕಾಣುತ್ತದೆಯೇ ವಿನಾ ವಾಸ್ತವದಲ್ಲಿ ಅದು ಅಭಿವೃದ್ಧಿಯಾಗಿರುವುದಿಲ್ಲ...

ಅಕ್ಷತ್ ಶ್ರೀವಾಸ್ತವ, ಹೂಡಿಕೆದಾರ

25 ವರ್ಷಗಳ ಹಿಂದೆ

ಭಾನುವಾರ, 25-7-1999

• ಪಕ್ಷ ಬಲಪಡಿಸಲು ಪಟೇಲ್–ಹೆಗಡೆ ಮಾತುಕತೆ

ಬೆಂಗಳೂರು, ಜುಲೈ 24– ಜನತಾದಳ ಇಬ್ಭಾಗವಾದ ನಂತರ ಯಾವುದೇ ಬಣದ ಜತೆಗೂ ಗುರುತಿಸಿಕೊಳ್ಳದೇ ತಟಸ್ಥರಾಗಿ ಉಳಿದುಕೊಂಡಿರುವ ಕೆಲವು ಮಾಜಿ ಶಾಸಕರು ಮತ್ತು ಸಚಿವರನ್ನು ಸೆಳೆದುಕೊಂಡು ಕಾರ್ಯತಂತ್ರ ರೂಪಿಸುವ ಕುರಿತು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಲೋಕಶಕ್ತಿಯ ಮುಖಂಡ ರಾಮಕೃಷ್ಣ ಹೆಗಡೆ ಅವರ ಜತೆ ಚರ್ಚೆ ನಡೆಸಿದರು.

ಹೆಗಡೆ ಅವರ ನಿವಾಸದಲ್ಲಿ ಇಂದು ಬೆಳಿಗ್ಗೆ ನಡೆದ ಇವರಿಬ್ಬರ ಭೇಟಿಯಲ್ಲಿ ನಗರದಲ್ಲಿರುವ ದಳ ಕಚೇರಿಯನ್ನು ಮತ್ತು ದಳದ ಚಿಹ್ನೆಯನ್ನು ಉಳಿಸಿಕೊಳ್ಳುವ ಕಾರ್ಯತಂತ್ರದ ಕುರಿತು ಚರ್ಚಿಸಲಾಯಿತು.

• ಅರಸೀಕೆರೆಯಲ್ಲಿ ಮೂರು ಮನೆಗಳ ದರೋಡೆ

ಅರಸೀಕೆರೆ, ಜುಲೈ 24– ನಾಲ್ವರು ದರೋಡೆಕೋರರ ತಂಡವೊಂದು ಪಟ್ಟಣದ ಹೊರವಲಯದಲ್ಲಿರುವ ಮೂರು ಮನೆಗಳಿಗೆ ನುಗ್ಗಿ, ಮನೆಯವರನ್ನು ಥಳಿಸಿ, ಸುಮಾರು ಎರಡು ಲಕ್ಷ ರೂಪಾಯಿಗೂ ಹೆಚ್ಚಿನ ಮೌಲ್ಯದ ನಗ–ನಾಣ್ಯಗಳನ್ನು ದೋಚಿಕೊಂಡು ಪರಾರಿಯಾಗಿರುವ ಘಟನೆ ಸಂಭವಿಸಿದೆ.

ಮೂರು ಮನೆಗಳಲ್ಲಿದ್ದ ಮಹಿಳೆಯರು ಧರಿಸಿದ್ದ ಆಭರಣಗಳು, ತಿಜೋರಿಯಲ್ಲಿದ್ದ ಆಭರಣಗಳು ಹಾಗೂ ನಗದು ದೋಚಿಕೊಂಡ ದರೋಡೆಕೋರರು ಮನೆಯಿಂದ ಹೊರಡುವ ಮುನ್ನ ಮನೆಯಲ್ಲಿದ್ದವರನ್ನು ಕೊಠಡಿ ಒಂದರಲ್ಲಿ ಕೂಡಿಹಾಕಿ, ಹೊರಗಿನಿಂದ ಚಿಲಕ ಹಾಕಿಕೊಂಡು ಪರಾರಿಯಾಗಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 25-7-1974

• ಮಾದರಿಯೇ ಅಲ್ಲದ 'ಮಾದರಿ' ಗ್ರಾಮ

ಬೆಂಗಳೂರು, ಜುಲೈ 24– ಸುಮಾರು ನಲವತ್ತು ವರ್ಷದ ಚನ್ನಬಂಟಯ್ಯ ಮಂಗಳವಾರ ಆಳದ ಬಾವಿಯಿಂದ ನೀರು ಎಳೆಯುತ್ತಿದ್ದಾಗ ಮಂತ್ರಿ ಪಕ್ಕದಲ್ಲೇ ಇದ್ದರು. ಸುಮಾರು ತಿಂಗಳ ಹಿಂದೆ ಪೊಲೀಸರ ರಕ್ಷಣೆಯಲ್ಲಿ ಅದೇ ಬಾವಿಯಲ್ಲಿ ಅವನು ನೀರೆಳೆದಿದ್ದ. ಆದರೆ ಬೇರೆ ಹಗ್ಗದಿಂದ.

ಈಗಿನ ಹಗ್ಗ ಪೊಲೀಸರು ಕೊಡಿಸಿದ್ದು. ಹಗ್ಗ ಕೊಡಿಸಿದ ಪೊಲೀಸರೇ ತನಗೆ ರಕ್ಷಣೆಯನ್ನೂ ನೀಡಬೇಕೆಂದು ಕೇಳಿಕೊಂಡ ಚನ್ನಬಂಟಯ್ಯ.

ಚನ್ನಬಂಟಯ್ಯನ ಮಾತಿನಂತೆ ಅವನ ಮನವಿಗೊಂದು ಕಾರಣವಿತ್ತು. ತಿಂಗಳ ಹಿಂದೆ ಪೊಲೀಸರ ರಕ್ಷಣೆಯಲ್ಲಿ ಬಾವಿಯಲ್ಲಿ ನೀರು ಸೇದಿದ ಮೇಲೆ ಸವರ್ಣ ಹಿಂದೂಗಳು ಅವನನ್ನು ಮೂದಲಿಸಿ, ಬೆದರಿಸಿದ್ದರಂತೆ.

ಚನ್ನಬಂಟಯ್ಯ ಹರಿಜನ.

ಪ್ರಕ್ಷುಬ್ಧ: ಬೆಂಗಳೂರಿನಿಂದ ಸುಮಾರು 50 ಮೈಲಿ ದೂರದ ಕನಕಪುರ ತಾಲ್ಲೂಕಿನ ಬಾಪೂಜಿ ಕಾಲೊನಿ, ಹದಿಮೂರು ವರ್ಷಗಳ ಹಿಂದೆ 'ಮಾದರಿ' ಗ್ರಾಮ ಆಗಿ ಅಸ್ತಿತ್ವಕ್ಕೆ ಬಂತು. ಆದರೆ ಅಲ್ಲಿ ಇತರರಿಗೆ ಮಾದರಿಯಾದುದೇನಿಲ್ಲ. ಇಂದು ಕೂಡ ಪೊಲೀಸ್ ರಕ್ಷಣೆಯಲ್ಲಿ ಬದುಕಬೇಕಾಗಿರುವ ಪ್ರಕ್ಷುಬ್ಧ ಗುಡಿಸಲುಗಳ ಗುಂಪು ಅದು.

ಸಂಗತ

ವಾರ್ಡ್‌ರೋಬ್ ಮುಂದೆ ಒಂದು ಕ್ಷಣ

ಫ್ಯಾಷನ್‌ಗಾಗಿ ಬದಲಾಗದೆ ನಮ್ಮ ಅನುಕೂಲಕ್ಕೆ ಸರಿಹೊಂದುವಂತೆ ಫ್ಯಾಷನ್ನನ್ನೇ ಬದಲಿಸುವಲ್ಲಿ ನಮ್ಮ ಅಸ್ಮಿತೆ ಇದೆ

• ಬಿ.ಎಸ್.ಭಗವಾನ್

'ಹೀಗೂ ದುರುಳತನ ಉಂಟೇ' ಎಂದು ಮೂಗಿನ ಮೇಲೆ ಬೆರಳಿಡುವಂತಹ ವಿಪರ್ಯಾಸವೊಂದು ಬೆಂಗಳೂರಿನಲ್ಲಿ ಇತ್ತೀಚೆಗಷ್ಟೆ ಸಂಭವಿಸಿದೆ. ಮಾಲ್‌ವೊಂದರಲ್ಲಿ ಸಿನಿಮಾ ನೋಡಲೆಂದು ಪುತ್ರನ ಸಮೇತ ಕೃಷಿಕರೊಬ್ಬರು ಪ್ರವೇಶಿಸುತ್ತಾರೆ. ಭದ್ರತೆಗೆ ಅಲ್ಲಿ ನಿಯೋಜನೆಗೊಂಡಿದ್ದ ವ್ಯಕ್ತಿಯು ಮಗನನ್ನು ಒಳಬಿಟ್ಟು, ಪಂಚೆಯುಟ್ಟಿದ್ದ ಕಾರಣಕ್ಕೆ ಆ ಕೃಷಿಕರನ್ನು ತಡೆಯುತ್ತಾರೆ! ಮೊದಲ ಆದ್ಯತೆ ಪಡೆದುಕೊಳ್ಳಬೇಕಾದ ಅಪ್ಪಟ ದೇಶಿ ಉಡುಪಿಗೆ ಇಂತಹ ಅವಮಾನವೇ? ಹಾಗಾದರೆ ಮಾಲ್ ಆಡಳಿತದ ದೃಷ್ಟಿಯಲ್ಲಿ ಶಿಷ್ಟ ದಿರಿಸುಗಳ ಪಟ್ಟಿಯಲ್ಲಿ ಶಾರ್ಟ್ಸ್, ಜೀನ್ಸ್, ಟೀ ಷರ್ಟ್ ಇವೆಯೇ?

ರಾಜಧಾನಿಯ 'ಮೆಟ್ರೊ' ರೈಲು ನಿಲ್ದಾಣದಲ್ಲೂ ಇಂತಹ ಅನಾದರ ಸುದ್ದಿಯಾಗಿತ್ತು. ಮನವರಿಕೆ ಆಗಿಯೊ, ಜನಾಕ್ರೋಶಕ್ಕೆ ಮಣಿದೊ ಅಂತೂ ಸೆಕ್ಯೂರಿಟಿ ಸಿಬ್ಬಂದಿ ಕ್ಷಮೆ ಯಾಚಿಸಿದರು. ಮಾಲ್‌ನ ಮಾಲೀಕರಿಂದ ಆ ಕೃಷಿಕರನ್ನು ಸನ್ಮಾನಿಸಿದ್ದು ಬೇರೆ ಮಾತು.

ಇಂತಹ ಪ್ರಕರಣಗಳು ಬೇರೊಂದು ಹಿನ್ನೆಲೆಯಲ್ಲಿ ನಮ್ಮ ಗಮನ ಸೆಳೆಯಬೇಕಿದೆ. ಮೂಗಿಲ್ಲದವರ ದ್ವೀಪದಲ್ಲಿ ಮೂಗಿರುವಾತನೇ ಕುರೂಪಿಯಂತೆ! ಚಿತ್ರವಿಚಿತ್ರ ವೇಷಭೂಷಣಗಳಿಗೆ ನಾವೆಷ್ಟು ಮರುಳಾಗಿದ್ದೇವೆ ಎಂದರೆ, ದೇಶಿ ಪೋಷಾಕುಗಳೇ ನಮಗೆ ಅಪರಿಚಿತ, ಅನುಚಿತ ಎನಿಸತೊಡಗಿವೆ.

ಪರಂಪರಾಗತ ದಿರಿಸು ನಮಗೆ ಮಾತ್ರವಲ್ಲ, ಅದು ನಮ್ಮ ಸಂಸ್ಕೃತಿಯನ್ನು ಮತ್ತು ನಮ್ಮ ಪೂರ್ವಜರನ್ನು ಗೌರವಿಸುತ್ತದೆ. ಧರಿಸುವ ಪೋಷಾಕು ನಡವಳಿಕೆಯ ಪ್ರತೀಕ. ಅದು ಸೂಕ್ಷ್ಮ ಸಂದೇಶಗಳ ವಾಹಕ. ನಾವು ದಿರಿಸುಗಳ ಭಾಷೆಯಲ್ಲಿ ಮಾತನಾಡುತ್ತೇವೆ. ನಮ್ರತೆಯು ಶಿಷ್ಟ ಉಡುಗೆಯ ಅವಿಭಾಜ್ಯ ಅಂಗ. ಮನೆಯಲ್ಲಿ ಸರಾಗವಾಗಿ ಧರಿಸಬಹುದಾದ ದಿರಿಸೇ ನಿರಾಳಕ್ಕೆ ಕೀಲಿಕೈ. ಆದರೆ ಹೊರಗೆ ಬಂದಾಗ ಸದಭಿರುಚಿ ಮೇಲುಗೈ ಆಗಬೇಕಾಗುತ್ತದೆ.

ನಾಜೂಕಾಗಿ ಪಂಚೆಯುಟ್ಟ ಪತಿ, ಸೀರೆಯುಟ್ಟ ಸತಿ-ದಂಪತಿ ಸಂಗೀತ ಕಛೇರಿಗೆ ಬಂದರೆ ಆ ನೋಟವೇ ಸೊಗಸು. ವೇದಿಕೆಯಿಂದ ಪ್ರವಹಿಸುವ ನಾದಕ್ಕೆ ಅದು ಸಾಥ್ ನೀಡಿರುತ್ತದೆ. ಅವರೇ ಹಾಡುತ್ತಿದ್ದಾರೋ ಎಂಬ ಅನುಭಾವಕ್ಕೆ ವಶವಾಗಿರುತ್ತೇವೆ.

ಉಡುಗೆ– ತೊಡುಗೆ ತನಗಷ್ಟೇ ಅಂದ ಚಂದ ಆದರೆ ಸಾಲದು, ನೋಡುವವರಿಗೂ ಸೊಗಸಾಗಿರುವ ಅಗತ್ಯವಿದೆ. ಈ ದಿಸೆಯಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಮತ್ತೆ ಮತ್ತೆ ನೆನಪಾಗುತ್ತಾರೆ. ಅವರ ಮನೆಗೆ ಸಂದರ್ಶಕರು ಹೋದಾಗ ಸೂಟುಧಾರಿಯಾಗಿಯೇ ಕಾಣಿಸಿಕೊಳ್ಳುತ್ತಿದ್ದರು. ಹೀಗೇಕೆ? ಬಿಡುಬೀಸಾಗಿದ್ದರೆ ಆಗದೇ ಎಂಬ ಆಪ್ತರ ಪ್ರಶ್ನೆಗಳಿಗೆ ಅವರು ಈ ಉಡುಗೆ ತನಗಲ್ಲ, ಭೇಟಿಯಾಗುವವರಿಗೆ ಎನ್ನುತ್ತಿದ್ದರು.

ದಿರಿಸಿಗೆ ಜವಾಬ್ದಾರಿಯಿದೆ. ನಮ್ಮನ್ನು ನಾವೇ ಇಷ್ಟಪಡುವ ಮಿತಿಯಲ್ಲಿ ಇತರರನ್ನು ಮೆಚ್ಚಿಸಲು ಉಡುವುದು, ತೊಡುವುದು ಸರಿಯೆ. ನಾವು ಯಾವುದೇ ಮಾತನ್ನು ಆಡುವ ಮುನ್ನವೇ ನಮ್ಮ ಬಗ್ಗೆ ನಮ್ಮ ವೇಷಭೂಷಣ ಎಲ್ಲವನ್ನೂ ಅಭಿವ್ಯಕ್ತಿಸಿರುತ್ತದೆ. ಅದು ಆತ್ಮಾಭಿಮಾನದ ಜೊತೆಗೆ ಪರರ ಬಗ್ಗೆ ನಮಗಿರುವ ಗೌರವವನ್ನೂ ಪ್ರಕಟಿಸಿರುತ್ತದೆ. ಎಲ್ಲರೂ ಅಹುದಹುದೆನ್ನುವ ಸಭ್ಯ ಉಡುಗೆಯೇ ನಮ್ಮ ಪಾಲಿಗೆ ಸಂತೋಷದ ಭರವಸೆ.

ಷೇಕ್ಸ್‌ಪಿಯರ್ ತನ್ನ 'ಪೊಲೊನಿಯಸ್ ಅಡ್ವೈಸ್ ಟು ಹಿಸ್ ಸನ್' ಕವನದಲ್ಲಿ ಅಪ್ಪನು ಮಗನಿಗೆ ನೀಡುವ ಹಿತನುಡಿ ಪ್ರಸ್ತುತವಾಗಿದೆ: 'ಒಳ್ಳೆಯ ಉಡುಪು ಖರೀದಿಸು. ಆದರೆ ಎದ್ದು ಕಾಣುವ ಆಡಂಬರದ್ದು ಬೇಡ'.

ವಾರ್ಡ್‌ರೋಬ್ (ಉಡುಪಿನ ಕಪಾಟು) ಮುಂದೆ ನಿಂತಾಗ ಒಂದು ಕ್ಷಣ ಯಾವ ಬಗೆಯ ದಿರಿಸು ತೊಟ್ಟರೆ ಜಗತ್ತಿನ ಬಗ್ಗೆ ನಮ್ಮ ದೃಷ್ಟಿ ಹಾಗೂ ನಮ್ಮ ಬಗ್ಗೆ ಜಗತ್ತಿನ ದೃಷ್ಟಿ ಉತ್ತಮವೆಂಬ ಆಲೋಚನೆ ಮುಖ್ಯವಾಗುವುದು. ನಮಗೂ ನೋಡುವವರಿಗೂ ಯಾವುದು ಹಿತವೆಂಬ ವಿವೇಚನೆಗೆ ವ್ಯವಧಾನ ಅಗತ್ಯ.

ಕಿರಿಯರಂತೆ ತೋರಲು ಕೃತಕ ಒಪ್ಪ ಓರಣದ ಮೊರೆ ಹೇಗೂ ಇರಲಿ. ಎಂತಹ ವೇಷಭೂಷಣಕ್ಕಾಗಲಿ, ಸೌಂದರ್ಯವರ್ಧಕಕ್ಕಾಗಲಿ ವಯಸ್ಸಿನೊಂದಿಗೆ ರಾಜಿಯಾಗಲು ಇತಿಮಿತಿಗಳಿವೆ. ಅದು ನಿಸರ್ಗ ನಿಯಮ. ಮುಖದ ಸುಕ್ಕು, ಕೇಶದ ನೆರೆ ಮರೆಮಾಚಲು ಯತ್ನಿಸಿ ಸೋಲೊಪ್ಪಿ ಯಥಾಸ್ಥಿತಿಯನ್ನು ಅಪ್ಪುವ ಸಂದರ್ಭಗಳೇ ಹೆಚ್ಚು.



ಫ್ಯಾಷನ್‌ಗಾಗಿ ಬದಲಾಗದೆ ನಮ್ಮ ಅನುಕೂಲಕ್ಕೆ ಸರಿಹೊಂದುವಂತೆ ಫ್ಯಾಷನ್ನನ್ನೇ ಬದಲಿಸುವಲ್ಲಿ ನಮ್ಮ ಅಸ್ಮಿತೆಯಿದೆ. 'ವಸ್ತ್ರ ಭೂತ ಸಂಸ್ಥಾಪನಾರ್ಥಂ' ಎಂಬ ನುಡಿಯಂತೆ, ಉಡುಪು ಧರಿಸುವುದು ಒಬ್ಬರ ಸ್ವವ್ಯಕ್ತಿತ್ವಕ್ಕೆ. ಕೆಲವು ದೇಶಗಳಲ್ಲಿ ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ ರಾಷ್ಟ್ರೀಯ ಉಡುಪನ್ನೇ ಅಧಿಕೃತ ಸಮವಸ್ತ್ರವಾಗಿ ನಿಯೋಜಿಸಲಾಗಿದೆ. ಪಂಚೆ, ಸೀರೆ ಉಡುವ ಶೈಲಿ ಬೇರೆ ಬೇರೆಯಾದರೂ ವಿಶ್ವವ್ಯಾಪಿ. ಎಲ್ಲ ಧರ್ಮಗಳಲ್ಲೂ ಅವಕ್ಕೆ ಮನ್ನಣೆ, ಮಾನ್ಯತೆಯಿದೆ. ಭಾರತದಲ್ಲಂತೂ ಪಂಚೆಯುಟ್ಟ ರೀತಿ ನೋಡಿಯೇ ಅವರು ಯಾವ ರಾಜ್ಯದವರೆಂದು ಗುರುತಿಸಬಹುದು. ಪಂಚೆಧಾರಿಯ ಹೆಗಲಿನ ಮೇಲ್ವಸ್ತ್ರವು ಸಾಂದರ್ಭಿಕ ಸ್ವಚ್ಛತೆಗೆ, ರಕ್ಷಣೆಗೆ ಉಪಯೋಗಿಸಬಹುದಾದ ಸಾಧನ. ಎಂದ ಮೇಲೆ ಪಂಚೆ, ಸೀರೆ ವೈಜ್ಞಾನಿಕ ದಿರಿಸು.

ಪಂಚೆಯ ಬಹೂಪಯೋಗಿತ್ವ ಸಾರುವ ನವಿರು ಕವನವಿದು: 'ಉಟ್ಟರೆ ಪಂಚೆಯಾದೆ/ ಹಾಸಿದರೆ ಹಾಸಿಗೆಯಾದೆ/ ಹೊದ್ದರೆ ಹೊದಿಕೆಯಾದೆ/ ಸುತ್ತಿದರೆ ತಲೆಗೆ ರುಮಾಲಾದೆ/ಸಂಡಿಗೆ ಒಣಹಾಕಲು ಅಜ್ಜಿಗೆ ಚಾಪೆಯಾದೆ/ ನೀನಾರಿಗಾದೆಯೋ ಎಲೆ ಪ್ಯಾಂಟೆ?'. ಬೆಂಜಮಿನ್ ಫ್ರ್ಯಾಂಕ್ಲಿನ್ 'ನಿಮಗೆ ತೃಪ್ತಿಯಾಗುವಂತೆ ಊಟ ಮಾಡಿ, ಪರರಿಗೆ ತೃಪ್ತಿಯಾಗುವಂತೆ ಉಡುಪು ಧರಿಸಿ' ಎಂದರು.

ವಾಚಕರ ವಾಣಿ

ವಾಲ್ಮೀಕಿಗೆ ತೋರುತ್ತಿರುವ ಅಗೌರವ

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಣ ದುರುಪಯೋಗದ ಕುರಿತು ಮಾತನಾಡುವಾಗ, ದೃಶ್ಯ ಮಾಧ್ಯಮ, ಮುದ್ರಣ ಮಾಧ್ಯಮದವರು ಮಾತ್ರವಲ್ಲದೆ ವಿಧಾನಸಭೆಯಲ್ಲಿ ಜನಪ್ರತಿನಿಧಿಗಳು ಸಹ 'ವಾಲ್ಮೀಕಿ ಹಗರಣ' ಎಂದೇ ಪ್ರಸ್ತಾಪಿಸುತ್ತಾರೆ. ಇದು, ಭರತ ಖಂಡಕ್ಕೆ ರಾಮಾಯಣವನ್ನು ಕೊಡುಗೆಯಾಗಿ ನೀಡಿದ ಮಹರ್ಷಿ ವಾಲ್ಮೀಕಿಗೆ ನಾವು ಮಾಡುತ್ತಿರುವ ಅವಮಾನ ಮತ್ತು ಅಗೌರವವಾಗಿದೆ. ಮಹರ್ಷಿ ವಾಲ್ಮೀಕಿಗೂ ಈ ಹಣಕ್ಕೂ ಏನು ಸಂಬಂಧ? ಇನ್ನು ಮುಂದೆಯಾದರೂ 'ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣ' ಎಂದೇ ಎಲ್ಲರೂ ಹೇಳುವಂತೆ ಆಗಲಿ.

ಬೂಕನಕೆರೆ ವಿಜೇಂದ್ರ, ಮೈಸೂರು

ಬೋರ್ಡೊ ಮಿಶ್ರಣಕ್ಕೆ ಬೇಕು ಸಹಾಯಧನ

ಮಲೆನಾಡು ಭಾಗದಲ್ಲಿ ಈಗ ಭಾರಿ ಪ್ರಮಾಣದಲ್ಲಿ ಮಳೆಯಾಗುತ್ತಿದ್ದು, ಅಡಿಕೆ ತೋಟಗಳಲ್ಲಿ ಕೊಳೆರೋಗದ ಭೀತಿಯಿಂದ ರೈತರು ಕಂಗಾಲಾಗಿದ್ದಾರೆ. ಸರ್ಕಾರ ಈ ಹಿಂದೆ ಅಡಿಕೆ ಕೊಳೆರೋಗಕ್ಕೆ ಬೋರ್ಡೊ ಮಿಶ್ರಣ ಸಿಂಪಡಿಸಲು ಸಹಾಯಧನ ನೀಡುತ್ತಿತ್ತು. ಆದರೆ ಈಗ ಕೆಲವು ವರ್ಷಗಳಿಂದ ಅದನ್ನು ನಿಲ್ಲಿಸಲಾಗಿದೆ. ಸರ್ಕಾರ ಈ ಸೌಲಭ್ಯ ನೀಡಿಕೆಯನ್ನು ಪುನರಾರಂಭಿಸಿದರೆ, ಆತಂಕದಲ್ಲಿರುವ ರೈತರಿಗೆ ಸ್ವಲ್ಪಮಟ್ಟಿಗೆ ಆಸರೆಯಾದೀತು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಹಣಕಾಸು ಬಳಕೆ: ತನಿಖೆ ಆಗಲಿ

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಕೋಟಿಗಟ್ಟಲೆ ಹಣ ದುರುಪಯೋಗ ಆಗಿರುವುದು ಒಬ್ಬ ಅಧಿಕಾರಿಯ ಆತ್ಮಹತ್ಯೆಯ ಮೂಲಕ ಬೆಳಕಿಗೆ ಬಂದಿತು. ಈಗ, ಭೋವಿ ನಿಗಮದಲ್ಲೂ ಹಣ ದುರುಪಯೋಗದ ಆರೋಪ ಕೇಳಿಬಂದಿರುವ ಕುರಿತು ವರದಿಯಾಗಿದೆ (ಪ್ರ.ವಾ., ಜುಲೈ 24). ಇದು, ನೂರಾರು ಕೋಟಿ ಅನುದಾನ ಪಡೆಯುತ್ತಿರುವ ಇತರ ನಿಗಮಗಳಲ್ಲೂ ತೆರಿಗೆದಾರನ ಹಣ 'ಸ್ವಾಹಾ' ಆಗಿರುವ ಬಗ್ಗೆ ಅನುಮಾನ ಮೂಡಿಸುತ್ತದೆ. ಈ ರೀತಿ ಹಣ ದುರುಪಯೋಗ ಆಗಲಿ ಎಂದೇ ಸರ್ಕಾರ ಅನುದಾನ ನೀಡುತ್ತಿದೆಯೇನೋ ಅನ್ನಿಸಿದರೂ ಆಶ್ಚರ್ಯವಿಲ್ಲ. ಎಲ್ಲಾ ನಿಗಮಗಳ ಹಣಕಾಸು ಬಳಕೆ ಕುರಿತು ತನಿಖೆ ನಡೆಸುವುದು ಅತಿ ಅವಶ್ಯ.

ಎಸ್.ವೆಂಕಟಕೃಷ್ಣ, ಬೆಂಗಳೂರು

ವಿಶೇಷವಿಲ್ಲದ 'ವಿಶೇಷ ಸ್ಥಾನಮಾನ'!

ಅಂದಿನ ಯುಪಿಎ ಸರ್ಕಾರವು ಸಂವಿಧಾನದ 371ನೇ ವಿಧಿಗೆ ತಿದ್ದುಪಡಿ ಮಾಡಿ, ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿಗಾಗಿ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳನ್ನು ಸೇರಿಸಿ ವಿಶೇಷ ಸ್ಥಾನಮಾನ ನೀಡಿತು. ಆದರೆ, ಅಭಿವೃದ್ಧಿ ಕಾರ್ಯಕ್ಕೆ ಹಣ ಕೊಡಲಿಲ್ಲ. ನಂತರ ಅಧಿಕಾರಕ್ಕೆ ಬಂದ ಎನ್‌ಡಿಎ ಸರ್ಕಾರ ಸಹ ಇದೇ ಪದ್ಧತಿಯನ್ನು ಮುಂದುವರಿಸಿದೆ.

ಕೇಂದ್ರದ ಪ್ರಸಕ್ತ ಬಜೆಟ್‌ನಲ್ಲಿ ಆಂಧ್ರಪ್ರದೇಶ ಹಾಗೂ ಬಿಹಾರಕ್ಕೆ ಹೆಚ್ಚಿನ ಅನುದಾನ ಘೋಷಿಸಲಾಗಿದೆ. ಈ ಎರಡು ರಾಜ್ಯಗಳಿಗೆ ಸಂವಿಧಾನದ ಪ್ರಕಾರ ವಿಶೇಷ ಸ್ಥಾನಮಾನ ಇಲ್ಲದಿರುವುದು ಗಮನಿಸಬೇಕಾದ ಅಂಶ. ಆದಾಗ್ಯೂ ಈ ರಾಜ್ಯಗಳು ಅನುದಾನ ಗಿಟ್ಟಿಸುವಲ್ಲಿ ಯಶಸ್ಸು ಕಂಡಿವೆ. ಎಲ್ಲ ಮೈತ್ರಿ ರಾಜಕಾರಣದ ಫಲ. ಯಥಾಪ್ರಕಾರ, ಕಲ್ಯಾಣ ಕರ್ನಾಟಕಕ್ಕೆ ರಾಜ್ಯ ಸರ್ಕಾರ ನೀಡುವ ಅನುದಾನವೇ ಗತಿ ಆದಂತಾಗಿದೆ.

ವೆಂಕಟೇಶ್ ಮುದಗಲ್, ಕಲಬುರಗಿ

ದೋಸ್ತಿ ಅಂದ್ರ...

2024ರ ಕೇಂದ್ರ
ಬಜೆಟ್‌ನಲ್ಲಿ
ಹೆಚ್ಚಿನ ಪಾಲು
ಪಡೆದುಕೊಂಡಿವೆ
ಬಿಹಾರ, ಆಂಧ್ರ...
ಇದಪ್ಪ, ದೋಸ್ತಿ
ಅಂದ್ರ...!

ವಿಜಯಮಹಾಂತೇಶ್ ಬಂಗಾರಗುಂಡ್
ಬಾಗಲಕೋಟೆ

ಅರ್ಹರನ್ನು ಗುರುತಿಸುವ ಅರ್ಹರಿಲ್ಲವೇ?

'ಪ್ರಶಸ್ತಿಗಾಗಿ ಶಿಕ್ಷಕರು ಖುದ್ದು ಅರ್ಜಿ ಹಾಕುವುದಕ್ಕೆ ಬದಲಾಗಿ ಶಿಕ್ಷಣ ಇಲಾಖೆಯೇ ಅಂತಹ ಶಿಕ್ಷಕರನ್ನು ಗುರುತಿಸಿ ಪ್ರಶಸ್ತಿ ನೀಡುವ ಜವಾಬ್ದಾರಿ ಹೊರಬೇಕು' ಎಂದು ಹುರುಕಡ್ಲಿ ಶಿವಕುಮಾರ ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಜುಲೈ 24). ಅವರು ಹೇಳುವಂತೆ, ಯಾವುದೇ ಸ್ವಾಭಿಮಾನಿ ತನ್ನ ವ್ಯಕ್ತಿಗತ ಘನತೆ, ಗೌರವವನ್ನು ಬದಿಗಿರಿಸಿ ಪ್ರಶಸ್ತಿಗೆ ತನ್ನ ಅರ್ಜಿಯನ್ನು ಪರಿಗಣಿಸುವಂತೆ ಖಂಡಿತ ಕೇಳಿಕೊಳ್ಳುವುದಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ತುಂಬ ಪ್ರಾಮಾಣಿಕರೂ ಪ್ರತಿಭಾಶಾಲಿಗಳೂ ಶಾಲೆಗೆ ಭೂಷಣರೂ ಆದ ಶಿಕ್ಷಕರು ಇದ್ದಾರೆ ಎನ್ನುವುದನ್ನು ಗುರುತಿಸಬಲ್ಲ ಅರ್ಹತೆಯುಳ್ಳ ಅಧಿಕಾರಿವರ್ಗ ಇಲಾಖೆಯಲ್ಲಿ ಇಲ್ಲದಿರುವುದೇ ಕಾರಣವಾಗಿ, ಬಹುಶಃ, ಹೀಗೆ ಅರ್ಜಿಗಳನ್ನು ಆಹ್ವಾನಿಸುವ ಅನಿವಾರ್ಯ ಇರಬಹುದೇ?

ಸಾಮಗ ದತ್ತಾತ್ರಿ, ಬೆಂಗಳೂರು

ಪ್ರತ್ಯೇಕ ಜ್ಞಾಪನಾಪತ್ರ ಬೇಕಿರಲಿಲ್ಲ

ಆರ್‌ಎಸ್‌ಎಸ್ ಸಂಘಟನೆಗೆ ಇನ್ನು ಸರ್ಕಾರಿ ನೌಕರರೂ ಸೇರಲು ಇದೀಗ ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಒಳಗೊಂಡಂತೆ ಕೆಲವು ಬಿಜೆಪಿ ಮುಖಂಡರ ವಿರುದ್ಧ 'ಗುಡುಗಿದ್ದ' ಸಂಘದ ಪ್ರಮುಖರ ಕೋಪವನ್ನು ಒಂದಿಷ್ಟು ಶಮನ ಮಾಡುವ ಇರಾದೆಯಿಂದಷ್ಟೇ ಈ ಕಾರ್ಯಕ್ಕೆ ಕೈಹಾಕಿರುವುದು ಸುಲಭವೇದ್ಯವಾಗುತ್ತದೆ. ಅದೇನೇ ಇದ್ದರೂ ಈ ಒಂದು ಪ್ರತ್ಯೇಕ ಜ್ಞಾಪನಾಪತ್ರದ ಅಗತ್ಯವೇ ಇರಲಿಲ್ಲ. ಕಾರಣ, ಅನೇಕ ದಶಕಗಳಿಂದ ಖಾಸಗಿ ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿನ ಅಸಂಖ್ಯಾತ ನೌಕರರು, ಅಧಿಕಾರಿಗಳು ಆರ್‌ಎಸ್‌ಎಸ್ ಕಾರ್ಯಕರ್ತರಂತೆ ದುಡಿಯುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಇದು ಎಷ್ಟರಮಟ್ಟಿಗೆ ಎಂದರೆ, ಕೆಲವು ಬಡಾವಣೆಗಳಲ್ಲಿ ಬೆಳಿಗ್ಗೆ ಅಥವಾ ಸಂಜೆ ಧ್ವಜದ ಸುತ್ತ ನಿಂತ ಬಡ ಮಕ್ಕಳಿಗೆ ದೇಶಭಕ್ತಿ ಗೀತೆಗಳನ್ನು ಅವರದೇ ರೀತಿ ಹೇಳಿಕೊಡಲಾಗುತ್ತಿದೆ. ಲಾಠಿ ಅಭ್ಯಾಸ ಮಾಡಿಸಲಾಗುತ್ತಿದೆ. ದೆಹಲಿಯ ಜೆಎನ್‌ಯು, ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾಲಯದಂತಹ ವಿದ್ಯಾಸಂಸ್ಥೆಗಳಲ್ಲಿನ ಆಗಾಗಿನ ವಿದ್ಯಮಾನಗಳ ಬಗ್ಗೆ ಮಾಧ್ಯಮಗಳೇ ಬೆಳಕು ಚೆಲ್ಲಿವೆ.

ಗೋವಿಂದು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



‘ಸಂಘ’ಕ್ಕೆ ಮತ್ತೆ ಸರ್ಕಾರಿ ಮನ್ನಣೆ?

ನೌಕರರು ಆರ್‌ಎಸ್‌ಎಸ್‌ನೊಂದಿಗೆ ಗುರುತಿಸಿಕೊಳ್ಳುವುದಕ್ಕೆ ಹೇರಲಾಗಿದ್ದ ನಿರ್ಬಂಧ ಸದ್ದಿಲ್ಲದೆ ವಾಪಸ್

ಸರ್ಕಾರಿ ನೌಕರರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸದಸ್ಯರಾಗುವುದಕ್ಕೆ ಮತ್ತು ಅದರ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ 1966ರಲ್ಲಿ ಹೇರಿದ್ದ ನಿರ್ಬಂಧವನ್ನು ಎನ್‌ಡಿಎ ಸರ್ಕಾರ ಇತ್ತೀಚೆಗೆ ತೆರವುಗೊಳಿಸಿರುವುದು ರಾಜಕೀಯ ವಲಯದಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಚರ್ಚೆ ಹುಟ್ಟುಹಾಕಿದೆ. ಕೇಂದ್ರವು ದಿಢೀರ್ ಆಗಿ ಈ ನಿರ್ಧಾರ ತೆಗೆದುಕೊಂಡ ಸಮಯ, ಉದ್ದೇಶಗಳ ಬಗ್ಗೆ ಹಲವು ಪ್ರಶ್ನೆಗಳು ಎದ್ದಿವೆ...

ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಈ ಹಿಂದಿನ ಅವಧಿಗಳಲ್ಲಿ ಮಹತ್ವದ ವಿಚಾರಗಳ ಬಗ್ಗೆ ದಿಢೀರ್ ನಿರ್ಧಾರ ತಳೆದು ಜನರಲ್ಲಿ ಅಚ್ಚರಿ ಮೂಡಿಸುತ್ತಿತ್ತು. ಮೂರನೇ ಅವಧಿಯಲ್ಲಿಯೂ ಇಂತಹದ್ದೇ ಒಂದು ನಿರ್ಧಾರವನ್ನು ತೆಗೆದುಕೊಂಡು, ಅದನ್ನು ಸದ್ದಿಲ್ಲದೇ ಜಾರಿಗೆ ತಂದಿದೆ.

ಸರ್ಕಾರಿ ನೌಕರರು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸದಸ್ಯತ್ವ ಪಡೆಯುವುದಕ್ಕೆ ಮತ್ತು ಅದರ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಕ್ಕೆ ಹೇರಲಾಗಿದ್ದ ನಿರ್ಬಂಧವನ್ನು ಇತ್ತೀಚೆಗೆ ಕೇಂದ್ರ ಸರ್ಕಾರ ತೆರವುಗೊಳಿಸಿದೆ.

ವಾಸ್ತವವಾಗಿ, ಕೇಂದ್ರ ಸರ್ಕಾರದ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯವು ಜುಲೈ 9ರಂದೇ ಜ್ಞಾಪನಾ ಪತ್ರವನ್ನು ಹೊರಡಿಸಿದೆ. ಆದರೆ, ಅದನ್ನು ಬಯಲಿಗೆ ತಂದಿದ್ದು ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ಸಮಿತಿಯ ಮುಖ್ಯಸ್ಥ ಪವನ್ ಖೇರಾ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್. ಜುಲೈ 21ರಂದು ‘ಎಕ್ಸ್’ನಲ್ಲಿ ಜ್ಞಾಪನಾ ಪತ್ರವನ್ನು ಇಬ್ಬರೂ ಹಂಚಿಕೊಂಡರು. ‘58 ವರ್ಷಗಳ ಹಿಂದೆ, ಸರ್ಕಾರಿ ನೌಕರರು ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಸರ್ಕಾರ ನಿಷೇಧಿಸಿತ್ತು. ಮೋದಿ ಸರ್ಕಾರ ನಿಷೇಧವನ್ನು ಹಿಂತೆಗೆದುಕೊಂಡಿದೆ’ ಎಂದು ಪವನ್ ಖೇರಾ ಉಲ್ಲೇಖಿಸಿದ್ದರು.

ಜೈರಾಂ ರಮೇಶ್ ಅವರು ಮೋದಿ ಸರ್ಕಾರವು ಹೊರಡಿಸಿರುವ ಜ್ಞಾಪನಾ ಪತ್ರದ ಜತೆಗೆ 1966ರಲ್ಲಿ ಸರ್ಕಾರಿ ಸಿಬ್ಬಂದಿ ಆರ್‌ಎಸ್‌ಎಸ್ ಜತೆಗೆ ಗುರುತಿಸಿಕೊಳ್ಳದಂತೆ ನಿಷೇಧ ಹೇರಿದ್ದ ಮೂಲ ಆದೇಶದ ಪ್ರತಿಯನ್ನೂ ಹಂಚಿಕೊಂಡಿದ್ದರು. ಜುಲೈ 22ರಂದು ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಬಿಜೆಪಿ ಐಟಿ ಸೆಲ್ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರು, ‘1966ರಲ್ಲಿ ಆರ್‌ಎಸ್‌ಎಸ್ ಮೇಲೆ ಹೇರಿದ್ದ ಅಸಾಂವಿಧಾನಿಕ ನಿಷೇಧವನ್ನು ಮೋದಿ ಸರ್ಕಾರವು ಹಿಂದಕ್ಕೆ ಪಡೆದಿದೆ’ ಎಂದು ಉಲ್ಲೇಖಿಸಿ, ಅದಕ್ಕೆ ಮತ್ತೊಂದು ಆಯಾಮ ನೀಡಿದರು.

ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರವೇನೆಂದರೆ, 1966ರಲ್ಲಿ ಕೇಂದ್ರ ಸರ್ಕಾರ ಹೊರಡಿಸಿದ್ದ ಆದೇಶದಲ್ಲಿ, 1964ರ ಭಾರತೀಯ ಸೇವಾ ನಿಯಮ (5) ಉಪನಿಯಮ (1)ರ ಪ್ರಕಾರ, ಸರ್ಕಾರಿ ಸಿಬ್ಬಂದಿ, ಆರ್‌ಎಸ್‌ಎಸ್ ಮತ್ತು ‘ಜಮಾತ್‌-ಎ-ಇಸ್ಲಾಮಿ’ ಸಂಘಟನೆಗಳ ಸದಸ್ಯತ್ವ ಪಡೆಯುವುದನ್ನು ಮತ್ತು ಅವುಗಳ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿತ್ತು. ಮೋದಿ ಸರ್ಕಾರ ಜುಲೈ 9ರಂದು ಹೊರಡಿಸಿರುವ ಜ್ಞಾಪನಾ ಪತ್ರದಲ್ಲಿ ಆರ್‌ಎಸ್‌ಎಸ್ ಅನ್ನು ಈ ಹಿಂದಿನ 1966ರ ಆದೇಶದಿಂದ ಹೊರಗಿಟ್ಟಿರುವುದಾಗಿ ತಿಳಿಸಿದೆ. ಆದರೆ, ಜ್ಞಾಪನಾ ಪತ್ರದಲ್ಲಿ ಮತ್ತೊಂದು ಸಂಘಟನೆಯಾದ ‘ಜಮಾತ್‌-ಎ-ಇಸ್ಲಾಮಿ’ ಕುರಿತು ಪ್ರಸ್ತಾಪ ಮಾಡಿಲ್ಲ. ಇದರ ಬಗ್ಗೆ ವಿರೋಧ ಪಕ್ಷಗಳು ಸೇರಿದಂತೆ ಹಲವರಿಂದ ಮೋದಿ ಸರ್ಕಾರದ ವಿರುದ್ಧ ಟೀಕೆ ಹಾಗೂ ವಿರೋಧ ವ್ಯಕ್ತವಾಗಿದೆ.

ನಿರ್ಧಾರಕ್ಕೆ ವಿರೋಧ ಏಕೆ?

- ತಾತ್ವಿಕತೆಯ ಆಧಾರದ ಮೇಲೆ ಸರ್ಕಾರಿ ನೌಕರರನ್ನು ರಾಜಕೀಯಗೊಳಿಸುವ ಯತ್ನ
- ನೌಕರರ ತಟಸ್ಥ ಮನೋಧರ್ಮಕ್ಕೆ ಸವಾಲು
- ಸಾಂವಿಧಾನಕ ಸಂಸ್ಥೆಗಳ ಮೇಲೆ ಹಿಡಿತ ಮುಂದುವರೆಸುವ ಯತ್ನ
- ಸಂವಿಧಾನದ ಅನುಸಾರ, ರಾಜಕೀಯ ಕಾರ್ಯಸೂಚಿ ಇಲ್ಲದೇ ಸಾಮಾಜಿಕ ಸಂಘಟನೆಯಾಗಿ ಮಾತ್ರ ಕೆಲಸ ಮಾಡುತ್ತೇವೆ ಎಂದು ನೆಹರು ಅವರಿಗೆ ಆರ್‌ಎಸ್‌ಎಸ್ ನೀಡಿದ್ದ ವಾಗ್ದಾನದ ಉಲ್ಲಂಘನೆ
- ಆರ್‌ಎಸ್‌ಎಸ್‌ಗೆ ಭಾರತದ ವೈವಿಧ್ಯ, ಬಹುಸಂಸ್ಕೃತಿಗಳ ಬಗ್ಗೆ ನಂಬಿಕೆ ಇಲ್ಲ. ಅವರು ಹಿಂದೂ ರಾಷ್ಟ್ರೀಯತೆಯ ಮೇಲೆ ಪ್ರತಿಜ್ಞಾ ವಿಧಿ ಸ್ವೀಕರಿಸುತ್ತಾರೆ. ಹಾಗಾಗಿ ಇದು ಭಾರತದ ರಾಷ್ಟ್ರೀಯತೆಗೆ ವಿರುದ್ಧ

ಆರ್‌ಎಸ್‌ಎಸ್ 3 ಬಾರಿ ನಿಷೇಧ

- **1948**ರಲ್ಲಿ ಮಹಾತ್ಮ ಗಾಂಧಿಯವರ ಹತ್ಯೆಯ ಬಳಿಕ
- **1975**ರಲ್ಲಿ ಇಂದಿರಾ ಗಾಂಧಿ ಅವರು ತುರ್ತು ಪರಿಸ್ಥಿತಿ ಹೇರಿದ ಸಂದರ್ಭದಲ್ಲಿ
- **1992**ರಲ್ಲಿ ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಧ್ವಂಸ ಪ್ರಕರಣದ ನಂತರ

ಆರ್‌ಎಸ್‌ಎಸ್ ಮೆಚ್ಚಿಸುವ ಪ್ರಯತ್ನವೇ? : 2014 ಮತ್ತು 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಪೂರ್ಣ ಬಹುಮತ ಬಂದಿತ್ತು. 10 ವರ್ಷ ಅಧಿಕಾರದಲ್ಲಿದ್ದಾಗ ಈ ನಿರ್ಬಂಧ ತೆರವುಗೊಳಿಸಬಹುದಿತ್ತು. ಆದರೆ, ಆಗ ನಿರ್ಧಾರ ಕೈಗೊಳ್ಳದ ಬಿಜೆಪಿ, ಈಗ ಮೂರನೇ ಅವಧಿಯಲ್ಲಿ ಪೂರ್ಣ ಬಹುಮತ ಇಲ್ಲದಿದ್ದರೂ, ನಿರ್ಬಂಧ ವಾಪಸ್ ಪಡೆದಿದ್ದಾದರೂ ಏಕೆ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ನಡೆಯುತ್ತಿದೆ.

ಬಿಜೆಪಿಯೊಂದಿಗೆ ಮುನಿಸಿಕೊಂಡಿರುವ ಆರ್‌ಎಸ್‌ಎಸ್ ಅನ್ನು ಮೆಚ್ಚಿಸಲು ಸರ್ಕಾರ ನಿರ್ಬಂಧ ತೆರವು ಮಾಡಿದೆ ಎಂದು ಪ್ರಮುಖವಾಗಿ ವಿಶ್ಲೇಷಿಸಲಾಗುತ್ತಿದೆ.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಈ ಬಾರಿಯ ಚುನಾವಣಾ ಫಲಿತಾಂಶದ ನಂತರ ನೀಡಿದ್ದ (ನಿಜವಾದ ಜನಸೇವಕನಿಗೆ ಅಹಂಕಾರ ಇರುವುದಿಲ್ಲ. ಬೇರೆಯವರಿಗೆ ನೋವುಂಟು ಮಾಡದೆ ಕೆಲಸ ಮಾಡುತ್ತಾನೆ) ಮತ್ತು ವಾರದ ಹಿಂದೆ ನೀಡಿದ್ದ (ಮನುಷ್ಯ ಸೂಪರ್‌ಮ್ಯಾನ್, ದೇವರು, ಭಗವಂತ ಆಗಲು ಬಯಸುತ್ತಾನೆ) ಹೇಳಿಕೆಗಳು ಪರೋಕ್ಷವಾಗಿ ಪ್ರಧಾನಿ ಮೋದಿ ಅವರನ್ನು ಗುರಿಯಾಗಿಸಿಕೊಂಡಿದ್ದವು ಎಂಬರ್ಥದಲ್ಲಿ ಚರ್ಚೆ ನಡೆದಿತ್ತು. ವಿರೋಧ ಪಕ್ಷದ ಮುಖಂಡರು ಈ ಹೇಳಿಕೆಗಳನ್ನು ಇಟ್ಟುಕೊಂಡು ಮೋದಿಯವರನ್ನು ಕುಟುಕಿದ್ದರು.

ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಡುವಿನ ಸಂಬಂಧದ ಬಗ್ಗೆ ಮಾತನಾಡಿದ್ದ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ‘ಪಕ್ಷವು ಈಗ ಬೆಳೆದಿದೆ. ಹಿಂದಿನಂತೆ ಆರ್‌ಎಸ್‌ಎಸ್‌ನ ಅಗತ್ಯ ಬೇಕಿಲ್ಲ. ತನ್ನ ವ್ಯವಹಾರಗಳನ್ನು ನಡೆಸುವ ಸಾಮರ್ಥ್ಯವನ್ನು ಹೊಂದಿದೆ. ಆರ್‌ಎಸ್‌ಎಸ್ ಒಂದು ಸೈದ್ಧಾಂತಿಕ ಸಂಘಟನೆಯಾಗಿದ್ದು, ಅದರ ಕೆಲಸವನ್ನು ಅದು ಮಾಡುತ್ತಿದೆ’ ಎಂದು ಹೇಳಿದ್ದರು.

‘ಆರ್‌ಎಸ್‌ಎಸ್-ಬಿಜೆಪಿ ನಡುವಿನ ಸಂಬಂಧದಲ್ಲಿ ಬಿರುಕು ಉಂಟಾಗಿದೆ. ಈ ಚುನಾವಣೆಯಲ್ಲಿ ಸಂಘವು ಸಕ್ರಿಯವಾಗಿ ತೊಡಗಿಕೊಂಡಿಲ್ಲ’ ಎಂಬ ಮಾತುಗಳು ಚುನಾವಣೆ ಹೊತ್ತಿನಲ್ಲಿ ಕೇಳಿಬಂದಿದ್ದವು.

ಈಗ ಸರ್ಕಾರ ನಡೆಸಲು ಮೈತ್ರಿ ಪಕ್ಷಗಳ ಸಹಕಾರ ಅನಿವಾರ್ಯ ಎಂಬ ಪರಿಸ್ಥಿತಿ ಇದೆ. ಪ್ರಮುಖ ರಾಜ್ಯಗಳಲ್ಲಿ ಚುನಾವಣೆಗಳೂ ನಡೆಯಲಿವೆ. ಈ ಸಂದರ್ಭದಲ್ಲಿ ಪಕ್ಷದ ಸಿದ್ಧಾಂತದ ತಾಯಿ ಬೇರು ಆರ್‌ಎಸ್‌ಎಸ್‌ನೊಂದಿನ ಸಂಬಂಧ ಇನ್ನಷ್ಟು ಹಳಸುವುದನ್ನು ತಪ್ಪಿಸಲು ಬಿಜೆಪಿ ಈ ತೀರ್ಮಾನ ಕೈಗೊಂಡಿದೆ ಎಂಬುದು ಈಗ ನಡೆಯುತ್ತಿರುವ ವಿಶ್ಲೇಷಣೆಯ ತಿರುಳು. ಮುಂದಿನ ವರ್ಷಕ್ಕೆ ಆರ್‌ಎಸ್‌ಎಸ್‌ಗೆ 100 ವರ್ಷಗಳಾಗುತ್ತವೆ. ಸಂಘಟನೆಗೆ ಇನ್ನಷ್ಟು ಶಕ್ತಿ ತುಂಬಲು ಕೇಂದ್ರ ಸರ್ಕಾರ ಈ ನಿರ್ಧಾರ ಕೈಗೊಂಡಿರಬಹುದು ಎಂದು ಹೇಳುತ್ತದೆ ಮತ್ತೊಂದು ವಿವರಣೆ.

ಆದರೆ, ಆರ್‌ಎಸ್‌ಎಸ್‌ನ ವಾದವೇ ಬೇರೆ.

‘ಇಂತಹ ಆದೇಶ ಇತ್ತು ಎಂಬುದು ಬಹುತೇಕರಿಗೆ ಗೊತ್ತಿಲ್ಲ. ಈಗ ಅದರ ಪ್ರಸ್ತುತತೆಯೂ ಇಲ್ಲ. ಆದೇಶ ಇದ್ದರೂ, ಸರ್ಕಾರಿ ನೌಕರರು ಸಂಘಟನೆಯಲ್ಲಿ ತೊಡಗಿಕೊಂಡಿದ್ದರು. ಸೇವಾ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಆರ್‌ಎಸ್‌ಎಸ್ ಪ್ರಮುಖ ಆಶಯಗಳಾಗಿದ್ದ ರಾಮಮಂದಿರ ನಿರ್ಮಾಣ, ಜಮ್ಮು ಮತ್ತು ಕಾಶ್ಮೀರಕ್ಕಿದ್ದ ವಿಶೇಷ ಸ್ಥಾನಮಾನ ತೆರವಿನಂತಹ ನಿರ್ಧಾರಗಳನ್ನು ಮೋದಿ ಸರ್ಕಾರ ಮಾಡಿದೆ. ಇದು ಅದಕ್ಕಿಂತ ದೊಡ್ಡ ನಿರ್ಧಾರವೇ’ ಎಂಬುದು ಆರ್‌ಎಸ್‌ಎಸ್‌ನಲ್ಲಿ ಗುರುತಿಸಿಕೊಂಡವರ ಪ್ರಶ್ನೆ.

1966ರ ಆದೇಶದಲ್ಲಿ ಏನಿದೆ?

‘ಸರ್ಕಾರಿ ನೌಕರರು ಆರ್‌ಎಸ್‌ಎಸ್ ಮತ್ತು ಜಮಾತ್‌-ಎ-ಇಸ್ಲಾಮಿ ಸಂಘಟನೆಗಳ ಸದಸ್ಯರಾಗುವುದು ಮತ್ತು ಅವುಗಳ ಚಟುವಟಿಕೆಗಳಲ್ಲಿ ಭಾಗವಹಿಸುವ ವಿಚಾರವಾಗಿ ಕೆಲವು ಅನುಮಾನಗಳು ವ್ಯಕ್ತವಾಗಿವೆ. ಈ ಎರಡು ಸಂಘಟನೆಗಳ ಚಟುವಟಿಕೆಗಳ ಸ್ವರೂಪಗಳು ಹೇಗಿರುತ್ತವೆ ಎಂದರೆ, ಅವುಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸುವುದು ಕೇಂದ್ರ ನಾಗರಿಕ ಸೇವಾ ನಿಯಮಗಳು–1964ರ 5ನೇ ನಿಯಮದ ಒಂದನೇ ಉಪನಿಯಮಕ್ಕೆ ವಿರುದ್ಧ ಎಂದು ಸರ್ಕಾರ ಯಾವಾಗಲೂ ಪರಿಭಾವಿಸಿದೆ ಎಂದು ಸ್ಪಷ್ಟಪಡಿಸಲಾಗಿದೆ. ಈ ಸಂಘಟನೆಗಳ ಸದಸ್ಯರಾಗಿರುವ ಅಥವಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಯಾವುದೇ ನೌಕರರು ಶಿಸ್ತು ಕ್ರಮಕ್ಕೆ ಅರ್ಹರು’ ಎಂದು ಗೃಹ ಸಚಿವಾಲಯ 1966ರ ನವೆಂಬರ್ 30ರಂದು ಹೊರಡಿಸಿರುವ ಆದೇಶದಲ್ಲಿ ಹೇಳಲಾಗಿದೆ.

ಕೇಂದ್ರ ನಾಗರಿಕ ಸೇವಾ ನಿಯಮಗಳು 1964ರ 5ನೇ ನಿಯಮದ 1ನೇ ಉಪನಿಯಮ ಹೇಳುವುದೇನು?

ಸರ್ಕಾರಿ ನೌಕರ ಯಾವುದೇ ರಾಜಕೀಯ ಪಕ್ಷ ಅಥವಾ ರಾಜಕೀಯದಲ್ಲಿ ತೊಡಗಿಕೊಂಡಿರುವ ಅಥವಾ ತೊಡಗಿಕೊಳ್ಳಲಿರುವ ಸಂಘಟನೆಗಳ ಸದಸ್ಯರಾಗುವಂತಿಲ್ಲ ಅಥವಾ ಅವುಗಳೊಂದಿಗೆ ಗುರುತಿಸಿಕೊಳ್ಳುವಂತಿಲ್ಲ ಅಥವಾ ರಾಜಕೀಯ ಚಳವಳಿ, ಚಟುವಟಿಕೆಗಳಿಗೆ ಯಾವುದೇ ರೀತಿಯಲ್ಲಿ ನೆರವು ನೀಡುವಂತಿಲ್ಲ.


100 ರ ತ್ತ ಹೆಜ್ಜೆ

ಹಿಂದೂ ಸಂಸ್ಕೃತಿ, ಹಿಂದುತ್ವ ವಿಚಾರಧಾರೆಗಳನ್ನು ಮುಂದಿಟ್ಟುಕೊಂಡು ದೇಶದಲ್ಲಿ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಮುಂದಿನ ವರ್ಷ 100 ವರ್ಷ ತುಂಬುತ್ತದೆ. ಭಾರತದಲ್ಲಿ ಹಿಂದೂ ಸಮಾಜದ ಅಡಿಪಾಯವನ್ನು ಬಲಪಡಿಸಲು, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ, ತತ್ವ ಮತ್ತು ರಾಜಕೀಯ ಸವಾಲುಗಳನ್ನು ಎದುರಿಸುವ ಉದ್ದೇಶದಿಂದ ಡಾ.ಕೇಶವ ಬಲಿರಾಂ ಹೆಡಗೇವಾರ್ ಅವರು 1925ರ ಸೆ.27ರಂದು ವಿಜಯದಶಮಿಯ ದಿನ ನಾಗಪುರದಲ್ಲಿ ಆರ್‌ಎಸ್‌ಎಸ್ ಸ್ಥಾಪಿಸಿದರು.

ಆಧಾರ: ಪಿಟಿಐ, ಎಎಫ್‌ಪಿ, ‘ಎಕ್ಸ್’ ವೇದಿಕೆಯ ಟ್ವೀಟ್‌ಗಳು, ಆರ್‌ಎಸ್‌ಎಸ್ ವೆಬ್‌ಸೈಟ್, 1966ರ ಆದೇಶ, ಕೇಂದ್ರ ನಾಗರಿಕ ಸೇವಾ ನಿಯಮಗಳು–1964

ಸಿನಿ ಬಿಟ್ಸ್

ಶೀಘ್ರದಲ್ಲಿ ಸೆಟ್ಟೇರಲಿದೆ ಶಿವಣ್ಣ ಹೊಸ ಸಿನಿಮಾ



ಶಿವರಾಜ್‌ಕುಮಾರ್

ನಟ ಶಿವರಾಜ್‌ಕುಮಾರ್ ಕೈಯ್ಯಲ್ಲಿ ಸಾಲು ಸಾಲು ಸಿನಿಮಾಗಳಿವೆ. ಅವರ ಜನ್ಮದಿನದಂದು ಮತ್ತೊಂದಷ್ಟು ಸಿನಿಮಾಗಳು ಆ ಪಟ್ಟಿ ಸೇರಿದ್ದವು. ಈಗಾಗಲೇ ಘೋಷಣೆಯಾಗಿರುವ ದಿನಕರ್ ಜೊತೆಗಿನ ಶಿವಣ್ಣ ಸಿನಿಮಾ, ನಿರ್ದೇಶಕ ಲೋಹಿತ್ ಜೊತೆಗಿನ ‘ಸತ್ಯಮಂಗಲ’ ಮೊದಲಾದ ಚಿತ್ರಗಳ ಕುರಿತು ಈತನಕ ಯಾವುದೇ ಅಪ್‌ಡೇಟ್ ಇಲ್ಲ.

ಸದ್ಯ ‘45’, ‘ಉತ್ತರಕಾಂಡ’ ಚಿತ್ರೀಕರಣದಲ್ಲಿ ಶಿವಣ್ಣ ಮಗ್ನರಾಗಿದ್ದಾರೆ. ಅವರ ಜನ್ಮದಿನಕ್ಕೆ 131ನೇ ಚಿತ್ರದ ಇಂಟ್ರಡಕ್ಷನ್ ಟೀಸರ್ ರಿಲೀಸ್ ಆಗಿತ್ತು. ಮುಂದಿನ ತಿಂಗಳಿನಿಂದ ಇನ್ನೂ ಹೆಸರಿಡದ ಈ ಚಿತ್ರದ ಚಿತ್ರೀಕರಣ ಪ್ರಾರಂಭವಾಗಲಿದೆ. ‘ಸ್ಕ್ರಿಪ್ಟ್ ಹಂತದಲ್ಲಿದೆ. ಬಹಳ ಹಿಂದೆಯೇ ಶಿವಣ್ಣ ಡೇಟ್ ನೀಡಿರುವುದರಿಂದ ಮುಂದಿನ ತಿಂಗಳು ಚಿತ್ರದ ಒಂದು ಭಾಗವನ್ನು ಚಿತ್ರೀಕರಣ ಮಾಡುವ ಆಲೋಚನೆ ನಡೆದಿದೆ’ ಎನ್ನುತ್ತಿವೆ ಚಿತ್ರತಂಡದ ಮೂಲಗಳು. ತಮಿಳಿನ ಕಾರ್ತಿಕ್ ಅದ್ವೈತ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಹಿಂದೆ ತಮಿಳಿನ ‘ಪಾಯುಮ್ ಒಲಿ ನೀ ಎನಕ್ಕು’ ಚಿತ್ರ ನಿರ್ದೇಶಿಸಿದ್ದರು. ವಿಕ್ರಂ ಪ್ರಭು ನಾಯಕನಾಗಿ ಕಾಣಿಸಿಕೊಂಡಿದ್ದ ಈ ಚಿತ್ರದಲ್ಲಿ ಡಾಲಿ ಧನಂಜಯ ಕೂಡ ನಟಿಸಿದ್ದರು. ಭುವನೇಶ್ವರಿ ಪ್ರೊಡಕ್ಷನ್‌ನಡಿ ಎಸ್.ಎನ್. ರೆಡ್ಡಿ ಹಾಗೂ ಸುಧೀರ್ ಪಿ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

‘ವಿಕ್ರಂ ವೇದ’ ಸಿನಿಮಾ ಖ್ಯಾತಿಯ ಸ್ಯಾಮ್ ಸಿ.ಎಸ್ ಸಂಗೀತ ಒದಗಿಸಲಿದ್ದಾರೆ. ಎ.ಜೆ ಶೆಟ್ಟಿ ಛಾಯಾಚಿತ್ರಗ್ರಹಣ, ದೀಪು ಎಸ್ ಕುಮಾರ್ ಸಂಕಲನ ಚಿತ್ರಕ್ಕಿದೆ. ಇದೊಂದು ಆ್ಯಕ್ಷನ್ ಥ್ರಿಲ್ಲರ್ ಸಿನಿಮಾವಾಗಿದ್ದು, ಶಿವಣ್ಣ ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದಿದೆ ಚಿತ್ರತಂಡ. ❖

ಕುಡುಬಿ ಜನಾಂಗದ ಕಥೆ



ಕುಡುಬಿ ನೃತ್ಯದ ದೃಶ್ಯ

‘ಮುಂಗಾರು ಮಳೆ’ ಚಿತ್ರದ ನಂತರ ಅದೇ ರೀತಿಯ ಹತ್ತಾರು ಚಿತ್ರಗಳು ಬಂದವು. ‘ಕಾಂತಾರ’ ಯಶಸ್ಸಿನ ನಂತರ ಆಯಾ ಪ್ರದೇಶದ ಸಂಪ್ರದಾಯ, ಆಚರಣೆಗಳನ್ನು ತೋರಿಸುವ ಚಿತ್ರಗಳು ಬರುತ್ತಲೇ ಇವೆ. ಆ ಸಾಲಿಗೆ ಮತ್ತೊಂದು ಸೇರ್ಪಡೆ ‘ಗುಮ್ಟಿ’. ಚಿತ್ರದ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಈ ಹಿಂದೆ ‘ಇನಾಮ್ದಾರ್’ ಚಿತ್ರ ನಿರ್ದೇಶಿಸಿದ್ದ ಸಂದೇಶ್ ಶೆಟ್ಟಿ ಆಜ್ರಿ ಈ ಸಿನಿಮಾವನ್ನು ನಿರ್ದೇಶಿಸುವುದರ ಜೊತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ. ‘ಉಡುಪಿ ಜಿಲ್ಲೆಯ ಮಂದಾರ್ತಿ ಭಾಗದಲ್ಲಿ ಪ್ರಮುಖವಾಗಿ ಕಂಡುಬರುವ ಕುಡುಬಿ ಜನಾಂಗದ ಕಥೆಯನ್ನು ಹೊಂದಿದೆ. ‘ಗುಮ್ಟಿ’ ಎಂಬುದು ಅವರು ಜನಪದ ಕಲೆಯಲ್ಲಿ ಬಳಸುವ, ಮಡಕೆಯಿಂದ ಮಾಡಿದ ವಾದ್ಯ. ಗೋವಾದಲ್ಲಿ ಪೋರ್ಚುಗೀಸರ ದಾಳಿಗೆ ತುತ್ತಾಗಿ ರಾಜ್ಯದೆಲ್ಲೆಡೆ ಬಂದು ನೆಲೆಸಿದ ಕುಡುಬಿ ಜನಾಂಗದ ಹೋರಾಟ, ಸಂಸ್ಕೃತಿ, ಸಂಪ್ರದಾಯಗಳನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ’ ಎಂದು ಚಿತ್ರದ ಕುರಿತು ವಿವರಿಸಿದರು ನಿರ್ದೇಶಕರು.

ವೈಷ್ಣವಿ ನಾಡಿಗ್ ನಾಯಕಿ, ವಿಕಾಸ್ ಶೆಟ್ಟಿ ಬಂಡವಾಳ ಹೂಡಿದ್ದಾರೆ. ‘ನಿರ್ಮಾಪಕರಿಗೆ ಕಾಂತಾರದಷ್ಟು ದೊಡ್ಡಮಟ್ಟದಲ್ಲಿಯೇ ಈ ಚಿತ್ರ ಮಾಡಬೇಕೆಂಬ ಹಂಬಲವಿತ್ತು. ಆದರೆ ಚಿತ್ರರಂಗದ ಪರಿಸ್ಥಿತಿ ಸರಿಯಿಲ್ಲ. ಚಿತ್ರಮಂದಿರಗಳಿಗೆ ಜನ ಬರುತ್ತಿಲ್ಲ. ಹೀಗಾಗಿ 20 ದಿನಗಳ ಕಾಲ ಚಿತ್ರೀಕರಣ ನಡೆಸಿ, ಬಹಳ ಕಡಿಮೆ ಬಜೆಟ್‌ನಲ್ಲಿ ಚಿತ್ರವನ್ನು ಮುಗಿಸಿದ್ದೇವೆ. ನೈಜವಾದ ಕಥೆಯನ್ನು ಹೇಳುವ ಕಲಾತ್ಮಕ ಚಿತ್ರವಿದು. ಶೀಘ್ರದಲ್ಲಿ ತೆರೆಗೆ ಬರಲಿದೆ’ ಎಂದರು ಸಂದೇಶ್ ಶೆಟ್ಟಿ.

ಡೂಂಡಿ ಮೋಹನ್ ಸಂಗೀತ, ಅನೀಶ್ ಡಿಸೋಜ ಛಾಯಾಚಿತ್ರಗ್ರಹಣ, ಶಿವರಾಜ್ ಮೇಜು ಸಂಕಲನ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಎರಡು ತುಣುಕುಗಳನ್ನೊಳಗೊಂಡ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಮೊದಲ ಕ್ಲಿಪ್‌ನಲ್ಲಿ ಮುಸ್ಲಿಂ ಸಮುದಾಯದ ಕೆಲವರು ಬೈಕ್ ಮೇಲೆ ಪ್ರಯಾಣಿಸುತ್ತಿದ್ದವರೊಬ್ಬರ ಮೇಲೆ ಹಲ್ಲೆ ನಡೆಸುತ್ತಾರೆ. ಎರಡನೆಯ ವಿಡಿಯೊದಲ್ಲಿ ಕೆಲವರು ವ್ಯಕ್ತಿಯೊಬ್ಬರ ತಲೆ ಕಡಿಯುವ ದೃಶ್ಯವಿದೆ. ಅದರ ಆಧಾರದ ಮೇಲೆ, ಕೆಲವು ಮುಸ್ಲಿಮರು ಹಿಂದೂ ವ್ಯಕ್ತಿಯೊಬ್ಬರನ್ನು ಹತ್ಯೆ ಮಾಡಿದ್ದಾರೆ ಎಂದು ಹರಡಲಾಗುತ್ತಿದೆ. ಈ ಎರಡೂ ಇತ್ತೀಚೆಗೆ ಭಾರತದಲ್ಲಿ ನಡೆದ ಘಟನೆಗಳು ಎಂದು ಉಲ್ಲೇಖಿಸುತ್ತಾ, ಜಾಲತಾಣಗಳಲ್ಲಿ ವಿಡಿಯೊ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇವೆರಡೂ ಸುಳ್ಳು ಸುದ್ದಿಗಳಾಗಿವೆ.



ಇನ್‌ವಿಡ್ ಟೂಲ್ ಸರ್ಚ್ ಹಾಗೂ ಗೂಗಲ್ ಲೆನ್ಸ್ ಮೂಲಕ ಪರಿಶೀಲನೆಗೊಳಪಡಿಸಿದಾಗ, ಅದೇ ವಿಡಿಯೊ ಅನ್ನು ಹಲವರು ಹಂಚಿಕೊಂಡಿರುವುದು ಕಂಡುಬಂತು. ಈ ಬಗ್ಗೆ ಮತ್ತಷ್ಟು ಹುಡುಕಾಟ ನಡೆಸಿದಾಗ ಎರಡೂ ಪ್ರತ್ಯೇಕ ವಿಡಿಯೊ ಎನ್ನುವುದು ಕಂಡುಬಂತು. ಹಲ್ಲೆ ಘಟನೆ ನಡೆದಿರುವುದು ಉತ್ತರ ಪ್ರದೇಶದ ಮುಜಫರ್‌ನಗರದ ಸಿಕ್ರಿ ಎನ್ನುವ ಹಳ್ಳಿಯಲ್ಲಿ. ಗ್ರಾಮದ ಲೈನ್‌ಮ್ಯಾನ್ ಮನೆಯ ವಿದ್ಯುತ್ ದುರಸ್ತಿ ಮಾಡಲಿಲ್ಲ ಎಂದು ಇಬ್ಬರು ಮುಸ್ಲಿಂ ಸಹೋದರರು ಅವರ ಮೇಲೆ ಹಲ್ಲೆ ನಡೆಸುವ 2021ರ ವಿಡಿಯೊ ಅದು. ಹತ್ಯೆಯ ವಿಡಿಯೊ 2018ರಲ್ಲಿ ನಡೆದದ್ದು; ವೆನಿಜುವೆಲಾದಲ್ಲಿ ಎರಡು ರೌಡಿ ಗುಂಪುಗಳ ನಡುವಿನ ಹೊಡೆದಾಟದಲ್ಲಿ ಸಂಭವಿಸಿದ ಹತ್ಯೆ ಅದು. ಎರಡು ಹಳೆಯ, ಪರಸ್ಪರ ಸಂಬಂಧವಿಲ್ಲದ ವಿಡಿಯೊಗಳನ್ನು ಒಟ್ಟುಗೂಡಿಸಿ ಕೆಲವರು ತಮ್ಮ ಸುಳ್ಳು ಪ್ರತಿಪಾದನೆಗೆ ಬಳಸಿಕೊಂಡಿದ್ದಾರೆ. ಈ ಬಗ್ಗೆ ಪಿಟಿಐ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ನುಡಿ ಬೆಳಗು

ನಾಳಿನ ಚಿಂತೆ





ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಒಮ್ಮೆ ಆಗರ್ಭ ಶ್ರೀಮಂತನೊಬ್ಬ ತನ್ನ ಕಾರ್ಯದರ್ಶಿಯನ್ನು ಕರೆದು ತನ್ನ ಆಸ್ತಿಯ ಲೆಕ್ಕಾಚಾರ ಮಾಡುವಂತೆ ಹೇಳಿದ. ಮಾರನೇ ದಿನ ಬಂದ ಕಾರ್ಯದರ್ಶಿ, ‘ಚಿಂತಿಸಬೇಡಿ, ನಿಮ್ಮ ಏಳು ತಲೆಮಾರು ಕುಳಿತು ತಿನ್ನುವಷ್ಟು ಆಸ್ತಿ ನಿಮ್ಮ ಬಳಿ ಇದೆ’ ಎಂದ. ಶ್ರೀಮಂತನಿಗೆ ಖುಶಿಯಾಗುವ ಬದಲು ಚಿಂತೆಯಾಯಿತು. ‘ಅಯ್ಯೋ ನನ್ನ ಏಳು ತಲೆಮಾರುಗಳೇನೋ ಕುಳಿತು ತಿನ್ನಬಹುದು, ಆದರೆ ಎಂಟನೇ ತಲೆಮಾರಿನ, ಅದರ ಮುಂದಿನವರ ಕಥೆಯೇನು’ ಎಂದು ಚಿಂತಿಸತೊಡಗಿದ.

ಅದೇ ಚಿಂತೆಯಲ್ಲಿಯೇ ಇದ್ದಾಗ ಸನ್ಯಾಸಿಯೊಬ್ಬರು ಆ ಊರಿಗೆ ಬಂದರು. ಅವರ ಹತ್ತಿರ ಸಮಸ್ಯೆ ಹೇಳಿಕೊಂಡ ಶ್ರೀಮಂತ. ಅದಕ್ಕೆ ಸನ್ಯಾಸಿ ಮುಗುಳ್ನಕ್ಕು ‘ಹೌದಾ, ಒಂದು ಕೆಲಸ ಮಾಡು, ಇದೇ ದಾರಿಯಲ್ಲಿ ಮುಂದೆ ಹೋಗಿ ಎಡಕ್ಕೆ ತಿರುಗಿದರೆ ಅಲ್ಲಿ ಗುಡಿಸಲೊಂದರಲ್ಲಿ ಬಡ ಅಜ್ಜಿಯೊಬ್ಬಳಿದ್ದಾಳೆ. ಅವಳಿಗೆ ಒಂದರ್ಧ ಕೆ.ಜಿ ಅಕ್ಕಿ ದಾನ ಮಾಡಿಬಿಡು. ದೇವರ ಕೃಪೆ ನಿನ್ನ ಮೇಲಿರುತ್ತದೆ’ ಎಂದರು.

ಆಗ ಶ್ರೀಮಂತ ಅಷ್ಟೇ ತಾನೇ ಎಂದುಕೊಂಡು ಒಂದು ಕ್ವಿಂಟಾಲ್ ಅಕ್ಕಿಯೊಂದಿಗೆ ಅಜ್ಜಿಯ ಮನೆಗೆ ಹೋದ. ಆಕೆಯ ಕಾಲಿಗೆ ಬಿದ್ದು, ‘ನಾನೊಬ್ಬ ದಾನಿ, ಈ ಒಂದು ಕ್ವಿಂಟಾಲ್ ಅಕ್ಕಿಯನ್ನು ತಂದಿದ್ದೇನೆ. ತೆಗೆದುಕೊಳ್ಳಿ’ ಎಂದ. ‘ಅಯ್ಯೋ ಮಗನೇ ನನ್ನದು ಊಟವಾಯಿತಲ್ಲ, ಈ ಅಕ್ಕಿ ತೆಗೆದುಕೊಂಡು ನಾನೇನು ಮಾಡಲಿ’ ಎಂದಳಾಕೆ. ‘ತೆಗೆದುಕೊಳ್ಳಿ ಈ ತಿಂಗಳಿಗಾಯಿತು’ ಎಂದ. ಬೇಡವೆಂದಳು ಅಜ್ಜಿ. ಕೊನೆಗೆ ‘ಹೋಗಲಿ ಈ ಅರ್ಧ ಕೆ.ಜಿಯನ್ನಾದರೂ ತೆಗೆದುಕೊಳ್ಳಿ, ನಾಳೆಗಾಯಿತು’ ಎಂದ. ಅದಕ್ಕೆ ಆಕೆ ‘ನೋಡು ಇವತ್ತಿನ ವ್ಯವಸ್ಥೆ ಮುಗಿದಿದೆ, ನಾಳಿನ ಚಿಂತೆ ನಾನೇಕೆ ಮಾಡಲಿ, ಬೇಡ’ ಎಂದಳು.

ಆಗ ಶ್ರೀಮಂತನಿಗೆ ಸನ್ಯಾಸಿ ತನ್ನನ್ನು ಏಕೆ ಈಕೆಯ ಬಳಿ ಕಳಿಸಿದರೆಂಬುದು ಅರ್ಥವಾಯಿತು.

‘ಆಸೆಯೆಂಬುದು ಅರಸಿಂಗಲ್ಲದೇ ಶಿವಭಕ್ತರಿಗುಂಟೇ’ ಎಂದು ಶರಣೆ ಆಯ್ದಕ್ಕಿ ಲಕ್ಕಮ್ಮ ಅದೆಷ್ಟು ಸರಳವಾಗಿ ಎಂಟುನೂರು ವರ್ಷಗಳ ಹಿಂದೆಯೇ ಹೇಳಿಬಿಟ್ಟಿದ್ದಾಳೆ! ನಮ್ಮದು ಹಂಚುವ ಸಂಸ್ಕೃತಿಯಾಗಬೇಕೇ ವಿನಾ ಕೂಡಿಡುವುದಾಗಬಾರದು. ದುರಾಸೆಗೆ ಮಿತಿ ಎಂಬುದೇ ಇಲ್ಲ. ಎಷ್ಟು ಇದ್ದರೂ ಮತ್ತಷ್ಟು ಬೇಕೆಂಬ ಚಿಂತೆ. ಚಿಂತಿಸುತ್ತಲೇ ಇರುವವರು ಚಿಂತಿಸಲು ಹೊಸ ಕಾರಣಗಳನ್ನು ಹುಡುಕುತ್ತಲೇ ಇರುತ್ತಾರೆ. ಸದಾ ನಿನ್ನೆಯ ಬಗ್ಗೆ ಬೇಸರಿಸುತ್ತ, ನಾಳೆಯ ಬಗ್ಗೆ ದಿಗಿಲು ಹೊಂದುತ್ತಾ ಬದುಕಿರುವುದರಿಂದ ಯಾವುದೇ ಪ್ರಯೋಜನವಿಲ್ಲ.

ಇದರರ್ಥ ನಾಳಿನ ಬಗ್ಗೆ ಯೋಚಿಸದೇ ಇರುವುದಲ್ಲ. ಅನಗತ್ಯ ಒತ್ತಡ ಹೇರಿಕೊಳ್ಳದೇ, ಜವಾಬ್ದಾರಿಯಿಂದಲೇ ವರ್ತಿಸುತ್ತಾ, ಸಣ್ಣ ಸಣ್ಣ ಸಂಗತಿಗಳಿಗೆ ತಲೆಕೆಡಿಸಿಕೊಳ್ಳದೇ ಬದುಕನ್ನು ಅನುಭವಿಸುವುದೂ ಒಂದು ಕಲೆ. ಮತ್ತದು ಎಲ್ಲರೂ ರೂಢಿಸಿಕೊಳ್ಳಬಹುದಾದ ಕಲೆ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜುಲೈ 25, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ ಪಂಚಮಿ ಗಂ. 25-59 ನಕ್ಷತ್ರ: ಪೂರ್ವಾಭಾದ್ರ ಗಂ. 16-17 ಯೋಗ: ಶೋಭನ ಗಂ. 07-48 ನಂತರ ಅತಿಗಂಡ ಗಂ. 28-34 ಕರಣ: ಕೌಲವ ಗಂ. 15-18, ಕರ್ಕಾಟಕ ಮಾಸದ 09 ನೇ ದಿನ, ಮಳೆನಕ್ಷತ್ರ: ಪುಷ್ಯ 2.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-18 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 18 ಮೊಹರಮ್, ಅದೃಷ್ಟ ಸಂಖ್ಯೆ : 5, 4

ಮೇಷ: ವೈಯಕ್ತಿಕ ಕೆಲಸಗಳಿಗೆ ಮೇಲಧಿಕಾರಿಗಳಿಂದ ಅಡಚಣೆ ಇರುವುದಿಲ್ಲ. ನಿಯಮ, ನಿಷ್ಠೆಗಳಿಂದ ಅಧಿಕಾರದಲ್ಲಿ ಪದೋನ್ನತಿ ಪಡೆಯಬಹುದು. ಕ್ರೀಡಾಪಟುಗಳಿಗೆ ದೇಹಬಾಧೆ ಕಾಣಿಸಬಹುದು.

ವೃಷಭ: ಮಾನಸಿಕ ನೆಮ್ಮದಿಗಾಗಿ ಧಾರ್ಮಿಕ ಕಾರ್ಯಗಳನ್ನು ಅಥವಾ ಪುಣ್ಯಕ್ಷೇತ್ರಗಳ ದರ್ಶನ ಮಾಡಲಿರುವಿರಿ. ನಿರೀಕ್ಷೆಗೂ ಮೀರಿದ ಫಲಿತಾಂಶವನ್ನು ಕಾಣುವಿರಿ. ಅನವಶ್ಯಕವಾಗಿ ಬಳಸುತ್ತಿರುವ ಹಣದ ಬಗ್ಗೆ ಗಮನವಿರಲಿ.

ಮಿಥುನ: ಕಲೆ, ಆಲಂಕಾರಿಕ ಹಾಗೂ ವೈಭೋಗ ವಸ್ತುಗಳಿಂದಾಗಿ ಹೆಚ್ಚಿನ ಲಾಭಾಂಶ ನಿರೀಕ್ಷಿಸಬಹುದು. ಪೊಲೀಸ್ ಅಧಿಕಾರಿಗಳು ವರ್ಗಾವಣೆಗಾಗಿ ಮಾಡಿದ ಭಾರಿ ಪ್ರಯತ್ನ ವ್ಯರ್ಥವಾಗುವುದು.

ಕರ್ಕಾಟಕ: ಅಪರಿಚಿತ ವ್ಯಕ್ತಿಯೊಬ್ಬರಿಂದ ಸಲಹೆಯೊಂದನ್ನು ಪಡೆಯಲಿದ್ದೀರಿ. ಅದನ್ನು ಜೀವನದಲ್ಲಿ ರೂಢಿಸಿಕೊಳ್ಳಿ. ಕುಟುಂಬ ವರ್ಗದವರ ಉತ್ತಮ ಬೆಂಬಲವಿರುವುದು. ಸ್ಪರ್ಧಾ ಮನೋಭಾವ ತೀವ್ರಗೊಳ್ಳುವುದು.

ಸಿಂಹ: ಹೊಸ ಆಸೆಗಳನ್ನು ಈಡೇರಿಸಿಕೊಳ್ಳುವಂಥ ಉತ್ತಮ ಅವಕಾಶಗಳು ಎದುರಾಗುವುವು. ಆಫೀಸಿನ ಕೆಲಸಗಳಿಗಾಗಿ ದೂರದ ಪ್ರಯಾಣ ಲಾಭದಾಯಕ. ರಾಜಕೀಯ ವಿದ್ಯಮಾನಗಳನ್ನು ಎಚ್ಚರಿಕೆಯಿಂದ ಗಮನಿರಿ.

ಕನ್ಯಾ: ಅಧಿಕಾರಿ ವರ್ಗದವರ ಉತ್ತೇಜನದಿಂದಾಗಿ ಕೆಲಸ ಕಾರ್ಯಗಳಲ್ಲಿ ಸುಲಭವಾಗಿ ಜಯ ಲಭಿಸಲು ಸಾಧ್ಯ. ಸಹೋದ್ಯೋಗಿಗಳ ಸಂಯಮದ ವರ್ತನೆಯಿಂದ ಅನುಕೂಲವಾಗಲಿದೆ.

ತುಲಾ: ಇತರರಿಗೆ ನೋವಾಗದಂತೆ, ಅಸೂಯೆ ಉಂಟಾಗದಂತೆ ಕಾರ್ಯ ಸಾಧಿಸಿಕೊಳ್ಳುವುದು ಉತ್ತಮ. ಹಿರಿಯರ ಮಧ್ಯಸ್ಥಿಕೆಯಿಂದ ಭೂ ವಿವಾದ ಬಗೆಹರಿಯುವುದು. ಬೆಂಕಿಯಿಂದ ಅನಾಹುತಗಳು ಸಂಭವಿಸಬಹುದು.

ವೃಶ್ಚಿಕ: ಕರ್ತವ್ಯ ದೃಷ್ಟಿಯಿಂದ ವೃತ್ತಿಕ್ಷೇತ್ರದಲ್ಲಿ ಒಂದೇ ಮನಸ್ಸಿನಲ್ಲಿ ದುಡಿದರೆ ಸಮಾಧಾನ ಹೆಚ್ಚುತ್ತದೆ. ನಾಸ್ತಿಕತೆಯನ್ನು ಬದಿಗಿಟ್ಟು ದೇವತಾರಾಧನೆಯ ಹಾದಿ ಹಿಡಿಯಿರಿ. ಪೊಲೀಸ್ ಸಿಬ್ಬಂದಿಗೆ ಕೆಲಸವಿರಲಿದೆ.

ಧನು: ಸ್ವಲ್ಪ ಜಾಗ್ರತೆ ವಹಿಸಿದಲ್ಲಿ ಕೈಗೊಂಡ ಪೂರ್ವನಿಯೋಜಿತ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆದು ಹೋಗುವುದು. ಚರ ಅಥವಾ ಸ್ಥಿರ ಸ್ವತ್ತುಗಳು ಸಿಗುವ ಸಂಭವವಿದೆ. ಸುಖ ಸಂಪತ್ತಿನ ಚಿಂತೆ ನಿದ್ದೆಗೆಡಿಸುತ್ತದೆ.

ಮಕರ: ಕೇವಲ ದೇವತಾ ಕೃಪೆಯಿಂದ ಕೆಲಸಗಳನ್ನೂ ಲಾಭಮಯವಾಗಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಬುದ್ಧಿವಂತಿಕೆಯನ್ನೂ ಉಪಯೋಗಿಸಬೇಕಾಗುತ್ತದೆ. ವಿದ್ಯಾರ್ಥಿಗಳು ಹೆಚ್ಚಿನ ಪರಿಶ್ರಮ ಪಡಬೇಕಾಗುವುದು.

ಕುಂಭ: ಅಧ್ಯಯನ ಸಂಶೋಧನೆಯಿಂದ ಯೋಚಿಸಿದ ಹಣ ಮತ್ತು ಖ್ಯಾತಿ ಇಷ್ಟದಂತೆ ಪಡೆದುಕೊಳ್ಳಲು ಆಗದೇ ಇರುವುದರಿಂದ ನೆಮ್ಮದಿ ಕಳೆದುಕೊಳ್ಳುವಂತಾಗಲಿದೆ. ಸಾಧನೆ ಹಾಗೂ ಅಭಿವೃದ್ಧಿ ಸಾಧಿಸುವ ದಿನ ಎನಿಸಲಿದೆ.


ಮೀನ: ಉದ್ಯೋಗದಲ್ಲಿ ಸ್ಥಳ ಬದಲಾವಣೆ ಪಡೆಯುವ ಉದ್ದೇಶವಿದ್ದರೆ, ಅಧಿಕಾರಿಗಳೊಡನೆ ಹೇಳಿಕೊಳ್ಳಲು ಹಿಂಜರಿಕೆ ಬೇಡ. ಮೇಲಧಿಕಾರಿಗಳ ದುರ್ನಡತೆ ಸಹಿಸುವುದು ಕಷ್ಟ. ಮಿತ್ರರು ಸಕಾಲಕ್ಕೆ ಆಗುವರು.

ಪದಬಂಧ 5752

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೇಸಾಯವನ್ನು ಹೀಗೂ ಹೇಳುವರು (3)
3.ಕವಿ ಕುಮಾರವ್ಯಾಸನು ಹುಟ್ಟಿದ ಜಿಲ್ಲೆ (3)
5.ರತ್ನಗಳ ಆಶ್ರಯ ಸ್ಥಾನ ಅಥವಾ ಸಮುದ್ರ (4)
7.ಒಣಗಿದ ಎಲೆ, ಗರಿ ಇತ್ಯಾದಿ (3)
10.ಮೆಲ್ಲನೆ ಬೀಸುವ ಗಾಳಿ (5)
13.ಚಿನ್ನದಲ್ಲಿ ಹರಳನ್ನು ಕೂಡಿಸುವ ಕೆಲಸ (3)
16.ಸ್ವಂತವಾಗಿ ಗಳಿಸಿದ್ದು (4)
18.ಕರದಲ್ಲಿ ಬಿರುಸಾದುದು ಇದೆ! (3)
19.ಗುರುಗುಟ್ಟುತ್ತಿರುವ ಗಂಡು ಕುರಿ (3)

ಮೇಲಿಂದ ಕೆಳಕ್ಕೆ
1.ಕಷ್ಟಕಾಲಕ್ಕೆ ಒದಗುವ ಸಹಾಯಕ (4)
2.ಬಡಿವಾರ ತೋರುವಾಗ ಆವರಿಸಿದ ಕ್ಷಾಮ (2)
3.ಪಗಡೆಯಾಟದ ದಾಳಗಳಿಂದ ಸೂಚಿತವಾಗುವ ಸಂಖ್ಯೆ (2)
4.ಬೆಟ್ಟದ ಗವಿ (3)
6.ಸಾಮಂತರಿಂದ ಅಧಿರಾಜನಿಗೆ ಸಲ್ಲುವ ಹಣ (2)
7.ಈ ತರ ಮೇಲು ಕೀಳು ಬಂದಿದೆ (4)
8.ಪ್ಲೀಹಕೋಶ ಇಲ್ಲಿದೆ (2)
9.ನಡುವೆ ಮಂತ್ರ ಹೇಳಿ ನೀಡಿದ ಆಹ್ವಾನ! (4)
11.ಹೆಳವನಿಲ್ಲಿ ತಿರುಗಿದ್ದಾನೆ (2)
12.ಸಿಲಿಕಾನ್ ಸಿಟಿ ಎಂದು ಹೆಸರಾದ ಊರು (4)
14.ಹತ್ತು ವರ್ಷಗಳ ಅವಧಿ (3)
15.ಹೆಸರು ಮೊದಲಾದುವನ್ನು ಬರೆದಿರುವ ಪಟ್ಟಿ ಉಲ್ಟಾಆಗಿದೆ (2)
16.ವರ್ಣ ಮಾಲೆಯಲ್ಲಿ ಇತರ ಅಕ್ಷರಗಳ ಸಹಾಯವಿಲ್ಲದೆ ಉಚ್ಚರಿಸಬಹುದಾದ ಅಕ್ಷರ (2)
17.ತಟಕ್ಕನೆ ತಲುಪಿದ ದಡ! (2)



5751ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಾಕ 3.ಜಿಪುಣತನ
5.ಸರಹದ್ದು 6.ತಿಮಿಂಗಿಲ
7.ಕ್ಷಾರ 9.ಬಾಯಿಮೊಸರು
11.ಜಾಡಿ 12.ಧಾರವಾಡ
13.ಗರ್ಭವತಿ 14.ಅಡಿಟಿಪ್ಪಣಿ
15.ಕಕ್ಕಿ

ಮೇಲಿಂದ ಕೆಳಕ್ಕೆ:
2.ಕಸವರ 3.ಜಿದ್ದು
4.ತರಂಗಿಣಿ 6.ತಿನ್ನಾಸಕ
8.ಹಾಯಿಗಡ 10.ಮಾರವಾಡಿ
11.ಜಾಗತಿಕ 13.ಗಣಿ

ಸುಡೊಕು 6137

				7			4	
		4	6		8			9
7		9		1				
						6	7	
6		1	7		2			4
								1
9				6		5		
	3	6	2		5			7
8		5		4			6	3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6136 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

‘ನೀತಿಯೇ ಇಲ್ಲ, ಆಯೋಗದ ಸಭೆಗೆ ಹೋಗಬೇಕೆ?’

ಪ್ರಜಾವಾಣಿ ವಾರ್ತೆ


ಡಿ.ಕೆ. ಶಿವಕುಮಾರ್

ಬೆಂಗಳೂರು: ‘ಕೇಂದ್ರ ಸರ್ಕಾರದ ಬಳಿ ನೀತಿಯೇ ಇಲ್ಲ. ಹೀಗಿರುವಾಗ, ನೀತಿ ಆಯೋಗದ ಸಭೆಗೆ ಹೋಗಿ ಏನು ಪ್ರಯೋಜನ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ರಾಜ್ಯ ಸರ್ಕಾರ ಕೇಂದ್ರದ ನೀತಿ ಆಯೋಗದ ಸಭೆಯನ್ನು ಬಹಿಷ್ಕರಿಸಲು ನಿರ್ಧರಿಸಿರುವ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ನ್ಯಾಯ ಸಿಕ್ಕಿಲ್ಲ. ಇಲ್ಲಿ ನೀತಿಯೇ ಇಲ್ಲ. ಬಜೆಟ್‌ನಲ್ಲಿ ಕರ್ನಾಟಕಕ್ಕೆ ಸರಿಯಾದ ಪ್ರಾತಿನಿಧ್ಯ ಸಿಗದ ಕಾರಣ, ಸಭೆ ಬಹಿಷ್ಕರಿಸಲು ನಮ್ಮ ನಾಯಕರು ತೀರ್ಮಾನಿಸಿದ್ದಾರೆ’ ಎಂದರು.

ಸಮಗ್ರ ತನಿಖೆ ಆರಂಭ, ತಪ್ಪಿತಸ್ಥರ ವಿರುದ್ಧ ಕ್ರಮ: ಕಂದಾಯ ಸಚಿವ ಕೃಷ್ಣ ಬೈರೇಗೌಡ

ಸಾವಿರಾರು ಎಕರೆ ‘ಬೋಗಸ್ ಗ್ರ್ಯಾಂಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾವಿರಾರು ಎಕರೆ ಸರ್ಕಾರಿ ಜಮೀನನ್ನು ‘ಬೋಗಸ್ ಗ್ರ್ಯಾಂಟ್’ ಮಾಡಲಾಗಿದೆ. ಈ ಬಗ್ಗೆ ಸಮಗ್ರ ತನಿಖೆ ಆರಂಭಿಸಲಾಗಿದ್ದು, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.


ವಿಧಾನಪರಿಷತ್‌ನಲ್ಲಿ ಬುಧವಾರ ಶೂನ್ಯವೇಳೆಯಲ್ಲಿ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರು ವಿಷಯ ಪ್ರಸ್ತಾಪಿಸಿ ‘2022ರಲ್ಲಿ ಪ್ರವಾಹ ಸಂದರ್ಭದ ದುರುಪಯೋಗ ಮಾಡಿಕೊಂಡು ಪರಿಹಾರ ಪಡೆದುಕೊಳ್ಳಲಾಗಿದೆ. ಈ ಬಗ್ಗೆ ಸರ್ಕಾರ ತನಿಖೆ ನಡೆಸುತ್ತಿದ್ದು, ಅದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತದೆಯೇ’ ಎಂದು ಪ್ರಶ್ನಿಸಿದರು.

ಸಚಿವ ಕೃಷ್ಣ ಬೈರೇಗೌಡ ಪ್ರತಿಕ್ರಿಯಿಸಿ, ‘ಪ್ರವಾಹ ಪರಿಹಾರ ಅತ್ಯಂತ ಹೆಚ್ಚಿನ ದುರುಪಯೋಗವಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಲ್ಲರೂ ತಲಾ ₹49,999 ಪರಿಹಾರ ಪಡೆದುಕೊಂಡಿದ್ದಾರೆ. ತುಮಕೂರಿನಲ್ಲಿರುವವರು ಚಿಕ್ಕಮಗಳೂರಿನಲ್ಲಿ ಪರಿಹಾರ ಪಡೆದುಕೊಂಡಿದ್ದಾರೆ. ಇಂತಹ ಪ್ರಕರಣಗಳಲ್ಲಿ ರೈತರು, ಅಧಿಕಾರಿಗಳು ಎಲ್ಲರೂ ಸೇರಿಕೊಂಡಿದ್ದಾರೆ’ ಎಂದರು.

‘ಪ್ರವಾಹ ಪರಿಹಾರದಲ್ಲಿ ಮಾತ್ರ ದುರುಪಯೋಗವಾಗಿಲ್ಲ; ಜಮೀನು ಮಂಜೂರಾತಿಯಲ್ಲೂ ಅಕ್ರಮ ನಡೆದಿದೆ. ಚಿಕ್ಕಮಗಳೂರು ಜಿಲ್ಲೆ ಯಲ್ಲಿ ಆರು ಸಾವಿರಕ್ಕೂ ಹೆಚ್ಚು ಎಕರೆಯನ್ನು ‘ಬೋಗಸ್ ಗ್ರ್ಯಾಂಟ್’ ಮಾಡಲಾಗಿದೆ. ಈ ಅಕ್ರಮಗಳಲ್ಲಿ ಕಂದಾಯ ಇಲಾಖೆಯ 26 ಅಧಿಕಾರಿಗಳೂ ಸೇರಿಕೊಂಡಿದ್ದಾರೆ. ‘ಬೋಗಸ್ ಗ್ರ್ಯಾಂಟ್’ ಅದೊಂದೇ ಜಿಲ್ಲೆಗೆ ಸೀಮಿತವಲ್ಲ. ಚಿತ್ರದುರ್ಗ, ಹಾವೇರಿ, ಕಲಬುರಗಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ‘ಬೋಗಸ್ ಗ್ರ್ಯಾಂಟ್’ ಮಾಡಲಾಗಿದೆ. ಹಾವೇರಿಯ ಪ್ರಕರಣಗಳನ್ನು ಹೇಳಲು ಹೊರಟರೆ ಒಂದು ದಿನ ಸಾಲುವುದಿಲ್ಲ’ ಎಂದರು.

‘ಚಿಕ್ಕಮಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಜಮೀನು ಮಂಜೂರಾತಿ ಬಗ್ಗೆ ತನಿಖೆ ಆರಂಭಿಸಲಾಗಿದೆ. ಈ ಬಗ್ಗೆ ಸಮಗ್ರ ವರದಿಯನ್ನು ಪಡೆದು, ಶಿಕ್ಷೆ ಕೊಡಿಸಲೂ ಕ್ರಮ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

₹4,132 ಕೋಟಿ ಬೆಳೆ ನಷ್ಟ ಪರಿಹಾರ ವಿತರಣೆ



2023ನೇ ಸಾಲಿನಲ್ಲಿ 38.78 ಲಕ್ಷ ರೈತರಿಗೆ ಬೆಳೆ ನಷ್ಟ ಪರಿಹಾರವಾಗಿ ₹4,132 ಕೋಟಿ ವಿತರಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ ಪರವಾಗಿ ಕೇಶವಪ್ರಸಾದ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘223 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿ, 48.17 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಹಾನಿಯಾಗಿದೆ ಎಂದು ಗುರುತಿಸಲಾಗಿತ್ತು. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಲ್ಲಿ ಕೇಂದ್ರ ಸರ್ಕಾರ ₹3,266.22 ಕೋಟಿ ಹಾಗೂ ಜೀವನೋಪಾಯ ಪರಿಹಾರಕ್ಕೆ ₹232.42 ಕೋಟಿ ಬಿಡುಗಡೆ ಮಾಡಿತ್ತು. ಇದೂ ಸೇರಿದಂತೆ ಒಟ್ಟು ₹4,132 ಕೋಟಿಯನ್ನು ಈವರೆಗೆ ರೈತರಿಗೆ ಪಾವತಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಅಂಗವಿಕಲರ ಪಿಂಚಣಿ ಪರಿಷ್ಕರಣೆ: ಭರವಸೆ

ಬೆಂಗಳೂರು: ಅಂಗವಿಕಲರಿಗೆ ಪಿಂಚಣಿ ಪರಿಷ್ಕರಿಸಲು ಪ್ರಯತ್ನಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ವೈ.ಎಂ. ಸತೀಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ರಾಜ್ಯದಲ್ಲಿ ಸುಮಾರು 78 ಲಕ್ಷ ಜನರಿಗೆ ಸಾಮಾಜಿಕ ಭದ್ರತೆಯ ಪಿಂಚಣಿ ನೀಡಲಾಗುತ್ತಿದೆ. ದೇಶದಲ್ಲಿ ಅತ್ಯಧಿಕ ಮೊತ್ತವನ್ನು ರಾಜ್ಯ ಈ ಬಾಬ್ತಿನಲ್ಲಿ ಬಿಡುಗಡೆ ಮಾಡುತ್ತಿದೆ’ ಎಂದರು.

‘ಅಂಗವಿಕಲರಿಗೆ ಪಿಂಚಣಿ ಅತ್ಯಂತ ಅಗತ್ಯವಾಗಿದ್ದು, 2021ರಲ್ಲಿ ಪರಿಷ್ಕರಿಸಿ ₹2 ಸಾವಿರ ನೀಡಲಾಗುತ್ತಿದೆ. ಇದನ್ನು ಹತ್ತು ಪಟ್ಟು ಹೆಚ್ಚಿಸಬೇಕು’ ಎಂದು ಸತೀಶ್ ಒತ್ತಾಯಿಸಿದರು. ಬಿಜೆಪಿಯ ಭಾರತಿ ಶೆಟ್ಟಿ ಕೂಡ ಇದಕ್ಕೆ ಧ್ವನಿಗೂಡಿಸಿದರು.


‘2021ರಲ್ಲಿ ಪರಿಷ್ಕರಣೆಯಾದ ನಂತರ ಅದನ್ನು ಹೆಚ್ಚಿಸಿಲ್ಲ. ಅಂಗವಿಕಲರಿಗೆ ಹೆಚ್ಚಿನ ಪಿಂಚಣಿ ನೀಡಬೇಕೆಂಬ ಭಾವನೆ ನಮಗೂ ಇದೆ. ಕೇಂದ್ರ ಸರ್ಕಾರ ಪಿಂಚಣಿ ಮೊತ್ತವನ್ನು 13 ಲಕ್ಷ ಜನರಿಗೆ ಮಾತ್ರ ನೀಡುತ್ತಿದ್ದು, ತಲಾ ₹200, ₹300 ಎಂದು ನಿಗದಿ ಮಾಡಿದೆ. 2012ರಿಂದ ಪರಿಷ್ಕರಣೆ ಆಗಿಲ್ಲ. ಕೇಂದ್ರ ಹಣಕಾಸು ಸಚಿವರಿಗೆ ಈ ಬಗ್ಗೆ ಮನವಿ ಮಾಡಿದಾಗ, ಅದನ್ನು ಪರಿಷ್ಕರಿಸುವುದಾಗಿ ಹೇಳಿದ್ದಾರೆ’ ಎಂದು ಕೃಷ್ಣ ಬೈರೇಗೌಡ ಹೇಳಿದರು.

ಸುದ್ದಿ 2 ನಿಮಿಷ

890 ಪ್ರಶ್ನೆ, 283ಕ್ಕಷ್ಟೇ ಉತ್ತರ ಕ್ರಮಕ್ಕೆ ಹೊರಟ್ಟಿ ಸೂಚನೆ

ಬೆಂಗಳೂರು: ವಿಧಾನಪರಿಷತ್‌ನಲ್ಲಿ ಕೇಳಿರುವ ಪ್ರಶ್ನೆಗಳಿಗೆ ಉತ್ತರ ನೀಡದ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು, ಅದರ ವರದಿಯನ್ನು ಗುರುವಾರ ಸಲ್ಲಿಸಬೇಕು ಎಂದು ಸಭಾನಾಯಕ ಬೋಸರಾಜು ಅವರಿಗೆ ಸಭಾಪತಿ ಬಸವರಾಜ ಹೊರಟ್ಟಿ ಸೂಚಿಸಿದರು.

ಜೆಡಿಎಸ್‌ನ ಎಸ್.ಎಲ್. ಬೋಜೇಗೌಡ ವಿಷಯ ಪ್ರಸ್ತಾಪಿಸಿ, ‘ಪರಿಷತ್ ಕಲಾಪ ಕಳೆದ ಸೋಮವಾರ ಆರಂಭವಾದಾಗಿನಿಂದ ಈವರೆಗೆ 890 ಪ್ರಶ್ನೆಗಳನ್ನು ಕೇಳಿದ್ದಾರೆ. ಇದರಲ್ಲಿ 283 ಉತ್ತರಗಳಷ್ಟೇ ಬಂದಿವೆ. 607 ಪ್ರಶ್ನೆಗಳಿಗೆ ಉತ್ತರವೇ ಸಿಕ್ಕಿಲ್ಲ. ನಾವೇಕೆ ಪ್ರಶ್ನೆ ಕೇಳಬೇಕು? ಯಾಕೀ ನಿರ್ಲಕ್ಷ್ಯ’ ಎಂದು ಪ್ರಶ್ನಿಸಿದರು.



ಇದಕ್ಕೆ ಪ್ರತಿಕ್ರಿಯಿಸಿದ ಬಸವರಾಜ ಹೊರಟ್ಟಿ, ‘ಸಭಾನಾಯಕರೇ ಇದು ಅತ್ಯಂತ ಪ್ರಮುಖವಾದ ಜವಾಬ್ದಾರಿ. ಪ್ರತಿದಿನ ಏಕೆ ಉತ್ತರ ಕೊಡಿಸುತ್ತಿಲ್ಲ? ನಾನು ಸಾಕಷ್ಟು ಸೂಚನೆ ಕೊಟ್ಟಿದ್ದೇನೆ. ಅಧಿಕಾರಿಗಳು ಇಲ್ಲೇ ಇರುತ್ತಾರಲ್ಲಾ? ಯಾವ ಅಧಿಕಾರಿಗಳು ಉತ್ತರ ಕೊಟ್ಟಿಲ್ಲವೋ ಅವರ ಮೇಲೆ ಕ್ರಮ ಕೈಗೊಳ್ಳಿ. ಅದರ ವರದಿಯನ್ನು ಸದನಕ್ಕೆ ಸಲ್ಲಿಸಿ’ ಎಂದು ಆದೇಶಿಸಿದರು.

ಪಿಎಂಜಿಎಸ್‌ವೈ, ಪ್ರಗತಿಪಥ ಅನುದಾನದಡಿ ರಸ್ತೆ – ಪ್ರಿಯಾಂಕ್

ಬೆಂಗಳೂರು: ‘ಕೇಂದ್ರ ಸರ್ಕಾರ ಮತ್ತೆ ಆರಂಭಿಸಿರುವ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂಜಿಎಸ್‌ವೈ) ಮತ್ತು ರಾಜ್ಯ ಸರ್ಕಾರದ ಪ್ರಗತಿಪಥ ಅನುದಾನವನ್ನು ಗ್ರಾಮೀಣ ರಸ್ತೆಗಳ ಸುಧಾರಣೆಗೆ ಬಳಸಲಾಗುವುದು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಬಿ. ಶಿವಣ್ಣ ಮತ್ತು ರಾಘವೇಂದ್ರ ಬಸವರಾಜ ಹಿಟ್ನಾಳ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಮಳೆಯಿಂದಾಗಿ ಗ್ರಾಮೀಣ ಭಾಗದಲ್ಲಿ ರಸ್ತೆಗಳು ಹಾನಿಯಾಗಿವೆ. ಮುಖ್ಯಮಂತ್ರಿ ಜೊತೆ ಬಳಿ ಚರ್ಚಿಸಿ, ರಸ್ತೆಗಳ ದುರಸ್ತಿಗೆ ವಿಶೇಷ ಅನುದಾನ ಪಡೆಯಲು ಪ್ರಯತ್ನಿಸಲಾಗುವುದು’ ಎಂದರು.

‘ಪಿಎಂಜಿಎಸ್‌ವೈಯನ್ನು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿತ್ತು. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಗಳವಾರ ಮಂಡಿಸಿರುವ ಬಜೆಟ್‌ನಲ್ಲಿ ಈ ಯೋಜನೆಯನ್ನು ಮತ್ತೆ ಆರಂಭಿಸುವುದಾಗಿ ಪ್ರಕಟಿಸಿದ್ದಾರೆ. ಪ್ರಗತಿಪಥ ಯೋಜನೆಗೆ ರಾಜ್ಯ ಸಚಿವ ಸಂಪುಟ ಸಭೆ ಈಗಾಗಲೇ ಅನುಮೋದನೆ ನೀಡಿದೆ. ಈ ಎಲ್ಲ ಅನುದಾನಗಳನ್ನು ಬಳಸಿಕೊಂಡು ಗ್ರಾಮೀಣ ಭಾಗದ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು’ ಎಂದರು.




ಕಲಾಪ ವೀಕ್ಷಣೆ ಶಾಲಾ ಮಕ್ಕಳು ಬುಧವಾರ ವಿಧಾನ ಪರಿಷತ್ ಕಲಾಪವನ್ನು ವೀಕ್ಷಿಸಿದರು – ಪ್ರಜಾವಾಣಿ ಚಿತ್ರ/ಪುಷ್ಕರ್.ವಿ

‘ಕುಕ್ಕೆ: ಅಧಿಕಾರಿಗಳ ಮೇಲೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ದೇವಾಲಯದ ಅನ್ನ ಪ್ರಸಾದಕ್ಕೆ ಬಳಸುವ ದಿನಸಿ ಪದಾರ್ಥಗಳ ಖರೀದಿ ಟೆಂಡರ್‌ನ ಕಾರ್ಯಾದೇಶ ನೀಡಲು ವಿಳಂಬ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘2023ರ ನವೆಂಬರ್ 15ರಂದು ಟೆಂಡರ್ ಕರೆಯಲಾಗಿದ್ದು, ಅದನ್ನು ಅಂತಿಮಗೊಳಿಸುವಲ್ಲಿ ವಿಳಂಬವಾಗಿದೆ. ನಿಯಮಾನುಸಾರ ಕ್ರಮ ಕೈಗೊಂಡು, 15–20 ದಿನದಲ್ಲಿ ಕಾರ್ಯಾದೇಶ ನೀಡಲಾಗುತ್ತದೆ. ವಿಳಂಬಕ್ಕೆ ಕಾರಣರಾದ ಅಧಿಕಾರಿಗಳ ಮೇಲೂ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಭರವಸೆ ನೀಡಿದರು.


ರಾಮಲಿಂಗಾ ರೆಡ್ಡಿ

ಲಾಭ ವೆಚ್ಚಗಳಿಗೆ ವಿನಿಯೋಗ: ರಾಜ್ಯದ ನಾಲ್ಕು ಸಾರಿಗೆ ನಿಗಮಗಳು ಲಾಭದಲ್ಲೇ ಇವೆ. ಆದರೆ, ಲಾಭ ಬಂದರೂ ಅದೆಲ್ಲ ವೆಚ್ಚಕ್ಕೆ ವಿನಿಯೋಗ ಆಗುತ್ತಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಬಿಜೆಪಿಯ ಭಾರತಿ ಶೆಟ್ಟಿ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಡೀಸೆಲ್, ವೇತನ, ಬಿಡಿಭಾಗಗಳು ಪ್ರತಿನಿತ್ಯದ ವೆಚ್ಚಗಳಾಗಿದ್ದು, ಅವುಗಳೆಲ್ಲ ಹೆಚ್ಚಾಗುತ್ತಲೇ ಇವೆ. ಬಿಎಂಟಿಸಿ ಬಸ್ ಪ್ರಯಾಣ ದರ 2014ರಲ್ಲಿ ಏರಿಸಲಾಗಿತ್ತು. ಕೆಎಸ್‌ಆರ್‌ಟಿಸಿ, ವಾಯವ್ಯ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣ ದರ 2020ರಲ್ಲಿ ಹೆಚ್ಚಿಸಲಾಗಿತ್ತು. ಅಂದಿನಿಂದ ಇಂದಿನವರೆಗೆ ಸಂಸ್ಥೆಗಳ ಪ್ರತಿನಿತ್ಯದ ವೆಚ್ಚಗಳು ದುಬಾರಿಯಾಗುತ್ತಲೇ ಇವೆ. ಹೀಗಾಗಿ ಲಾಭ ಗಳಿಸಲು ಸಾಧ್ಯವಾಗುತ್ತಿಲ್ಲ’ ಎಂದರು.

‘ಶಕ್ತಿ ಯೋಜನೆಯಡಿ ರಾಜ್ಯ ಸರ್ಕಾರ ₹1,413 ಕೋಟಿ ಬಿಡುಗಡೆ ಮಾಡಬೇಕಿದೆ. ಶೀಘ್ರ ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. 2024–25ನೇ ಬಜೆಟ್‌ನಲ್ಲಿ ಶಕ್ತಿ ಯೋಜನೆಗೆ ₹5,015 ಕೋಟಿ ಮೀಸಲಿಟ್ಟಿದ್ದು ಅನುದಾನದ ಕೊರತೆ ಇರುವುದಿಲ್ಲ’ ಎಂದರು.

ಸ್ಪೀಕರ್ ತಮ್ಮನಿಗೆ ಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಅವರ ಸೋದರ ಯು.ಟಿ.ಇಫ್ತಿಕಾರ್ ಫರೀದ್ ಅವರ ಅಧ್ಯಕ್ಷತೆಯಲ್ಲಿ, ರಾಜ್ಯ ಅರೆವೈದ್ಯಕೀಯ ಸೇವಾ ಪರಿಷತ್ತನ್ನು ರಚಿಸಿ ರಾಜ್ಯ ಸರ್ಕಾರ ಆದೇಶಿಸಿದೆ.

ಅರೆವೈದ್ಯಕೀಯ ಸೇವೆ ಒದಗಿಸುವ ಸಹಾಯಕರು, ತಂತ್ರಜ್ಞರಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ನೋಂದಣಿ ರಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ‘ಅರೆವೈದ್ಯಕೀಯ ಸೇವಾ ವೃತ್ತಿಪರರಿಗಾಗಿ ರಾಷ್ಟ್ರೀಯ ಆಯೋಗ ಕಾಯ್ದೆ’ಯನ್ನು 2021ರಲ್ಲಿ ಜಾರಿಗೆ ತಂದಿತ್ತು. ಕಾಯ್ದೆಯ ಅನ್ವಯ ಪ್ರತಿ ರಾಜ್ಯವೂ ಪರಿಷತ್ತನ್ನು ರಚಿಸಬೇಕಿತ್ತು.

ರಾಜ್ಯ ಸರ್ಕಾರವು ಈಗ ಎರಡು ವರ್ಷಗಳ ಅವಧಿಗೆ ಪರಿಷತ್ತನ್ನು ರಚನೆ ಮಾಡಿ, ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಕ ಮಾಡಿದೆ. ಮಂಗಳೂರಿನ ಡಾ.ಎಂ.ವಿ.ಶೆಟ್ಟಿ ಕಾಲೇಜ್ ಆಫ್ ಫಿಜಿಯೋಥೆರಪಿಯ ಪ್ರಾಂಶುಪಾಲರಾಗಿರುವ ಫರೀದ್ ಅವರನ್ನು ಪರಿಷತ್ತಿನ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕ, ಕಲಬುರ್ಗಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಮತ್ತು ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಅರೆವೈದ್ಯಕೀಯ ಸೇವೆಗಳನ್ನು ಒದಗಿಸುವ ವೃತ್ತಿಪರರು, ವೃತ್ತಿಪರ ಸಂಸ್ಥೆಗಳು, ಸಂಬಂಧಿತ ವೃತ್ತಿಪರ ಕೋರ್ಸ್‌ಗಳನ್ನು ನೀಡುವ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ಹಾಗೂ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಯ ಅಧಿಕಾರವು ಪರಿಷತ್ತಿಗೆ ಇರಬೇಕು ಎಂದು ಕೇಂದ್ರ ಸರ್ಕಾರದ ಕಾಯ್ದೆ ಹೇಳುತ್ತದೆ. ಈ ಸಂಬಂಧ ಇನ್ನಷ್ಟೇ ನಿಯಮಾವಳಿಗಳು .ರಚನೆಯಾಗಬೇಕಿದೆ.

‘ಗ್ಯಾರಂಟಿ: ಸರ್ಕಾರಕ್ಕೆ ಸ್ವಲ್ಪ ಹೊರೆ’



ಬೆಂಗಳೂರು: ‘ರಾಜ್ಯ ಸರ್ಕಾರಕ್ಕೆ ಗ್ಯಾರಂಟಿ ಯೋಜನೆಗಳಿಂದ ಸ್ವಲ್ಪ ಭಾರವಾಗಿರುವುದು ನಿಜ. ಹಾಗೆಂದು, ಸರ್ಕಾರ ದಿವಾಳಿ ಆಗಿಲ್ಲ’ ಎಂದು ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಬುಧವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಗ್ಯಾರಂಟಿ ಯೋಜನೆಗಳನ್ನು ಟೀಕಿಸುವ ಕೇಂದ್ರ ಸರ್ಕಾರ, ಕಾಂಗ್ರೆಸ್ ಸರ್ಕಾರದ ಯೋಜನೆಗಳನ್ನು ನಕಲು ಮಾಡಿದೆ’ ಎಂದು ವಾಗ್ದಾಳಿ ನಡೆಸಿದರು. ‘ಕೇಂದ್ರದ ಬಜೆಟ್‌ನಲ್ಲಿ ದಕ್ಷಿಣ ಭಾರತದ ರಾಜ್ಯಗಳನ್ನು ನಿರ್ಲಕ್ಷ್ಯಿಸಲಾಗಿದೆ. ಆಂಧ್ರಪ್ರದೇಶಕ್ಕೆ ವಿವಿಧ ಮೂಲಗಳಿಂದ ನೆರವಿನ ಭರವಸೆ ನೀಡಿದ್ದು, ಬಿಹಾರಕ್ಕೆ ₹26 ಸಾವಿರ ಕೋಟಿ ನೀಡಲಾಗಿದೆ’ ಎಂದರು.



ಮೈಸೂರಿನ ಅವಧೂತ ದತ್ತ ಪೀಠದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಅಮೆರಿಕದ ಇಲಿನಾಯ್ಸ್ ಪ್ರಾಂತ್ಯದ ಷಿಕಾಗೊದಲ್ಲಿ ಈಚೆಗೆ ನಡೆದ ‘ಗೀತ ಉತ್ಸವ’ದಲ್ಲಿ ಭಗವದ್ಗೀತೆ ಪಠಣ ಮಾಡಿದ ಮಕ್ಕಳು ಹಾಗೂ ಭಕ್ತರ ಮೇಲೆ ಮಲ್ಲಿಗೆ ಹೂವಿನ ಪಕಳೆಗಳನ್ನು ಹಾಕಿದರು

ಷಿಕಾಗೊದಲ್ಲಿ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಪ್ರವಚನ

ಗೀತ ಉತ್ಸವ: ಭಕ್ತರು ಪರವಶ

ಮೈಸೂರು: ಇಲ್ಲಿನ ಅವಧೂತ ದತ್ತ ಪೀಠದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಅಮೆರಿಕದ ಇಲಿನಾಯ್ಸ್ ಪ್ರಾಂತ್ಯದ ಷಿಕಾಗೊದಲ್ಲಿ ಈಚೆಗೆ ‘ಗೀತ ಉತ್ಸವ’ ಕಾರ್ಯಕ್ರಮ ನಡೆಸಿದ್ದು, ಭಕ್ತರು ಹಾಗೂ ಸಹೃದಯರು ತನ್ಮಯತೆಯಿಂದ ಪಾಲ್ಗೊಂಡರು.

ಷಿಕಾಗೊದ ‘ನ್ಯೂ ಅರೆನಾ’ ಸಭಾಂಗಣದಲ್ಲಿ ‘ಎಸ್‌ಜಿಎಸ್ ಗೀತಾ ಪ್ರತಿಷ್ಠಾನ’ ಹಾಗೂ ‘ಕೃಷ್ಣದತ್ತ ಹನುಮಾನ್ ದೇಗುಲ’ದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತರು ‘ಭಗವದ್ಗೀತೆ’ ಪಠಣ ಮಾಡಿದರು.

ಕಳೆದ 10 ತಿಂಗಳಿಂದ ಗೀತೆಯ 700 ಶ್ಲೋಕಗಳನ್ನು ಅಭ್ಯಾಸ ಮಾಡಿದ್ದ ವಿದ್ಯಾರ್ಥಿಗಳು ‘ಗೀತ ಪಠಣ’ ಪ್ರಸ್ತುತಪಡಿಸಿದರು. ಇದುವರೆಗೂ ‘ಎಸ್‌ಜಿಎಸ್ ಗೀತಾ ಪ್ರತಿಷ್ಠಾನ’ದ ಮೂಲಕ 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಜಾಗತಿಕವಾಗಿ ಪದವಿ ಪಡೆದಿರುವುದು ವಿಶೇಷ!

ಜಾಗತಿಕ ‘ಗೀತ ಚಳವಳಿ’ ಮುಂದುವರಿಯಲು ಪ್ರತಿಷ್ಠಾನವು 500ಕ್ಕೂ ಹೆಚ್ಚು ಶಿಕ್ಷಕರಿಗೆ ತರಬೇತಿ ನೀಡಿದ್ದು, ಅವರಲ್ಲಿ 4ರಿಂದ 85 ವರ್ಷದವರೆಗಿನ ಮಕ್ಕಳು, ವಯೋವೃದ್ಧರು ಕಂಠಪಾಠ ಮಾಡಿದರು. ಅವರಲ್ಲಿ 2 ಸಾವಿರ ಮಂದಿ 10 ವರ್ಷದೊಳಗಿ ನವರಾದರೆ, 1,350 ಮಂದಿ ವಯಸ್ಕರಾಗಿದ್ದರು.

ಉತ್ಸವದಲ್ಲಿ ಎಲ್ಲ ಭಕ್ತರು ಒಕ್ಕೊರಲಿನಿಂದ ಏಕಸ್ವರದಲ್ಲಿ ಗೀತಾ ಪಠಣ ಮಾಡಿದ್ದು, ನ್ಯೂ ಅರೆನಾದಲ್ಲಿ ಪಾಲ್ಗೊಂಡಿದ್ದ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು.

ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮಾತನಾಡಿ, ‘ವಿದ್ಯಾರ್ಥಿಗಳು, ಪ್ರೇಕ್ಷಕರು ಮತ್ತು ದೊಡ್ಡ ಸನಾತನ ಧರ್ಮದ ಸಮುದಾಯಕ್ಕೆ ಉತ್ಸವವು ಮಹತ್ವದ ಮೈಲಿಗಲ್ಲನ್ನು ನೀಡಿದೆ. ಮಕ್ಕಳಿಂದ ದೊಡ್ಡವರವರೆಗೆ ಎಲ್ಲರ ಮುಖದಲ್ಲೂ ಶ್ರೀಕೃಷ್ಣನನ್ನು ಸಾಕ್ಷೀಕರಿಸಿರುವುದು ವಿಸ್ಮಯ ಹುಟ್ಟಿಸಿದೆ’ ಎಂದು ಬಣ್ಣಿಸಿದರು.

‘ಆತ್ಮಸಾಕ್ಷಾತ್ಕಾರದ ಪ್ರಯಾಣದಲ್ಲಿ ಭಗವದ್ಗೀತೆಯು ಮಾರ್ಗದರ್ಶನ ನೀಡುತ್ತದೆ. ಕ್ಷಣಿಕ ಆನಂದದಾಚೆಗಿನ ನಿಜವಾದ, ಶಾಶ್ವತವಾದ ಸಂತೋಷವನ್ನು ಅದು ನೀಡುತ್ತದೆ’ ಎಂದರು.

‘ಭಗವದ್ಗೀತೆಯ ಈ ಉತ್ಸವದಲ್ಲಿ ಅಮೆರಿಕದ ಬಹಳಷ್ಟು ಕುಟುಂಬಗಳು, ಸ್ವಯಂಸೇವಕರು ತಂಡವಾಗಿ ಕಾರ್ಯಕ್ರಮಕ್ಕೆ ಸಮರ್ಪಣೆ ಮಾಡಿಕೊಂಡಿದ್ದಾರೆ. ಅದು ನನ್ನಲ್ಲಿ ಭಾವಪರವಶತೆ ತುಂಬಿದೆ. ಶ್ರೀ ಕೃಷ್ಣ, ಭಗವಾನ್ ದತ್ತ ಮತ್ತು ಗೀತಾ ಮಾತೆಯ ಆಶೀರ್ವಾದವು ವಿದ್ಯಾರ್ಥಿಗಳ ಜೀವನವನ್ನು ಸಮೃದ್ಧವಾಗಿಸಲಿದೆ’ ಎಂದರು.

‘ಪ್ರತಿಷ್ಠಾನವು 1 ಲಕ್ಷ ವಿದ್ಯಾರ್ಥಿಗಳಿಗೆ ಗೀತೆಯ ತರಬೇತಿಯನ್ನು ಮುಂಬರುವ ದಿನದಲ್ಲಿ ನೀಡಲಿದೆ’ ಎಂದರು.

ಅಮೆರಿಕ ಕಾಂಗ್ರೆಸ್‌ನ (ಸಂಸತ್ತು) ಇಲಿನಾಯ್ಸ್ ಪ್ರತಿನಿಧಿಯಾದ ರಾಜಾ ಕೃಷ್ಣಮೂರ್ತಿ, ಲೆಫ್ಟಿನೆಂಟ್ ಗವರ್ನರ್ ಜೂಲಿಯಾನಾ ಸ್ಟ್ರಾಟನ್ ಹಾಗೂ ಸುತ್ತಮುತ್ತಲಿನ ನಗರಗಳ ಏಳು ಮೇಯರ್‌ಗಳು ಭಾಗವಹಿಸಿದ್ದರು.

ಮುಡಾ ಹಗರಣ: ಅಹೋರಾತ್ರಿ ಧರಣಿ

ಒಂದನೇ ಪುಟದಿಂದ...

ಘೋಷಣೆ, ಗದ್ದಲ: ವಿಧಾನಸಭೆಯಲ್ಲಿ ಬಿಜೆಪಿ– ಜೆಡಿಎಸ್ ಸದಸ್ಯರು ಘೋಷಣಾ ಫಲಕಗಳನ್ನು ಪ್ರದರ್ಶಿಸಿ, ಘೋಷಣೆಗಳನ್ನೂ ಕೂಗಿದರು. ‘ದೇಶಕಂಡ ಭ್ರಷ್ಟ ಸರ್ಕಾರ’, ‘ಸಿದ್ದರಾಮಯ್ಯ ಪತ್ನಿಗೆ 14 ಸೈಟು– ಬಡ ಮಹಿಳೆಗೆ ಖಾಲಿ ಸೌಟು’, ‘ಬಂಪರ್ ಲಾಟರಿ ₹ 4,000 ಕೋಟಿ ಲೂಟ’ ಇತ್ಯಾದಿ ಘೋಷಣೆಗಳನ್ನು ಕೂಗಿದರು. ಸಿದ್ದರಾಮಯ್ಯ ತಮ್ಮ ಆಸನದಲ್ಲಿ ಕುಳಿತು ಮೌನವಾಗಿ ಆಲಿಸುತ್ತಿದ್ದರು. ಯಾವುದೇ ಪ್ರತಿಕ್ರಿಯೆ ನೀಡದೇ, ಪೂರಕ ಅಂದಾಜಿಗೆ ಒಪ್ಪಿಗೆ ಪಡೆದರು. ಗದ್ದಲದ ಮಧ್ಯೆ ಒಟ್ಟು ಏಳು ಮಸೂದೆಗಳನ್ನು ಮಂಡಿಸಿ ಕೆಲವು ಮಸೂದೆಗಳಿಗೆ ಒಪ್ಪಿಗೆಯನ್ನೂ ಪಡೆಯಲಾಯಿತು.

ಬೆಳಿಗ್ಗೆ ಪ್ರಶ್ನೋತ್ತರ ಕಲಾಪಕ್ಕೂ ಮೊದಲೇ ನಿಲುವಳಿ ಸೂಚನೆ ಮಂಡಿಸಲು ವಿರೋಧ ಪಕ್ಷದ ನಾಯಕ ಆರ್. ಅಶೋಕ ಪಟ್ಟು ಹಿಡಿದರು. ಆದರೆ, ಪ್ರಶ್ನೋತ್ತರದ ಅವಧಿ ಮುಗಿಯದೆ ಈ ಬಗ್ಗೆ ತೀರ್ಮಾನಿಸುವುದಿಲ್ಲ ಎಂದು ಸಭಾಧ್ಯಕ್ಷ ಖಾದರ್ ಹೇಳಿದರು.

‘ಪ್ರಶ್ನೋತ್ತರ ಕಲಾಪ ರದ್ದುಮಾಡಿ ಈ ವಿಚಾರ ತೆಗೆದುಕೊಳ್ಳಿ’ ಎಂದು ಬಿಜೆಪಿಯ ವಿ. ಸುನಿಲ್ ಕುಮಾರ್ ಆಗ್ರಹಿಸಿದರು. ಆಗ ಸಭಾಧ್ಯಕ್ಷರು, ‘ಯಾಕೆ ಇಷ್ಟು ತುರ್ತು? ಇಷ್ಟು ದಿನ ಸುಮ್ಮನಿದ್ದೀರಿ. ಆಯೋಗದ (ಮುಡಾ ವಿಚಾರಣೆಗೆ ರಚಿಸಿದ ನ್ಯಾಯಾಂಗ ಆಯೋಗ) ಬಳಿ ಹೋಗಿ’ ಎಂದರು. ಅದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಸುನಿಲ್ ಕುಮಾರ್, ‘ಪೀಠದಲ್ಲಿ ಕುಳಿತು ನೀವು ಈ ಮಾತು ಹೇಳುವುದು ಸರಿಯಲ್ಲ’ ಎಂದು ಗಟ್ಟಿ ಧ್ವನಿಯಲ್ಲಿ ಹೇಳಿದರು.

ಬಿಜೆಪಿಯ ಆರಗ ಜ್ಞಾನೇಂದ್ರ, ‘ನಗರಾಭಿವೃದ್ಧಿ ಸಚಿವರು ಮುಡಾ ಕಡತಗಳನ್ನು ಹೆಲಿಕಾಪ್ಟರ್‌ನಲ್ಲಿ ತುಂಬಿಕೊಂಡು ಬಂದಿದ್ದಾರೆ’ ಎಂದು ಆರೋಪಿಸಿದರು. ‘ಬಿಜೆಪಿಯವರು ಏನು ಮಾಡಿದ್ದಾರೆ, ಎಷ್ಟು ಎಕರೆ ಪಡೆದಿದ್ದಾರೆ ಎಂಬ ದಾಖಲೆ ಇದೆ. ನಮಗೂ ಅವಕಾಶ ಕೊಡಿ’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಸಭಾಧ್ಯಕ್ಷರಿಗೆ ಮನವಿ ಮಾಡಿದರು. ಮಧ್ಯ ಪ್ರವೇಶಿಸಿದ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, ‘ಈ ಹಗರಣದಲ್ಲಿ ಎಲ್ಲರೂ ಪಾಲುದಾರರೆಂದು ಹೇಳುತ್ತಿದ್ದಾರೆ. ಮೂರು ಪಕ್ಷದವರದ್ದೂ ಹೊರಗೆ ಬರಲಿ’ ಎಂದು ಆಗ್ರಹಿಸಿದರು. ಗದ್ದಲದ ಮಧ್ಯೆಯೇ ಪ್ರಶ್ನೋತ್ತರ ಕಲಾಪ ಮುಗಿಯಿತು.

ಪ್ರಶ್ನೋತ್ತರ ಮುಗಿಯುತ್ತಿದ್ದಂತೆ ಮುಡಾ ಹಗರಣ ವಿಚಾರ ಪ್ರಸ್ತಾಪಿಸಲು ಅಶೋಕ ಮತ್ತೆ ಮುಂದಾದರು. ಆಗ ಕಾನೂನು ಸಚಿವ ಎಚ್.ಕೆ. ಪಾಟೀಲ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ‘ವಿಧಾನಸಭೆ ಕಾರ್ಯವಿಧಾನ ನಡವಳಿಕೆಯ ಅನ್ವಯ, ನ್ಯಾಯಾಧೀಕರಣ ಅಥವಾ ಆಯೋಗ ಪ್ರಕರಣದ ವಿಚಾರಣೆ ನಡೆಸುವಾಗ ನಿಲುವಳಿ ಮಂಡಳಿಸಲು ಅವಕಾಶ ಇಲ್ಲ’ ಎಂದು ಪಾಟೀಲ ಹೇಳಿದರು.

ಮಧ್ಯಪ್ರವೇಶಿಸಿದ ಬಿಜೆಪಿಯ ಎಸ್. ಸುರೇಶ್ ಕುಮಾರ್, ‘ರಾಜ್ಯದ ಬಹಳ ಮುಖ್ಯವಾದ ವ್ಯಕ್ತಿಯನ್ನು ಕೇಂದ್ರೀಕರಿಸಿರುವ ಪ್ರಕರಣ. ಇದರ ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ’ ಎಂದು ಪ್ರಶ್ನಿಸಿದರು. ಈ ಹಂತದಲ್ಲಿ ಮಾತಿನ ಚಕಮಕಿ ನಡೆಯಿತು.

ಸಭಾಧ್ಯಕ್ಷರ ವಿರುದ್ಧ ಆಕ್ರೋಶ: ಭೋಜನ ವಿರಾಮದ ಬಳಿಕ ಬಿಜೆಪಿ–ಜೆಡಿಎಸ್ ಸದಸ್ಯರ ಆಕ್ರೋಶ ಸಭಾಧ್ಯಕ್ಷರ ಕಡೆ ತಿರುಗಿತು. ‘ಸಭಾಧ್ಯಕ್ಷರು ಆಡಳಿತ ಪಕ್ಷದ ಪಕ್ಷಪಾತಿಯಾಗಿ ವರ್ತಿಸುತ್ತಿದ್ದಾರೆ. ಈ ಮೂಲಕ ಮುಡಾ ಹಗರಣವನ್ನು ಮುಚ್ಚಿ ಹಾಕಲು ಸಹಕರಿಸುತ್ತಿದ್ದಾರೆ. ಸಭಾಧ್ಯಕ್ಷ ಪೀಠದ ಘನತೆಯನ್ನೂ ಎತ್ತಿ ಹಿಡಿಯುತ್ತಿಲ್ಲ. ಬೇಕಾಬಿಟ್ಟಿ ರೂಲಿಂಗ್ ಕೊಡುತ್ತಿದ್ದಾರೆ. ಅವರ ನಡವಳಿಕೆ ವಿರೋಧಿಸಿ ಧರಣಿ ಮಾಡುತ್ತೇವೆ’ ಎಂದು ಅಶೋಕ ಅವರ ನೇತೃತ್ವದಲ್ಲಿ ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ಆರಂಭಿಸಿದರು.

‘ಎರಡು ವರ್ಷಗಳ ಹಿಂದಿನ ಪ್ರಕರಣ. ಅದನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಲಾಗಿದೆ. ಇಷ್ಟು ದಿನ ಸುಮ್ಮನಿದ್ದು ಈಗ ಏಕೆ ಪ್ರಸ್ತಾಪಿಸುತ್ತಿದ್ದೀರಿ’ ಎಂದು ಸಭಾಧ್ಯಕ್ಷ ಯು.ಟಿ.ಖಾದರ್ ಪ್ರಶ್ನಿಸಿದರು. ಬಿಜೆಪಿ–ಕಾಂಗ್ರೆಸ್ ಸದಸ್ಯರ ಮಧ್ಯೆ ಪರಸ್ಪರ ವಾಗ್ವಾದ ನಡೆಯಿತು. ಅದರ ಮಧ್ಯೆಯೇ, ಮಸೂದೆಗಳು ಮತ್ತು ಗಮನಸೆಳೆಯುವ ಸೂಚನೆ ಮುಗಿಯುತ್ತಿದ್ದಂತೆ ಸಭಾಧ್ಯಕ್ಷರು ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು.

19 ವರ್ಷಗಳ ಅಕ್ರಮಗಳ ವಿಚಾರಣೆ

ಒಂದನೇ ಪುಟದಿಂದ...



2006ರಿಂದ 2024ರ ಜುಲೈ 15ರವರೆಗೆ ಮುಡಾ ನಿರ್ಮಿಸಿರುವ ಬಡಾವಣೆಗಳು, ಭೂಸ್ವಾಧೀನ, ಭೂಸ್ವಾಧೀನ ಪ್ರಕ್ರಿಯೆಯಿಂದ ಜಮೀನುಗಳನ್ನು ಕೈಬಿಟ್ಟಿರುವುದು, ಅಂತಹ ಜಮೀನುಗಳನ್ನು ಪುನಃ ಬಡಾವಣೆ ನಿರ್ಮಾಣಕ್ಕೆ ಬಳಸಿಕೊಂಡಿರುವುದು, ಭೂಸ್ವಾಧೀನ ಪ್ರಕ್ರಿಯೆ ನಡೆಸದೇ ಖಾಸಗಿ ಜಮೀನುಗಳನ್ನು ಬಳಸಿಕೊಂಡಿರುವುದು, ಅಂತಹ ಜಮೀನುಗಳ ಮಾಲೀಕರಿಗೆ ಪರಿಹಾರ ವಿತರಿಸಲು ಅನುಸರಿಸಿರುವ ವಿಧಾನಗಳ ಕುರಿತು ವಿಚಾರಣೆ ನಡೆಸುವಂತೆ ತಿಳಿಸಲಾಗಿದೆ.

ನಿವೇಶನ ರೂಪದ ಪರಿಹಾರ ವಿತರಣೆಯಲ್ಲಿ ಕಾನೂನು ಪಾಲನೆ ಕುರಿತೂ ವಿಚಾರಣೆ ನಡೆಸಬೇಕು. 19 ವರ್ಷಗಳ ಅವಧಿಯಲ್ಲಿ ಮುಡಾದಲ್ಲಿ ನಡೆದಿರಬಹುದಾದ ಎಲ್ಲ ಅಕ್ರಮಗಳನ್ನು ಗುರುತಿಸಿ, ಸೂಕ್ತ ಸಲಹೆಗಳೊಂದಿಗೆ ವರದಿ ಸಲ್ಲಿಸಬೇಕು ಎಂದು ಆಯೋಗಕ್ಕೆ ಸೂಚಿಸಲಾಗಿದೆ.

ಅಕ್ರಮವಾಗಿ ನಿವೇಶನ ಪಡೆದಿರುವವರು, ಬದಲಿ ನಿವೇಶನ ಪಡೆದಿರುವವರನ್ನು ಗುರುತಿಸಿ ಪಟ್ಟಿ ಸಲ್ಲಿಸಬೇಕು. ಅಂತಹ ನಿವೇಶಗಳನ್ನು ಪುನಃ ಮುಡಾ ಸ್ವಾಧೀನಕ್ಕೆ ಪಡೆಯಲು ಶಿಫಾರಸುಗಳನ್ನು ನೀಡಬೇಕು. ಅಕ್ರಮವಾಗಿ ನಿವೇಶನ, ಬದಲಿ ನಿವೇಶನ ಪಡೆದಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಬಗ್ಗೆಯೂ ಸಲಹೆ ನೀಡಬೇಕು ಎಂದು ಗೃಹ ಇಲಾಖೆ ಅಧಿಸೂಚನೆ ಹೊರಡಿಸಿದೆ.

ಭೂಸ್ವಾಧೀನ ಪ್ರಕ್ರಿಯೆ ಇಲ್ಲದೆ ಮುಡಾ ವಶಕ್ಕೆ ಪಡೆದ ಜಮೀನುಗಳ ಮಾಲೀಕರಿಗೆ ಪರಿಹಾರ ನೀಡಲು ಪ್ರಾಧಿಕಾರ ಕೈಗೊಂಡ ನಿರ್ಣಯಗಳು ಕಾನೂನಿನ ಪ್ರಕಾರ ಸಿಂಧುವಾಗುತ್ತವೆಯೆ? ಅಥವಾ ಇಲ್ಲವೆ ಎಂಬುದನ್ನೂ ಪರಿಶೀಲಿಸುವ ಹೊಣೆಯನ್ನು ಆಯೋಗಕ್ಕೆ ನೀಡಲಾಗಿದೆ. ನಾಗರಿಕ ಸೌಲಭ್ಯಕ್ಕೆ (ಸಿ.ಎ) ಮೀಸಲಾದ ನಿವೇಶನಗಳ ಹಂಚಿಕೆ ಬಗ್ಗೆಯೂ ವಿಚಾರಣೆ ನಡೆಸುವಂತೆ ಸೂಚಿಸಲಾಗಿದೆ.



ಬಿಜೆಪಿ ಶಾಸಕರಾದ ಅಶ್ವತ್ಥನಾರಾಯಣ, ಬೈರತಿ ಬಸವರಾಜ್ ಹಾಗೂ ಸುನಿಲ್‌ಕುಮಾರ್ ಅವರು ವಿಧಾನಸಭೆಯ ಮೊಗಸಾಲೆಯಲ್ಲಿ ಮಲಗಿದ್ದರು

ಮೇಲ್ಮನೆಯಲ್ಲೂ ಚರ್ಚೆಗೆ ಪಟ್ಟು

ಹಗರಣದ ಕುರಿತು ಚರ್ಚಿಸಲು ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡಬೇಕು ಎಂದು ವಿಧಾನಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪಟ್ಟುಹಿಡಿದರು.

ಬಿಜೆಪಿಯ ಸಿ.ಟಿ. ರವಿ, ಎನ್. ರವಿಕುಮಾರ್, ಕೆ.ಎಸ್. ನವೀನ್, ಡಿ.ಎಸ್. ಅರುಣ್, ಜೆಡಿಎಸ್‌ನ ಎಸ್.ಎಲ್. ಬೋಜೇಗೌಡ ಧ್ವನಿಗೂಡಿಸಿದರು.

ವಿರೋಧ ಪಕ್ಷಗಳ ಬೇಡಿಕೆಯನ್ನು ಸಭಾಪತಿ ಬಸವರಾಜ ಹೊರಟ್ಟಿ ಈಗಾಗಲೇ ತಿರಸ್ಕರಿಸಿದ್ದಾರೆ. ಹಾಗಾಗಿ, ಚರ್ಚೆಗೆ ಅವಕಾಶ ನೀಡಬಾರದು ಎಂದು ಕಾಂಗ್ರೆಸ್ ಸದಸ್ಯರು ಒತ್ತಾಯಿಸಿದರು. ಪರ–ವಿರೋಧದ ಗದ್ದಲ ಹೆಚ್ಚಾಗುತ್ತಿದ್ದಂತೆ ತಾಳ್ಮೆ ಕಳೆದುಕೊಂಡ ಸಭಾಪತಿ ಬಸವರಾಜ ಹೊರಟ್ಟಿ, ‘ನಿಮಗೆ ಸಮಧಾನ ಇಲ್ಲದಿದ್ದರೆ ನನ್ನ ವಿರುದ್ಧ ಅವಿಶ್ವಾಸ ಮಂಡಿಸಿ, ಪೀಠ ಬಿಟ್ಟು ಹೊರಡುತ್ತೇನೆ’ ಎಂದು ರೇಗಿದರು. ಕಲಾಪವನ್ನು ಎರಡು ತಾಸು ಮುಂದೂಡಿದರು. ಮತ್ತೆ ಸದನ ಆರಂಭವಾಗುತ್ತಿದ್ದಂತೆ ವಿರೋಧ ಪಕ್ಷಗಳ ಸದಸ್ಯರು ಸಭಾಪತಿಗಳ ಪೀಠದ ಮುಂದೆ ನಿಂತು ಪ್ರತಿಭಟನೆ ಆರಂಭಿಸಿದರು. ಆಗ, ಸದನವನ್ನು ಗುರುವಾರಕ್ಕೆ ಮುಂದೂಡಲಾಯಿತು.

ವಿಧಾನಸಭೆಯಲ್ಲಿ ಪಕ್ಷಾತೀತವಾಗಿ ವಿಷಯ ಪ್ರಸ್ತಾಪಿಸಿದ ಸದಸ್ಯರು

ಕ್ರೈಸ್ ಶಾಲೆ ಅವ್ಯವಸ್ಥೆ ಸರಿಪಡಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ವಸತಿ ಶಾಲೆಗಳಲ್ಲಿನ ಅವ್ಯವಸ್ಥೆ ಕುರಿತು ವಿಧಾನಸಭೆಯಲ್ಲಿ ಪಕ್ಷಾತೀತವಾಗಿ ಪ್ರಸ್ತಾಪಿಸಿದ ಸದಸ್ಯರು, ಲೋಪಗಳನ್ನು ಸರಿಪಡಿಸಿ ಗುಣಮಟ್ಟದ ಶಿಕ್ಷಣ, ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿದರು.

ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ರೂಪಕಲಾ, ‘ಕ್ರೈಸ್ ವ್ಯಾಪ್ತಿಯ ವಿದ್ಯಾರ್ಥಿ ನಿಲಯಗಳಲ್ಲಿ ಅವ್ಯವಸ್ಥೆ ವ್ಯಾಪಕವಾಗಿದೆ. ಒಂದು ಲಕ್ಷ ವಿದ್ಯಾರ್ಥಿಗಳಿರುವ ನಿಲಯಗಳ ನಿರ್ವಹಣೆಗೆ ಕೇವಲ ₹ 300 ಕೋಟಿ ವೆಚ್ಚ ಮಾಡಲಾಗುತ್ತಿದೆ. ಆದರೆ, ಸಮುದಾಯ ಭವನಗಳ ನಿರ್ಮಾಣಕ್ಕೆ ₹1 ಸಾವಿರ ಕೋಟಿ ನೀಡಲಾಗುತ್ತಿದೆ. ತಿಂಗಳಿಗೊಮ್ಮೆ ತಹಶೀಲ್ದಾರ್ ಭೇಟಿ ನೀಡಿ ಪರಿಶೀಲಿಸಬೇಕೆಂಬ ನಿಯಮವೂ ಪಾಲನೆಯಾಗುತ್ತಿಲ್ಲ. ಪ್ರಧಾನ ಕಾರ್ಯದರ್ಶಿ ಹಂತದ ಅಧಿಕಾರಿಗಳಿಂದ ಮೇಲ್ವಿಚಾರಣೆ ವ್ಯವಸ್ಥೆ ತರಬೇಕು’ ಎಂದರು.

ಮುಖ್ಯಾಂಶಗಳು

- ಕಾಂಗ್ರೆಸ್‌ನ ರೂಪಕಲಾ ಅವರಿಂದ ಪ್ರಸ್ತಾಪ
- ಗುಣಮಟ್ಟದ ಶಿಕ್ಷಣ, ಸೌಲಭ್ಯ ಕಲ್ಪಿಸುವಂತೆ ಬಿಜೆಪಿ ಶಾಸಕರಿಂದಲೂ ಒತ್ತಾಯ
- ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾವ ಮಂಡಿಸುವುದಾಗಿ ಪ್ರಿಯಾಂಕ್ ಖರ್ಗೆ ಭರವಸೆ

ಅದಕ್ಕೆ ದನಿಗೂಡಿಸಿದ ಬಿಜೆಪಿಯ ಎಸ್. ಸುರೇಶ್ ಕುಮಾರ್, ಹಿರಿಯೂರಿನ ನವೋದಯ ಶಾಲೆ ಮತ್ತು ಹಾವೇರಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿರುವ ವಿಚಾರ ಪ್ರಸ್ತಾಪಿಸಿದರು. ಮಕ್ಕಳಿಗೆ ಮಾನಸಿಕ ಸ್ಥೈರ್ಯ ಹೆಚ್ಚಿಸಲು ಆಪ್ತ ಸಮಾಲೋಚನೆ ವ್ಯವಸ್ಥೆ ತರಬೇಕು ಎಂದೂ ಸಲಹೆ ನೀಡಿದರು.



4 ವರ್ಷ ಸಮುದಾಯ ಭವನಗಳ ನಿರ್ಮಾಣ ಸ್ಥಗಿತಗೊಳಿಸಿ, ಅಷ್ಟೂ ಹಣವನ್ನು ವಸತಿ ಶಾಲೆಗಳಿಗೆ ವಿನಿಯೋಗಿಸಿದರೆ ಉತ್ತಮ

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ

ಬಿಜೆಪಿಯ ಆರಗ ಜ್ಞಾನೇಂದ್ರ, ‘ಬಹಳಷ್ಟು ಉಪ ನಿರ್ದೇಶಕರು ಆಹಾರ ಗುತ್ತಿಗೆದಾರರಂತೆ ಕೆಲಸ ಮಾಡುತ್ತಿದ್ದಾರೆ. ಇದರಿಂದ ಮಕ್ಕಳಿಗೆ ಗುಣಮಟ್ಟದ ಆಹಾರ ಸಿಗುತ್ತಿಲ್ಲ’ ಎಂದು ದೂರಿದರು. ಕಾಂಗ್ರೆಸ್‌ನ ಎಸ್.ಎನ್. ನಾರಾಯಣಸ್ವಾಮಿ, ‘ಮಕ್ಕಳಿಗೆ ಗುಣಮಟ್ಟದ ಆಹಾರ ಸಿಗುವುದಿರಲಿ, ತಟ್ಟೆಯೂ ಇಲ್ಲ’ ಎಂದರು.

ಕಾಂಗ್ರೆಸ್‌ನ ಪಿ.ಎಂ. ನರೇಂದ್ರಸ್ವಾಮಿ, ‘ಕ್ರೈಸ್ ಸಂಸ್ಥೆಯಲ್ಲಿನ ‘ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟಂಟ್’ ಕಟ್ಟಡ ನಿರ್ಮಾಣಕ್ಕಷ್ಟೇ ಒತ್ತು ನೀಡುತ್ತಿದೆ. ವಸತಿ ಶಾಲೆಗಳಲ್ಲಿ ಶೇ 80ರಷ್ಟು ಹೊರಗುತ್ತಿಗೆ ಶಿಕ್ಷಕರಿದ್ದಾರೆ’ ಎಂದರು. ಪ್ರಕಾಶ್ ಕೋಳಿವಾಡ, ‘ಐದು ವರ್ಷಗಳಲ್ಲಿ ವಿದ್ಯಾರ್ಥಿನಿ ನಿಲಯಗಳಲ್ಲಿ 92 ವಿದ್ಯಾರ್ಥಿನಿಯರು ಆತ್ಮಹತ್ಯೆ ಮಾಡಿಕೊಂಡಿರುವುದು ಆತಂಕ ಮೂಡಿಸುತ್ತದೆ’ ಎಂದರು.

ಸಮಾಜ ಕಲ್ಯಾಣ ಸಚಿವರ ಪರವಾಗಿ ಉತ್ತರಿಸಿದ ಸಚಿವ ಪ್ರಿಯಾಂಕ್ ಖರ್ಗೆ, ‘ಗುಣಮಟ್ಟದ ಆಹಾರ ವಿತರಿಸದಿರುವುದು, ಉಪನಿರ್ದೇಶಕರ ಕಾರ್ಯವೈಖರಿ, ತಹಶೀಲ್ದಾರ್‌ಗಳು ಭೇಟಿ ನೀಡದಿರುವ ಬಗ್ಗೆ ವಿಸ್ತೃತ ವರದಿ ಸಲ್ಲಿಸಲು ಸೂಚಿಸಲಾಗುವುದು. ರೋಟರಿ ಇಂಟರ್‌ನ್ಯಾಷನಲ್ ಸಂಸ್ಥೆಯ ಸಹಯೋಗದಲ್ಲಿ ಮಕ್ಕಳ ದೈಹಿಕ, ಮಾನಸಿಕ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಪ್ರಯತ್ನ ನಡೆದಿದ್ದು, ಸದ್ಯದಲ್ಲೇ ಸಚಿವ ಸಂಪುಟ ಸಭೆಗೆ ಪ್ರಸ್ತಾವ ಮಂಡಿಸಲಾಗುವುದು’ ಎಂದರು.

ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ ನಡೆದಿರುವ ಹಗರಣ

ಡಿ.ಎಸ್. ವೀರಯ್ಯಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ (ಡಿಡಿಯುಟಿಟಿಎಲ್) ನಡೆದಿದೆ ಎನ್ನಲಾದ ₹47.50 ಕೋಟಿ ಅಕ್ರಮ ಆರೋಪದ ಪ್ರಕರಣದಲ್ಲಿ ನಿಗಮದ ಮಾಜಿ ಅಧ್ಯಕ್ಷರೂ ಆದ, ಬಿಜೆಪಿ ಮುಖಂಡ ಡಿ.ಎಸ್.ವೀರಯ್ಯ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ವೀರಯ್ಯ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ (ಸಿಸಿಎಚ್-42) ನ್ಯಾಯಾಧೀಶ ಕೆ.ಎನ್. ಶಿವಕುಮಾರ್ ಬುಧವಾರ ಮಾನ್ಯ ಮಾಡಿ ಆದೇಶಿಸಿದರು.

'ಅರ್ಜಿದಾರರು 2 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಹಾಗೂ ಅಷ್ಟೇ ಮೊತ್ತಕ್ಕೆ ಇಬ್ಬರ ಶ್ಯೂರಿಟಿ ನೀಡಬೇಕು, ಪಾಸ್‌ಪೋರ್ಟ್ ಒಪ್ಪಿಸಬೇಕು' ಎಂಬುದೂ ಸೇರಿದಂತೆ ಇತರೆ ಷರತ್ತುಗಳನ್ನು ವಿಧಿಸಲಾಗಿದೆ. ಅರ್ಜಿದಾರರ ಪರ ಹೈಕೋರ್ಟ್‌ನ ಹಿರಿಯ ವಕೀಲ ಎಂ.ಎಸ್.ಶ್ಯಾಮಸುಂದರ್ ಹಾಗೂ ಡಾ.ಪಿ.ಎಲ್.ವಂದನಾ ವಾದ ಮಂಡಿಸಿದ್ದರು.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆ ಕಾಯ್ದೆ ಉಲ್ಲಂಘಿಸಿ ತುಂಡು ಗುತ್ತಿಗೆ ನೀಡಿದ ಆರೋಪದಡಿ ವೀರಯ್ಯ ವಿರುದ್ಧ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 120 ಬಿ, 409, 420, 465, 468 ಮತ್ತು 471ರ ಅಡಿಯಲ್ಲಿ ಎಫ್‌ಐಆರ್ ದಾಖಲು ಮಾಡಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಪೊಲೀಸರು ವೀರಯ್ಯ ಅವರನ್ನು ಇದೇ 12ರಂದು ಬಂಧಿಸಿ 13ರಂದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಎರಡು ದಿನಗಳ ಪೊಲೀಸ್ ಕಸ್ಟಡಿ ನಂತರ ಇದೇ 16ರಂದು ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಪ್ರಜ್ವಲ್ ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಮೂರನೇ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಜಾಗೊಳಿಸಿದೆ.

ಈ ಕುರಿತ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಬುಧವಾರ ವಜಾಗೊಳಿಸಿ ಆದೇಶಿಸಿದರು.

ಈ ಹಿಂದೆ ಇದೇ ನ್ಯಾಯಾಲಯ ಪ್ರಜ್ವಲ್ ರೇವಣ್ಣ ಅವರ ಮೂರು ಅರ್ಜಿಗಳನ್ನು ವಜಾಗೊಳಿಸಿತ್ತು. ಇವುಗಳಲ್ಲಿ ಒಂದು ರೆಗ್ಯುಲರ್ ಜಾಮೀನು ಹಾಗೂ ಎರಡು ನಿರೀಕ್ಷಣಾ ಜಾಮೀನು ಅರ್ಜಿಗಳಿದ್ದವು.

ವಂಚನೆ ಆರೋಪ: ಬಸವರಾಜನ್ ಖುಲಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗ ಮುರುಘಾಮಠದ ಆಡಳಿತಾಧಿಕಾರಿಯಾಗಿದ್ದ ಸಮಯದಲ್ಲಿ ಮಠದ ಹಣದಲ್ಲಿ ಹಲವಾರು ಸ್ಥಿರಾಸ್ತಿಗಳನ್ನು ಖರೀದಿಸಿ ತನ್ನ ಹೆಸರಿಗೆ ನೋಂದಾಯಿಸಿಕೊಂಡು ಮಠಕ್ಕೆ ವಂಚಿಸಿದ್ದಾರೆ' ಎಂಬ ಆರೋಪದಡಿ ಚಿತ್ರದುರ್ಗದ ಮಾಜಿ ಶಾಸಕ ಎಸ್.ಕೆ.ಬಸವರಾಜನ್ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಜಾಗೊಳಿಸಿದೆ.

ಈ ಕುರಿತಂತೆ ಫಿರ್ಯಾದುದಾರ ಎ.ವಿಜಯಕುಮಾರ್ (ಮಠದ ಪೀಠಾಧಿಪತಿ ಪರವಾದ ಅಧಿಕೃತ ದೂರುದಾರ) ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಬುಧವಾರ ಪ್ರಕಟಿಸಿದರು. ವಿಸ್ತೃತ ಆದೇಶ ಇನ್ನಷ್ಟೇ ಲಭ್ಯವಾಗಬೇಕಿದೆ.

ಪ್ರಕರಣವೇನು?: 'ಎಸ್.ಕೆ. ಬಸವರಾಜನ್ ಮಠದ ಆಡಳಿತಾಧಿಕಾರಿಯಾಗಿ ಮತ್ತು ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿಯಾಗಿದ್ದ ಸಮಯದಲ್ಲಿ ಎಸ್‌ಜೆಎಂ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಖಾತೆಯಿಂದ ಹಣ ಪಡೆದು ಸ್ಥಿರಾಸ್ತಿಗಳನ್ನು ಖರೀದಿಸಿ ಮಠಕ್ಕೆ ವಂಚಿಸಿರುತ್ತಾರೆ' ಎಂದು ಎ.ವಿಜಯಕುಮಾರ್ ಚಿತ್ರದುರ್ಗ ಟೌನ್ ಪೊಲೀಸ್ ಠಾಣೆಯಲ್ಲಿ 2013ರ ಏಪ್ರಿಲ್ 16ರಂದು ದೂರು ನೀಡಿದ್ದರು.

ಈ ಸಂಬಂಧ ಪೊಲೀಸರು ಭಾರತೀಯ ದಂಡ ಸಂಹಿತೆ-1860ರ ಕಲಂ 406 (ಆಸ್ತಿ ಅಥವಾ ಸ್ವತ್ತುಗಳ ದುರುಪಯೋಗ), 420 (ವಂಚನೆ) ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದರು.

ಕಾವೇರಿ ನೀರು: ರಾಜ್ಯಕ್ಕೆ ನಿರಾಳ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳುನಾಡಿಗೆ ಕರ್ನಾಟಕವು ಹರಿಸುತ್ತಿರುವ ಕಾವೇರಿ ನೀರಿನ ಪ್ರಮಾಣ ತೃಪ್ತಿಕರ ಎಂದು ಅಭಿಪ್ರಾಯಪಟ್ಟಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ, ಹೊಸ ಆದೇಶ ನೀಡಲು ನಿರಾಕರಿಸಿದೆ.

ಪ್ರಾಧಿಕಾರದ 32ನೇ ಸಭೆ ನವದೆಹಲಿಯಲ್ಲಿ ಬುಧವಾರ ನಡೆಯಿತು. ಸಭೆಯಲ್ಲಿ ಕರ್ನಾಟಕದ ಪ್ರತಿನಿಧಿಗಳು ವಾದ ಮಂಡಿಸಿ, 'ಜೂನ್‌ನಿಂದ ಜುಲೈ 22ರ ವರೆಗೆ ರಾಜ್ಯದ ನಾಲ್ಕು ಜಲಾಶಯಗಳಲ್ಲಿ ಸಂಚಿತ ಒಳಹರಿವು 118 ಟಿಎಂಸಿ ಇದೆ. ಆದರೆ, ಇದೇ ಅವಧಿಯಲ್ಲಿ 30 ವರ್ಷಗಳ ಸರಾಸರಿ (1989-90 ರಿಂದ 2018-19) ಒಳಹರಿವು 98.679 ಟಿಎಂಸಿ' ಎಂದರು.

'ತಮಿಳುನಾಡಿಗೆ ಪ್ರತಿದಿನ ಒಂದು ಟಿಎಂಸಿ ನೀರು ಬಿಡುಗಡೆ ಮಾಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಜುಲೈ 11ರಂದು ಶಿಫಾರಸು ಮಾಡಿತ್ತು. ನಾಲ್ಕು ಜಲಾಶಯಗಳ ಕೇವಲ ಶೇ 15.72 ವಿಸ್ತೀರ್ಣ ಪರಿಗಣಿಸಿ ಸಮಿತಿ ಈ ಸೂಚನೆ ನೀಡಿತ್ತು. ಜೂನ್‌ನಿಂದ ಜುಲೈ 12ರ ವರೆಗೆ ರಾಜ್ಯದಲ್ಲಿ ಮಳೆಯ ಪ್ರಮಾಣ ಕಡಿಮೆ ಇತ್ತು. ಆದರೆ, ತಮಿಳುನಾಡಿನ ನದಿಮುಖಜ ಭೂಮಿಯಲ್ಲಿ ಉತ್ತಮ ಮಳೆಯಾಗಿತ್ತು. ತಮಿಳುನಾಡಿನ ಮೂರು ಜಲಾಶಯಗಳ ಜಲ ವರ್ಷದ ಅಂತ್ಯಕ್ಕೆ ಕ್ಯಾರಿಓವರ್ ಸಂಗ್ರಹ, ಜಲಾನಯನ ಪ್ರದೇಶದ ಜಲ ವಿಜ್ಞಾನ ಪರಿಸ್ಥಿತಿ ಪರಿಗಣಿಸಿ ಪ್ರಾಧಿಕಾರ ಹಾಗೂ ಸಮಿತಿ ಆದೇಶ ನೀಡಬೇಕು' ಎಂದು ಆಗ್ರಹಿಸಿದರು.

ಕಲಬುರಗಿ ರೈಲ್ವೆ ವಿಭಾಗ ಸ್ಥಾಪನೆ ಇಲ್ಲ: ವೈಷ್ಣವ್

ಪ್ರಜಾವಾಣಿ ವಾರ್ತೆ



ಅಶ್ವಿನಿ ವೈಷ್ಣವ್

ನವದೆಹಲಿ: ಕರ್ನಾಟಕದ ಕಲಬುರಗಿ ರೈಲ್ವೆ ವಿಭಾಗ ಸ್ಥಾಪನೆ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕಲಬುರಗಿ ಸಂಸದ ರಾಧಾಕೃಷ್ಣ ಪ್ರಶ್ನೆಗೆ ಸಚಿವರು ಉತ್ತರ ನೀಡಿದರು.

'2014-15ನೇ ಸಾಲಿನ ಮಧ್ಯಂತರ ಬಜೆಟ್‌ನಲ್ಲಿ ರೈಲ್ವೆ ವಿಭಾಗ ಸ್ಥಾಪನೆಗೆ ಅನುಮೋದನೆ ನೀಡಿರಲಿಲ್ಲ. ವಿಭಾಗ ಸ್ಥಾಪನೆಯ ಕಾರ್ಯಸಾಧ್ಯತೆಯ ಪರಿಶೀಲಿಸಲು ಮೂವರು ಹಿರಿಯ ಅಧಿಕಾರಿಗಳ ಸಮಿತಿ ರಚಿಸಲಾಗಿತ್ತು. ಕಾರ್ಯಾಚರಣೆ, ಹಣಕಾಸು, ಆಡಳಿತಾತ್ಮಕ ಮತ್ತಿತರ ವಿಷಯಗಳನ್ನು ಈ ಸಮಿತಿ ಪರಿಶೀಲನೆ ನಡೆಸಿ ಈ ಸಮಿತಿ ವರದಿ ನೀಡಿತ್ತು. ರೈಲ್ವೆ ವಿಭಾಗದ ಅಗತ್ಯ ಇಲ್ಲ ಎಂದು ವರದಿ ಸಲ್ಲಿಸಿತ್ತು. ಹಾಗಾಗಿ, ಈ ಪ್ರಸ್ತಾವ ಕೈಬಿಡಲಾಗಿತ್ತು ಎಂದು ಅವರು ವಿವರ ನೀಡಿದರು.

ರಾಧಾಕೃಷ್ಣ, 'ವಿಭಾಗ ಸ್ಥಾಪನೆಗೆ ಅಗತ್ಯ ಜಮೀನು ಇದೆ. ಹಲವು ಸಲ ಈ ಸಂಬಂಧ ಮನವಿ ಸಲ್ಲಿಸಲಾಗಿದೆ. ತುರ್ತಾಗಿ ವಿಭಾಗ ಸ್ಥಾಪನೆಯಾಗಬೇಕಿದ್ದು, ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಬೇಕು' ಎಂದು ಮನವಿ ಮಾಡಿದರು.

ಮತ್ತೊಂದು ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, 'ಚಿಕ್ಕಬಳ್ಳಾಪುರ-ಗೌರಿಬಿದನೂರು (44 ಕಿ.ಮೀ) ನಡುವೆ ಹೊಸ ರೈಲು ಮಾರ್ಗ ನಿರ್ಮಾಣಕ್ಕೆ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಅಂತಿಮ ಕಾರ್ಯಸಾಧ್ಯತಾ ಅಧ್ಯಯನಕ್ಕೆ ಒಪ್ಪಿಗೆ ನೀಡಲಾಗಿದೆ' ಎಂದರು.

ಚಿಕ್ಕಬಳ್ಳಾಪುರ-ಪುಟ್ಟಪರ್ತಿ (104 ಕಿ.ಮೀ) ನಡುವೆ ಹೊಸ ಮಾರ್ಗ ನಿರ್ಮಾಣಕ್ಕೆ ಸರ್ವೆ ಪೂರ್ಣಗೊಂಡಿದೆ. ಶ್ರೀನಿವಾಸಪುರ-ಮದನಪಲ್ಲಿ (75 ಕಿ.ಮೀ) ಹೊಸ ಮಾರ್ಗಕ್ಕಾಗಿ ಸರ್ವೆ ನಡೆಸಲಾಗಿದೆ. ಪ್ರಯಾಣಿಕರ ದಟ್ಟಣೆ ಕಡಿಮೆ ಇರುವ ಕಾರಣಕ್ಕೆ ಈ ಎರಡು ಯೋಜನೆಗಳನ್ನು ಕಾರ್ಯಗತಗೊಳಿಸಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಮಾರಿಕುಪ್ಪಂ-ಕುಪ್ಪಂ (24 ಕಿ.ಮೀ) ನಡುವೆ ₹279 ಕೋಟಿ ವೆಚ್ಚದಲ್ಲಿ ಹೊಸ ಮಾರ್ಗ ನಿರ್ಮಾಣಕ್ಕೆ 2013ರಲ್ಲಿ ಅನುಮೋದಿಸಲಾಗಿತ್ತು. ಈ ಯೋಜನೆಗೆ 320 ಎಕರೆ (ಕರ್ನಾಟಕದಲ್ಲಿ 70 ಎಕರೆ, ಆಂಧ್ರಪ್ರದೇಶದಲ್ಲಿ 250 ಎಕರೆ) ಜಾಗ ಬೇಕಿದೆ. ಆಂಧ್ರ ಸರ್ಕಾರವು 70 ಎಕರೆ ಜಾಗ ಇನ್ನೂ ಹಸ್ತಾಂತರಿಸಿಲ್ಲ ಎಂದರು.

'ರಾಜ್ಯಕ್ಕೆ ₹7,559 ಕೋಟಿ'

ಈ ಸಲದ ಕೇಂದ್ರ ಬಜೆಟ್‌ನಲ್ಲಿ ರಾಜ್ಯದ ರೈಲ್ವೆ ಯೋಜನೆಗಳ ಅನುಷ್ಠಾನಕ್ಕೆ ₹7,559 ಕೋಟಿ ಮೀಸಲಿಡಲಾಗಿದೆ ಎಂದು ಅಶ್ವಿನಿ ವೈಷ್ಣವ್ ತಿಳಿಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, '2009-14ರ ಅವಧಿಯಲ್ಲಿ ರಾಜ್ಯದ ಯೋಜನೆಗಳ ಅನುಷ್ಠಾನಕ್ಕೆ ವಾರ್ಷಿಕ ₹835 ಕೋಟಿ ನೀಡಲಾಗುತ್ತಿತ್ತು. ಈಗ ಅನುದಾನ ಪ್ರಮಾಣ ಒಂಬತ್ತು ಪಟ್ಟು ಜಾಸ್ತಿ ಆಗಿದೆ. ರಾಜ್ಯದಲ್ಲಿ ಈಗ 31 ಯೋಜನೆಗಳ ಅನುಷ್ಠಾನಗೊಳಿಸಲಾಗುತ್ತಿದೆ' ಎಂದರು.

21 ಹೊಸ ಯೋಜನೆಗಳ ಒಟ್ಟು ಉದ್ದ 2,556 ಕಿ.ಮೀ ಹಾಗೂ ಮೊತ್ತ 33,125 ಕೋಟಿ. ಈ ಪೈಕಿ 395 ಕಿ.ಮೀ ಕಾಮಗಾರಿ ಪೂರ್ಣಗೊಂಡಿದ್ದು, 7,592 ಕೋಟಿ ವೆಚ್ಚ ಮಾಡಲಾಗಿದೆ. 10 ದ್ವಿಪಥ ಯೋಜನೆಗಳ ಒಟ್ಟು ಉದ್ದ 1,284 ಕಿ.ಮೀ ಹಾಗೂ ವೆಚ್ಚ 13,891 ಕೋಟಿ. ಈ ಪೈಕಿ 907 ಕಿ.ಮೀ ಕಾಮಗಾರಿ ಪೂರ್ಣಗೊಂಡಿದ್ದು, 9,791 ಕೋಟಿ ವೆಚ್ಚ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

'ಹೆಚ್ಚುವರಿ ಆಹಾರಧಾನ್ಯ: ಪ್ರಸ್ತಾವ ಬಂದಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ (ಪಿಡಿಎಸ್) ಆಹಾರ ಧಾನ್ಯಗಳ ಹೆಚ್ಚುವರಿ ಹಂಚಿಕೆಗಾಗಿ ಕರ್ನಾಟಕ ಸರ್ಕಾರದಿಂದ ಯಾವುದೇ ಪ್ರಸ್ತಾವನೆ ಸಲ್ಲಿಕೆಯಾಗಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಲೋಕಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಗೋವಿಂದ ಕಾರಜೋಳ ಕೇಳಿರುವ ಪ್ರಶ್ನೆಗೆ ಗ್ರಾಹಕ ವ್ಯವಹಾರ ಹಾಗೂ ಆಹಾರ ಸಚಿವರು ಈ ಉತ್ತರ ನೀಡಿದ್ದಾರೆ.

ಕರ್ನಾಟಕ ಸರ್ಕಾರವು ಈಗಾಗಲೇ ಅನುಮತಿಸಿರುವ ಮಿತಿಯವರೆಗೆ ಫಲಾನುಭವಿಗಳನ್ನು ಗುರುತಿಸಿದೆ ಮತ್ತು ಅದರ ಉದ್ದೇಶಿತ ವ್ಯಾಪ್ತಿಯ ಶೇ 100 ಅನ್ನು ಸಾಧಿಸಿದೆ ಎಂದರು.

46,829 ಶಾಲೆಗಳಿಗೆ ಉಚಿತ ವಿದ್ಯುತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ 46,829 ಪ್ರಾಥಮಿಕ, ಪ್ರೌಢಶಾಲೆಗಳು ಹಾಗೂ 1,234 ಪದವಿಪೂರ್ವ ಕಾಲೇಜುಗಳಿಗೆ 'ಗೃಹ ಜ್ಯೋತಿ' ಮಾದರಿಯಲ್ಲಿ ಉಚಿತವಾಗಿ ವಿದ್ಯುತ್ ಸೌಲಭ್ಯ ಕಲ್ಪಿಸಲು ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ. ಕಾವೇರಿ ಸುತ್ತೋಲೆ ಹೊರಡಿಸಿದ್ದಾರೆ.


ಶಾಲೆಗಳಿಗೆ ಉಚಿತ ವಿದ್ಯುತ್ ಹಾಗೂ ನೀರಿನ ಸಂಪರ್ಕ ಕಲ್ಪಿಸುವ ಕುರಿತು 2024-25ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಬಜೆಟ್ ಘೋಷಣೆಯ ಭಾಗವಾಗಿ ಉಚಿತವಾಗಿ ವಿದ್ಯುತ್ ಸೌಲಭ್ಯ ಕಲ್ಪಿಸಲು ₹25 ಕೋಟಿ ಅನುದಾನ ನೀಡಲಾಗಿದೆ. ಎಲ್ಲ ಶಾಲೆಗಳು ಆಯಾ ವ್ಯಾಪ್ತಿಯ ವಿದ್ಯುತ್ ಸರಬರಾಜು ಕಂಪನಿಯ ಕಚೇರಿಗಳಿಗೆ ಆರ್‌ಆರ್ ಸಂಖ್ಯೆ ಹಾಗೂ ಬಳಕೆದಾರರ ಐಡಿಗಳನ್ನು ನೀಡಿ ಜುಲೈ 31ರ ಒಳಗೆ ನೋಂದಣಿ ಮಾಡಿಕೊಳ್ಳುವಂತೆ ಸೂಚಿಸಿದ್ದಾರೆ.

ಉಕ್ರೇನ್ ಮೇಲೆ ರಷ್ಯಾ ವಾಯು ದಾಳಿ

ಕೀವ್ (ರಾಯಿಟರ್ಸ್): ರಷ್ಯಾದ ಗಡಿ ಭಾಗದಲ್ಲಿರುವ ಉಕ್ರೇನ್‌ನ ಹಾರ್ಕಿವ್ ಪ್ರಾಂತ್ಯದ ಆಡಳಿತ ಕೇಂದ್ರದ ಮೇಲೆ ಮಂಗಳವಾರ ರಾತ್ರಿ ರಷ್ಯಾ ಹಲವು ಸುತ್ತಿನ ದಾಳಿ ನಡೆಸಿದೆ.

ದಾಳಿಯಿಂದಾಗಿ ಕನಿಷ್ಠ ಒಂದು ಕಟ್ಟಡಕ್ಕೆ ಹಾನಿಯಾಗಿದೆ. ಅಲ್ಲದೆ ಒಬ್ಬರು ಮೃತಪಟ್ಟಿದ್ದಾರೆ ಎಂದು ಮೇಯರ್ ಇಹೊರ್ ತೆರೆಖೋವ್ ತಿಳಿಸಿದ್ದರು. ಆದರೆ, ಬಳಿಕ ದಾಳಿಯಲ್ಲಿ ವ್ಯಕ್ತಿ ಮೃತಪಟ್ಟಿರುವ ಕುರಿತು ಖಚಿತವಾಗಿಲ್ಲ ಎಂದು ಟೆಲಿಗ್ರಾಂ ಆ್ಯಪ್‌ನಲ್ಲಿ ಹೇಳಿದ್ದಾರೆ.

ಷೇರುಪೇಟೆ ವಹಿವಾಟು 280



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,479
ಇಂದಿನ ಅಂತ್ಯ	24,413
▼	65
ದಿನದ ಕನಿಷ್ಠ	24,307

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹266-420

ದ್ವಿತಳಿ (ಬಿ.ವಿ) ₹266-639

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹550
12 ಕ್ಕೆ	₹72
ಮೈಸೂರು	
100ಕ್ಕೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹990 (990)
ಪಾಮೋಲಿನ್	₹906 (910)

ವಿನಿಮಯ ದರ

$ ಡಾಲರ್	83.71
£ ಪೌಂಡ್	108.06
€ ಯುರೊ	90.74
¥ ಯೆನ್ (100ಕ್ಕೆ)	55

ಕರ್ಣಾಟಕ ಬ್ಯಾಂಕ್ ಲಾಭ ಏರಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: 2024–25ನೇ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಕರ್ಣಾಟಕ ಬ್ಯಾಂಕ್, ₹400 ಕೋಟಿ ನಿವ್ವಳ ಲಾಭ ದಾಖಲಿಸಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ (₹370 ಕೋಟಿ) ಲಾಭದಲ್ಲಿ ಶೇ 7.99ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಮಂಗಳೂರಿನಲ್ಲಿರುವ ಬ್ಯಾಂಕ್‌ನ ಕೇಂದ್ರ ಕಚೇರಿಯಲ್ಲಿ ಬುಧವಾರ ನಡೆದ ಆಡಳಿತ ಮಂಡಳಿಯ ನಿರ್ದೇಶಕರ ಸಭೆಯಲ್ಲಿ ಮೊದಲ ತ್ರೈಮಾಸಿಕದ ಆರ್ಥಿಕ ಫಲಿತಾಂಶಕ್ಕೆ ಅನುಮೋದನೆ ನೀಡಲಾಯಿತು.

ಕಳೆದ ವರ್ಷಕ್ಕೆ ಹೋಲಿಸಿದರೆ ಬ್ಯಾಂಕ್‌ನ ಒಟ್ಟಾರೆ ವಹಿವಾಟು ಶೇ 17.10ರಷ್ಟು ಏರಿಕೆಯಾಗಿ ₹1,75,619 ಕೋಟಿಗೆ ತಲುಪಿದೆ (ಕಳೆದ ವರ್ಷ ₹1,49,971 ಕೋಟಿ). ನಿಶ್ಚಿತ ಠೇವಣಿ ಪ್ರಮಾಣ ಶೇ 15.18ರಷ್ಟು ಏರಿಕೆಯಾಗಿ ₹1,00,164 ಕೋಟಿ (ಕಳೆದ ವರ್ಷ ₹86,960 ಕೋಟಿ) ಆಗಿದೆ. ಮುಂಗಡ ಪ್ರಮಾಣ ಶೇ 19.75ರಷ್ಟು ಏರಿಕೆಯಾಗಿ ₹75,455 ಕೋಟಿಗೆ (ಕಳೆದ ವರ್ಷ ₹63,012 ಕೋಟಿ) ತಲುಪಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣ (ಜಿಎನ್‌ಪಿಎ) ಶೇ 3.54ಕ್ಕೆ (ಕಳೆದ ವರ್ಷ ಶೇ 3.68) ಇಳಿಕೆಯಾಗಿದೆ. ನಿವ್ವಳ ಎನ್‌ಪಿಎ ಕಳೆದ ವರ್ಷ ಶೇ 1.43ರಷ್ಟಿದ್ದರೆ ಈ ಬಾರಿ ಶೇ 1.66ಕ್ಕೆ ಏರಿಕೆಯಾಗಿದೆ.


‘ಒಟ್ಟಾರೆ ವಹಿವಾಟು, ಠೇವಣಿ ಮತ್ತು ಸಾಲ ವಿತರಣೆ ಪ್ರಮಾಣ ಮುಂತಾದ ವಿವಿಧ ಭಾಗಗಳಲ್ಲಿ ಮೊದಲ ತ್ರೈಮಾಸಿಕದಲ್ಲಿ ಹಲವು ಮೈಲುಗಲ್ಲುಗಳನ್ನು ಸ್ಥಾಪಿಸಲು ಸಾಧ್ಯವಾಗಿದೆ’ ಎಂದು ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಕೃಷ್ಣನ್ ಎಚ್. ತಿಳಿಸಿದ್ದಾರೆ.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಪ್ರಾಯೋಗಿಕ ಜಾರಿ

ಉಪಗ್ರಹ ಆಧಾರಿತ ಟೋಲ್

ನವದೆಹಲಿ (ಪಿಟಿಐ): ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಟೋಲ್ ಪ್ಲಾಜಾಗಳ ಬದಲಾಗಿ ಪ್ರಾಯೋಗಿಕವಾಗಿ ಉಪಗ್ರಹ ಆಧಾರಿತ ಟೋಲ್ ವ್ಯವಸ್ಥೆ ಜಾರಿಗೊಳಿಸಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ನಿರ್ಧರಿಸಿದೆ.

‘ಹರಿಯಾಣದ ಪಾಣಿಪತ್–ಹಿಸಾರ್ ರಾಷ್ಟ್ರೀಯ ಹೆದ್ದಾರಿ 709ರಲ್ಲಿಯೂ ಈ ವ್ಯವಸ್ಥೆ ಜಾರಿಗೊಳಿಸಲಾಗುತ್ತಿದೆ. ಬಳಿಕ ಹಂತ ಹಂತವಾಗಿ ಆಯ್ದ ಹೆದ್ದಾರಿಗಳಲ್ಲಿ ಜಿಎನ್‌ಎಸ್‌ಎಸ್ (ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಂ) ಆಧಾರಿತ ಎಲೆಕ್ಟ್ರಾನಿಕ್ ಟೋಲ್ ಕಲೆಕ್ಷನ್ (ಇಟಿಸಿ) ಅನುಷ್ಠಾನಕ್ಕೆ ಕ್ರಮವಹಿಸಲಾಗುವುದು’ ಎಂದು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು, ಬುಧವಾರ ರಾಜ್ಯಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.



ಕಾಲಮಿತಿಯೊಳಗೆ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಪೂರ್ಣಕ್ಕೆ ವಿಳಂಬವಾಗುತ್ತಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ತೊಡಕು ಇದಕ್ಕೆ ಬಹುಮುಖ್ಯ ಕಾರಣವಾಗಿದೆ

ನಿತಿನ್ ಗಡ್ಕರಿ, ಕೇಂದ್ರ ಸಾರಿಗೆ ಸಚಿವ

ಮೊದಲ ಹಂತದಲ್ಲಿ ಫಾಸ್ಟ್ಯಾಗ್ ವ್ಯವಸ್ಥೆ ಬಳಸಿಕೊಂಡೇ ಜಿಎನ್‌ಎಸ್‌ಎಸ್–ಇಟಿಸಿ ವ್ಯವಸ್ಥೆಯು ಅನುಷ್ಠಾನಗೊಳ್ಳಲಿದೆ. ಕೆಲವು ದಿನಗಳವರೆಗೆ ಹಾಲಿ ಇರುವ ಆರ್‌ಎಫ್‌ಐಡಿ– ಇಟಿಸಿ (ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್) ಮತ್ತು ಹೊಸ ವ್ಯವಸ್ಥೆ ಎರಡೂ ಜಾರಿಯಲ್ಲಿ ಇರಲಿವೆ ಎಂದು ಹೇಳಲಾಗಿದೆ.

ಲಾಜಿಸ್ಟಿಕ್ಸ್ ಸೇವೆ ಸುಧಾರಣೆ: ರಾಷ್ಟ್ರೀಯ ಹೆದ್ದಾರಿಗಳಲ್ಲಿ ಲಾಜಿಸ್ಟಿಕ್ಸ್ ಸೇವೆಯನ್ನು ಸುಧಾರಿಸಬೇಕಿದೆ. ಇ–ವೇ ಬಿಲ್ ಮತ್ತು ಟೋಲ್ ಸಂಗ್ರಹದ ದತ್ತಾಂಶವನ್ನು ವಿಶ್ಲೇಷಿಸಬೇಕಿದೆ. ವಾಹನ ಸಂಚಾರದ ಬಗ್ಗೆ ಸಮೀಕ್ಷೆ ನಡೆಸಬೇಕಿದೆ. ಇದಕ್ಕೆ ಅನುಗುಣವಾಗಿ ಪಿಎಂ ಗತಿಶಕ್ತಿ ಯೋಜನೆಯಡಿ ಸಮಗ್ರ ವ್ಯವಸ್ಥೆ ರೂಪಿಸಲು ನಿರ್ಧರಿಸಲಾಗಿದೆ ಎಂದು ಗಡ್ಕರಿ ಅವರು, ಮತ್ತೊಂದು ಪ್ರಶ್ನೆಗೆ ಉತ್ತರಿಸಿದ್ದಾರೆ.

ಹೆದ್ದಾರಿ ಕಾಮಗಾರಿಗಳ ವಿಳಂಬಕ್ಕೆ ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ ಸಿಗುವುದು ವಿಳಂಬವಾಗುತ್ತಿದೆ. ಅತಿಕ್ರಮಣ ತೆರವು, ಕಾನೂನು ಮತ್ತು ಸುವ್ಯವಸ್ಥೆಯು ಸವಾಲಾಗಿದೆ. ಗುತ್ತಿಗೆದಾರರು ಹಣಕಾಸಿನ ಸಮಸ್ಯೆ ಎದುರಿಸುತ್ತಿದ್ದಾರೆ. ಕೆಲವರು ನಿರ್ಲಕ್ಷ್ಯ ಧೋರಣೆ ತಳೆದಿದ್ದಾರೆ. ಮಳೆ, ಪ್ರವಾಹ, ಭೂಕುಸಿತ ಸೇರಿ ಹಲವು ಕಾರಣಗಳು ಕಾಮಗಾರಿಯ ವಿಳಂಬಕ್ಕೆ ಕಾರಣವಾಗಿವೆ ಎಂದು ಹೇಳಿದ್ದಾರೆ.

2014ರಿಂದ ಇಲ್ಲಿಯವರೆಗೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು, ಹೆದ್ದಾರಿ ಯೋಜನೆಗಳ ಪೂರ್ಣಕ್ಕೆ ₹3.77 ಲಕ್ಷ ಕೋಟಿ ಸಾಲ ಪಡೆದಿದೆ ಎಂದು ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ 20 ಸಾವಿರ ಕಿ.ಮೀ. ಉದ್ದದಷ್ಟು ಹೆದ್ದಾರಿ ನಿರ್ಮಾಣಕ್ಕೆ ಸಚಿವಾಲಯವು ಮುಂದಾಗಿದೆ. ಇದರಲ್ಲಿ ಹಾಲಿ ನಿರ್ಮಾಣ ಹಂತದಲ್ಲಿರುವ ಮತ್ತು ಅನುಮೋದನೆ ನೀಡಿರುವ ಹೆದ್ದಾರಿಗಳು ಸೇರಿವೆ ಎಂದು ವಿವರಿಸಿದ್ದಾರೆ.

ಸುದ್ದಿ 2 ನಿಮಿಷ

‘ವಿವಾದ್ ಸೆ ವಿಶ್ವಾಸ್’ ಆಯ್ಕೆಗೆ ತೆರಿಗೆ ಮಂಡಳಿ ಸಲಹೆ

ನವದೆಹಲಿ (ಪಿಟಿಐ): ತೆರಿಗೆ ವಿವಾದ ಪರಿಹಾರ ಯೋಜನೆ (ವಿವಾದ್ ಸೆ ವಿಶ್ವಾಸ್) ಸಂಬಂಧ ಅಧಿಸೂಚನೆ ಹೊರಡಿಸುವು ದಕ್ಕೂ ಮೊದಲು ಸ್ಪಷ್ಟನೆ ಬಯಸಿ ತೆರಿಗೆದಾರರು ಕೇಳುವ ಸಾಮಾನ್ಯ ಪ್ರಶ್ನೆಗಳಿಗೆ ಉತ್ತರ ಪ್ರಕಟಿಸಲಾಗುವುದು ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ತಿಳಿಸಿದೆ.

ನೇರ ತೆರಿಗೆಗೆ ಸಂಬಂಧಿಸಿದ ವ್ಯಾಜ್ಯಗಳ ಇತ್ಯರ್ಥಕ್ಕಾಗಿ ಕೇಂದ್ರ ಬಜೆಟ್‌ನಲ್ಲಿ ಈ ಹಣಕಾಸು ವರ್ಷಕ್ಕೂ ಯೋಜನೆ ಪ್ರಕಟಿಸಲಾಗಿದೆ. ಮೇಲ್ಮನವಿ ನ್ಯಾಯಮಂಡಳಿಗಳು ಮತ್ತು ನ್ಯಾಯಾಲಯಗಳಲ್ಲಿ ಸಾಕಷ್ಟು ತೆರಿಗೆ ವ್ಯಾಜ್ಯಗಳು ವಿಚಾರಣೆ ಹಂತದಲ್ಲಿವೆ. ತೆರಿಗೆದಾರರು ಈ ಯೋಜನೆ ಆಯ್ಕೆ ಮಾಡಿಕೊಂಡರೆ ದಾವೆಗಳು ತ್ವರಿತವಾಗಿ ಪರಿಹಾರ ಕಾಣಲಿವೆ ಎಂದು ಸಿಬಿಡಿಟಿ ಅಧ್ಯಕ್ಷ ರವಿ ಅಗರವಾಲ್ ಹೇಳಿದ್ದಾರೆ.



2020ರಲ್ಲಿ ಕೇಂದ್ರ ಸರ್ಕಾರವು ಈ ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯಿಂದ ಇಲ್ಲಿಯವರೆಗೆ ಸರ್ಕಾರದ ಬೊಕ್ಕಸಕ್ಕೆ ₹75 ಸಾವಿರ ಕೋಟಿ ಪಾವತಿಯಾಗಿದೆ. ಈ ಯೋಜನೆಯ ಆಯ್ಕೆಗೆ ಡಿಸೆಂಬರ್ 31 ಆರಂಭಿಕ ದಿನವಾಗಿದೆ ಎಂದು ತಿಳಿಸಿದ್ದಾರೆ.

ಬಜಾಜ್ ಫಿನ್‌ಸರ್ವ್‌ಗೆ ₹2,318 ಕೋಟಿ ಲಾಭ

ನವದೆಹಲಿ (ಪಿಟಿಐ): ಬಜಾಜ್ ಫಿನ್‌ಸರ್ವ್ ಲಿಮಿಟೆಡ್, 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹2,318 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹1,943 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 10ರಷ್ಟು ಏರಿಕೆಯಾಗಿದೆ ಎಂದು ಕಂಪನಿಯು, ಬುಧವಾರ ಷೇರುಪೇಟೆಗೆ ತಿಳಿಸಿದೆ.

ಈ ತ್ರೈಮಾಸಿಕದಲ್ಲಿ ಒಟ್ಟು ವರಮಾನ ₹31,480 ಕೋಟಿ ಆಗಿದೆ ಎಂದು ತಿಳಿಸಿದೆ.

ಬಜಾಜ್ ಸಮೂಹದ ಅಂಗಸಂಸ್ಥೆ ಬಜಾಜ್ ಅಲಯನ್ಸ್ ಜನರಲ್ ಇನ್ಶೂರೆನ್ಸ್ ಲಾಭದಲ್ಲಿ ಶೇ 39ರಷ್ಟು ಹೆಚ್ಚಳವಾಗಿದೆ. ಒಟ್ಟು ₹576 ಕೋಟಿ ಲಾಭ ಗಳಿಸಿದೆ. ಬಜಾಜ್ ಅಲಯನ್ಸ್ ಲೈಫ್ ಇನ್ಶೂರೆನ್ಸ್ ₹104 ಕೋಟಿ ಲಾಭ ದಾಖಲಿಸಿದೆ.

ಒಂದು ಲಕ್ಷ 4ಜಿ ಟವರ್ ಅಳವಡಿಕೆಗೆ ನಿರ್ಧಾರ: ಕೇಂದ್ರ ಹೇಳಿಕೆ

ಬಿಎಸ್‌ಎನ್‌ಎಲ್‌ಗೆ ₹5,371 ಕೋಟಿ ನಷ್ಟ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ಭಾರತ ಸಂಚಾರ ನಿಗಮ ಲಿಮಿಟೆಡ್ (ಬಿಎಸ್‌ಎನ್‌ಎಲ್), ₹5,371 ಕೋಟಿ ನಷ್ಟ ಅನುಭವಿಸಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಸರ್ಕಾರವು ಬಿಎಸ್‌ಎನ್‌ಎಲ್ ಮತ್ತು ಮಹಾನಗರ ಟೆಲಿಕಾಂ ನಿಗಮ ಲಿಮಿಟೆಡ್ (ಎಂಟಿಎನ್‌ಎಲ್) ಪುನರುಜ್ಜೀವನಕ್ಕೆ ವಿಶೇಷ ಪ್ಯಾಕೇಜ್‌ಗಳನ್ನು ಘೋಷಿಸಿದೆ ಎಂದು ಕೇಂದ್ರ ಸಂವಹನ ಖಾತೆಯ ರಾಜ್ಯ ಸಚಿವ ಪೆಮ್ಮಸಾನಿ ಚಂದ್ರಶೇಖರ್, ಬುಧವಾರ ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಆತ್ಮನಿರ್ಭರ ಭಾರತ ಯೋಜನೆಯಡಿ ದೇಶದಾದ್ಯಂತ 4ಜಿ ತಂತ್ರಜ್ಞಾನದ ವಿಸ್ತರಣೆಗೆ ಬಿಎಸ್‌ಎನ್‌ಎಲ್ ಒಂದು ಲಕ್ಷ ಪ್ರದೇಶಗಳಲ್ಲಿ 4ಜಿ ಟವರ್ ಅಳವಡಿಕೆಗೆ ನಿರ್ಧರಿಸಿದೆ. ಈ ಉಪಕರಣಗಳನ್ನು 5ಜಿ ಸೇವೆ ಒದಗಿಸಲು ಅನುಕೂಲವಾಗುವಂತೆ ಅಪ್‌ಡೇಟ್ ಮಾಡಬಹುದಾಗಿದೆ ಎಂದು ತಿಳಿಸಿದ್ದಾರೆ.

2023–24ರಲ್ಲಿ ಬಿಎಸ್‌ಎನ್‌ಎಲ್‌ನ ತೆರಿಗೆ, ಬಡ್ಡಿ, ಸಾಲ ತೀರುವಳಿ (ಇಬಿಐಟಿಡಿಎ) ನಂತರದ ಆದಾಯವು ₹2,164 ಕೋಟಿ ಆಗಿದೆ. 2022–23ರಲ್ಲಿ ಬಿಎಸ್‌ಎನ್‌ಎಲ್ ₹8,161 ಕೋಟಿ ನಷ್ಟ ಅನುಭವಿಸಿತ್ತು.

2019ರಲ್ಲಿ ಸರ್ಕಾರವು ಬಿಎಸ್‌ಎನ್‌ಎಲ್ ಪುನಶ್ಚೇತನಕ್ಕೆ ₹69 ಸಾವಿರ ಕೋಟಿ, 2022ರಲ್ಲಿ ₹1.64 ಲಕ್ಷ ಕೋಟಿ ಹಾಗೂ 2023ರಲ್ಲಿ 4ಜಿ/5ಜಿ ತರಂಗಾಂತರ ಖರೀದಿಗೆ ನೆರವಾಗಲು ₹89 ಸಾವಿರ ಕೋಟಿ ಪ್ಯಾಕೇಜ್ ಘೋಷಿಸಿತ್ತು.

ದತ್ತಾಂಶ ಸೋರಿಕೆ ತಡೆಗೆ ಕ್ರಮ

ಬಿಎಸ್‌ಎನ್‌ಎಲ್‌ನಲ್ಲಿ ಬಳಕೆದಾರರ ದತ್ತಾಂಶ ಸೋರಿಕೆ ಸಂಬಂಧ ಮಾರ್ಚ್ 20ರಂದು ಇಂಡಿಯನ್ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಂ ವರದಿ ಸಲ್ಲಿಸಿದೆ ಎಂದು ಸಚಿವ ಚಂದ್ರಶೇಖರ್, ಮತ್ತೊಂದು ಪ್ರಶ್ನೆಗೆ ಉತ್ತರಿಸಿದ್ದಾರೆ.

ರೆಸ್ಪಾನ್ಸ್ ಟೀಂ ಅಧಿಕಾರಿಗಳು ಕೆಲವು ದತ್ತಾಂಶ ಹಂಚಿಕೊಂಡಿದ್ದರು. ಈ ದತ್ತಾಂಶವು ಸರ್ವರ್‌ನಿಂದ ಕಂಪ್ಯೂಟರ್ ನೆಟ್‌ವರ್ಕ್‌ಗೆ ಫೈಲ್‌ಗಳನ್ನು ವರ್ಗಾಯಿಸಲು ಬಳಸುವ ಬಿಎಸ್‌ಎನ್‌ಎಲ್ ಫೈಲ್ ಟ್ರಾನ್ಸ್‌ಫರ್ ಪ್ರೋಟೊಕಾಲ್‌ನ (ಎಫ್‌ಟಿಪಿ) ದತ್ತಾಂಶಕ್ಕೆ ಹೋಲಿಕೆಯಾಗಿದ್ದವು. ಹಾಗಾಗಿ, ಆ ಸರ್ವರ್ ಅನ್ನು ಬದಲಾಯಿಸಲಾಗಿದೆ ಎಂದು ತಿಳಿಸಿದ್ದಾರೆ.

ದತ್ತಾಂಶ ಸೋರಿಕೆ ತಡೆ ಸಂಬಂಧ ಆಂತರಿಕ ಸಮಿತಿ ರಚಿಸಲಾಗಿದೆ ಎಂದು ಹೇಳಿದ್ದಾರೆ.

ಕರಡಿ ಕುಣಿತ: ಸೆನ್ಸೆಕ್ಸ್ ಕುಸಿತ

ಮುಂಬೈ (ಪಿಟಿಐ): ಹಣಕಾಸು ಮತ್ತು ಬ್ಯಾಂಕಿಂಗ್ ವಲಯದ ಷೇರುಗಳ ಮಾರಾಟದ ಹೆಚ್ಚಳದಿಂದಾಗಿ ಸತತ ನಾಲ್ಕನೇ ದಿನವಾದ ಬುಧವಾರ ಕೂಡ ದೇಶದ ಷೇರುಪೇಟೆಗಳಲ್ಲಿ ಸೂಚ್ಯಂಕಗಳು ಇಳಿಕೆ ದಾಖಲಿಸಿವೆ.

ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ಹಾಗೂ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆ ಹೆಚ್ಚಿಸಿರುವುದು ಷೇರುಪೇಟೆಯಲ್ಲಿ ಕರಡಿ ಕುಣಿತಕ್ಕೆ ಕಾರಣವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 280 ಅಂಶ ಇಳಿಕೆ ಕಂಡು 80,148 ಅಂಶಗಳಲ್ಲಿ ಸ್ಥಿರಗೊಂಡಿತು. ಸೆನ್ಸೆಕ್ಸ್ ಗುಚ್ಛದಲ್ಲಿನ 30 ಕಂಪನಿಗಳ ಪೈಕಿ 19 ಕಂಪನಿಗಳ ಷೇರಿನ ಮೌಲ್ಯ ಇಳಿಕೆಯಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 65 ಅಂಶ ಇಳಿಕೆ ಕಂಡು, 24,413 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಬಜಾಜ್ ಫಿನ್‌ಸರ್ವ್ ಷೇರಿನ ಮೌಲ್ಯದಲ್ಲಿ ಶೇ 2ರಷ್ಟು ಇಳಿಕೆಯಾಗಿದೆ. ಬಜಾಜ್ ಫೈನಾನ್ಸ್, ಹಿಂದುಸ್ತಾನ್ ಯೂನಿಲಿವರ್, ಕೋಟಕ್ ಮಹೀಂದ್ರ, ಅದಾನಿ ಪೋರ್ಟ್ಸ್, ಎಕ್ಸಿಸ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಟೆಕ್ ಮಹೀಂದ್ರ, ಐಟಿಸಿ, ಎನ್‌ಟಿಪಿಸಿ, ಟಾಟಾ ಮೋಟರ್ಸ್ ಮತ್ತು ಸನ್ ಫಾರ್ಮಾ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಮಂಗಳವಾರ ನಡೆದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹2,975 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬ್ರೆಂಟ್ ಕಚ್ಚಾತೈಲದ ಬೆಲೆಯು ಶೇ 0.75ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರಲ್‌ಗೆ 81.62 ಡಾಲರ್ ಆಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಕೋಕ	14029-24189	ರಾಶಿ	33169-50099
ಕೋಕ	18000-28500	ಫ್ಯಾಕ್ಟರಿ	10109-19529	ಸರಕು	57009-84500
ಹೊಸತು	28500-38500	ಹಳೆಚಾಲಿ	36599-39009	**ಶಿರಸಿ**	
ಹಳತು	38500-46500	ಹೊಸಚಾಲಿ	31699-34899	ಬೆಟ್ಟೆ	33299-40619
ಕಾರ್ಕಳ		**ಪುತ್ತೂರು**		ಬಿಳಿಗೋಟು	23111-30699
ಹೊಸತು	25000-38500	ಹೊಸತು	26500-38500	ಚಾಲಿ	32672-36181
ಹಳತು	30000-46500	**ಶಿವಮೊಗ್ಗ**		ಕೆಂಪುಗೋಟು	21299-31069
ಕುಮಟ		ಬೆಟ್ಟೆ	47609-54799	ರಾಶಿ	43309-47499
ಚಿಪ್ಪು	25699-28019	ಗೊರಬಲು	18099-34500		

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹210
ಆರ್‌ಎಸ್‌ಎಸ್-5	₹204
ಗುಡ್ ಲಾಟ್	₹191

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹10000-10000
ತಿಪಟೂರು	₹9100-9800

ಸಂಕ್ಷಿಪ್ತ ಸುದ್ದಿ

ಚಿನ್ನದ ದರ: 2 ದಿನದಲ್ಲಿ ₹4,000 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಧಾರಣೆಯು ಬುಧವಾರವೂ ಇಳಿಕೆಯಾಗಿದೆ.

10 ಗ್ರಾಂ ಚಿನ್ನಕ್ಕೆ ₹650 ಕಡಿಮೆಯಾಗಿ, ₹71,650ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಕೆ.ಜಿ ಬೆಳ್ಳಿ ದರ ₹87,500 ಇದೆ.

ಕೇಂದ್ರದ ಬಜೆಟ್‌ನಲ್ಲಿ ಚಿನ್ನ ಮತ್ತು ಬೆಳ್ಳಿ ಮೇಲಿನ ಕಸ್ಟಮ್ಸ್ ಸುಂಕವನ್ನು ಶೇ 6ಕ್ಕೆ ಕಡಿತಗೊಳಿಸಲಾಗಿದೆ. ಹಾಗಾಗಿ, ಚಿನ್ನದ ದರವು ಮಂಗಳವಾರದ ವಹಿವಾಟಿನಲ್ಲಿ 10 ಗ್ರಾಂಗೆ ₹3,350 ಕಡಿಮೆಯಾಗಿತ್ತು. ಎರಡು ದಿನಗಳ ವಹಿವಾಟಿನಲ್ಲಿ ₹4 ಸಾವಿರ ಕಡಿಮೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಎಕ್ಸಿಸ್ ಬ್ಯಾಂಕ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಖಾಸಗಿ ವಲಯದ ಎಕ್ಸಿಸ್ ಬ್ಯಾಂಕ್, 2024–25ನೇ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹6,035 ಕೋಟಿ ನಿವ್ವಳ ಲಾಭ ಗಳಿಸಿದೆ.

2023–24ರ ಇದೇ ಅವಧಿಯಲ್ಲಿ ಬ್ಯಾಂಕ್ ₹5,797 ಕೋಟಿ ಲಾಭ ಗಳಿಸಿತ್ತು. ಹೆಚ್ಚಿನ ಬಡ್ಡಿ ವರಮಾನದಿಂದ ಲಾಭದ ಪ್ರಮಾಣದಲ್ಲಿ ಶೇ 4ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಬುಧವಾರ ತಿಳಿಸಿದೆ.

ಬಡ್ಡಿ ವರಮಾನವು ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹25,556 ಕೋಟಿ ಆಗಿತ್ತು. ಈ ತ್ರೈಮಾಸಿಕದಲ್ಲಿ ₹30,060 ಕೋಟಿಗೆ ಏರಿಕೆಯಾಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣ (ಜಿಎನ್‌ಪಿಎ) ಶೇ 1.96ರಿಂದ ಶೇ 1.54ಕ್ಕೆ ಇಳಿದಿದೆ.

ಮುಂಬೈ ಧಾರಣೆ

ಶೇಂಗಾ

24-07-2024

ಜಾವಾ 70/80(ಹೊಸ)	11800-11900
ಜಾವಾ 80/90(ಹೊಸ)	11200-11300
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	905 (915)
ಪಾಮ್ ವಾರದ ಡೆಲಿವರಿ	908 (908)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹68,800 (69,300)

ಬೆಳ್ಳಿ ಕೆ.ಜಿ ₹84,900 (84,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಬದುಕುಳಿದ ಪೈಲಟ್ • ಅವಘಡಕ್ಕೆ ಕಾರಣ ನಿಗೂಢ

ನೇಪಾಳ: ವಿಮಾನ ಪತನ– 18 ಸಾವು

ಪ್ರಜಾವಾಣಿ ವಾರ್ತೆ/ಎಎಫ್‌ಪಿ/ರಾಯಿಟರ್ಸ್

ಕಠ್ಮಂಡು: ಇಲ್ಲಿನ ತ್ರಿಭುವನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಪೊಖರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಬೇಕಿದ್ದ ವಿಮಾನವೊಂದು ಬುಧವಾರ ಪತನಗೊಂಡಿದೆ. ವಿಮಾನದಲ್ಲಿದ್ದ 19 ಮಂದಿಯಲ್ಲಿ 18 ಮಂದಿ ಮೃತಪಟ್ಟಿದ್ದಾರೆ. ವಿಮಾನದ ಪೈಲಟ್ ಮಾತ್ರವೇ ಬದುಕುಳಿದಿದ್ದು, ಅವರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ.

ಟೇಕ್ ಆಫ್ ಆಗುತ್ತಿದ್ದಂತೆಯೇ ವಿಮಾನವು ಪತನಗೊಂಡಿದೆ. ಟೇಕ್ ಆಫ್ ಆದ ಕೆಲವೇ ಕ್ಷಣಗಳಲ್ಲಿ ವಿಮಾನವು ರನ್‌ವೇ ಸಮೀಪ ಅಪ್ಪಳಿಸಿದೆ. ಬೆಳಿಗ್ಗೆ ಸುಮಾರು 11.11 ಗಂಟೆಗೆ ಈ ಅವಘಡ ಸಂಭವಿಸಿದ್ದು, 15 ಮಂದಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮೂವರು ಮೃತಪಟ್ಟಿದ್ದಾರೆ. ನೇಪಾಳದ ದೇಶೀಯ ವಿಮಾನಯಾನ ಸಂಸ್ಥೆ ಸೂರ್ಯ ಏರ್‌ಲೈನ್ಸ್‌ನ ವಿಮಾನ ಇದಾಗಿದೆ.



ನೇಪಾಳದ ತ್ರಿಭುವನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೂರ್ಯ ಏರ್‌ಲೈನ್ಸ್‌ನ ವಿಮಾನ ಬುಧವಾರ ಪತನಗೊಂಡಿತು —ಎಎಫ್‌ಪಿ ಚಿತ್ರ

ಹಾರಾಟ ನಡೆಸಲು ವಿಮಾನವು ಸುಸ್ಥಿತಿಯಲ್ಲಿ ಇದೆಯೇ ಎನ್ನುವುದನ್ನು ಪರೀಕ್ಷಿಸಲು ವಿಮಾನ ಹಾರಾಟ ನಡೆಸಲಾಗುತ್ತಿತ್ತು

ಮುಖೇಶ್ ಖಾನಲ್, ಸೂರ್ಯ ಏರ್‌ಲೈನ್ಸ್‌ನ ಮಾರುಕಟ್ಟೆ ವಿಭಾಗದ ಮುಖ್ಯಸ್ಥ

ಘಟನೆಯಿಂದ ಮನಸೊಂದಿದೆ. ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪತನಕ್ಕೆ ಕಾರಣಗಳನ್ನು ತಿಳಿದುಕೊಳ್ಳಲು ಅಧಿಕಾರಿಗಳ ಜೊತೆಗೂ ಮಾತನಾಡಿದ್ದೇನೆ

ಕೆ.ಪಿ. ಶರ್ಮಾ ಓಲಿ, ನೇಪಾಳ ಪ್ರಧಾನಿ

‘ಸೂರ್ಯ ಏರ್‌ಲೈನ್ಸ್ ಸಂಸ್ಥೆಯ ತಂತ್ರಜ್ಞ ಮನು ರಾಜ್ ಶರ್ಮಾ, ಅವರ ಪತ್ನಿ ಹಾಗೂ ನಾಲ್ಕು ವರ್ಷ ಅವರ ಮಗ ಇದೇ ವಿಮಾನದಲ್ಲಿ ಪ್ರಯಾಣಿಸುತ್ತಿದ್ದರು. ಪೈಲಟ್, 37 ವರ್ಷದ ಕ್ಯಾಪ್ಟನ್ ಮನೀಶ್ ಶಕ್ಯಾ ಅವರಿಗೆ ಕಣ್ಣು ಹಾಗೂ ಬೆನ್ನುಹುರಿಗೆ ತೀವ್ರ ಗಾಯಗಳಾಗಿದ್ದು, ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ. ಅವರ ಸ್ಥಿತಿ ಗಂಭೀರವಾಗಿದೆ’ ಎಂದು ನೇಪಾಳದ ವಿಮಾನಯಾನ ಸಚಿವಾಲಯ ಮಾಹಿತಿ ನೀಡಿದೆ.

‘ಯಾಕಾಗಿ ವಿಮಾನವು ಪತನಗೊಂಡಿತು ಎನ್ನುವುದು ತಿಳಿದುಬಂದಿಲ್ಲ’ ಎಂದು ತ್ರಿಭುವನ್ ವಿಮಾನ ನಿಲ್ದಾಣದ ಮುಖ್ಯಸ್ಥ ಜಗನ್ನಾಥ ನಿರೌಲಾ ಮಾಹಿತಿ ನೀಡಿದ್ದಾರೆ. ‘ವಿಮಾನವು ಪತನಗೊಂಡಿದ್ದನ್ನು ನಮಗೆ ಟ್ರ್ಯಾಕ್ ಮಾಡಲು ಸಾಧ್ಯವಾಗಲಿಲ್ಲ. ಯಾಕೆಂದರೆ, ವಿಮಾನದಲ್ಲಿ ಅತ್ಯಾಧುನಿಕವಾದ ಎಡಿಎಸ್–ಬಿ ಟ್ರಾನ್ಸ್‌ಪಾಂಡರ್ ಅಳವಡಿಸಿರಲಿಲ್ಲ’ ಎಂದು ಫ್ಲೈಟ್‌ಟ್ರೇಡರ್ 24 ಸಂಸ್ಥೆ ಹೇಳಿದೆ. ಟ್ರಾನ್ಸ್‌ಪಾಂಡರ್ ಎಂದರೆ, ವಿಮಾನ ಹಾರಾಟದ ವೇಳೆ ವಿಮಾನವು ಎಲ್ಲಿದೆ ಎನ್ನುವುದನ್ನು ಏರ್ ಟ್ರಾಫಿಕ್ ಕಂಟ್ರೋಲರ್‌ಗೆ ರೇಡಿಯೊ ತರಂಗಾಂತರಗಳ ಮೂಲಕ ತಿಳಿಸುವ ಯಂತ್ರವಾಗಿದೆ.

ರನ್‌ವೇಗೆ ಬಂದು ಅಪ್ಪಳಿಸುತ್ತಿದ್ದಂತೆಯೇ ವಿಮಾನವು ಹೊತ್ತಿ ಉರಿದಿದೆ. ರನ್‌ವೇನಲ್ಲಿಯೇ ಇದ್ದ ಕೆಲವು ಸಿಬ್ಬಂದಿ ರಕ್ಷಣೆಗೆ ಧಾವಿಸಿದರಾದರೂ ಬೆಂಕಿಯ ತಾಪ ಅವರನ್ನು ಹಿಂದಕ್ಕೆ ಸರಿಯುವಂತೆ ಮಾಡಿತು. ನಂತರ, ಅಗ್ನಿಶಾಮಕ ಸಿಬ್ಬಂದಿ ಹಾಗೂ ನೇಪಾಳ ಸೇನಾ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವ ಕಾರ್ಯ ಮಾಡಿದ್ದಾರೆ.

ಪತನಕ್ಕೆ ಕಾರಣ ಪತ್ತೆ ಮಾಡಲು ಐವರು ತಜ್ಞರ ಸಮಿತಿ ರಚಿಸಲು ಸರ್ಕಾರ ನಿರ್ಧರಿಸಿದೆ.

ಪ್ರಚಾರಕ್ಕೆ ₹837 ಕೋಟಿ ದೇಣಿಗೆ ಸಂಗ್ರಹಿಸಿದ ಕಮಲಾ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ಡೆಮಾಕ್ರಟಿಕ್ ಪಕ್ಷದ ಸಂಭವನೀಯ ಅಭ್ಯರ್ಥಿ, ಹಾಲಿ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಚುನಾವಣಾ ಪ್ರಚಾರಕ್ಕಾಗಿ 11 ಲಕ್ಷಕ್ಕೂ ಹೆಚ್ಚು ಜನರಿಂದ ಸುಮಾರು ₹837 ಕೋಟಿ ಸಂಗ್ರಹಿಸಿದ್ದಾರೆ. ಇದು ಕಮಲಾ ಪರ ವ್ಯಾಪಕ ಜನಬೆಂಬಲ ವ್ಯಕ್ತವಾಗುತ್ತಿರುವುದರ ಸೂಚನೆಯಾಗಿದೆ.

‘ಭಾನುವಾರ ಮಧ್ಯಾಹ್ನದಿಂದ ಸೋಮವಾರ ಸಂಜೆಯವರೆಗೆ ಹ್ಯಾರಿಸ್ ತಂಡವು ಈ ದೇಣಿಗೆ ಸಂಗ್ರಹಿಸಿದೆ. ಭಾನುವಾರದಿಂದ ಜನರು ದೇಣಿಗೆ ನೀಡಿದ್ದಾರೆ. ಇವರಲ್ಲಿ ಶೇ 62ರಷ್ಟು ಜನರು ಮೊದಲ ಬಾರಿಗೆ ದೇಣಿಗೆ ನೀಡಿದ ದಾನಿಗಳಾಗಿದ್ದಾರೆ. ಡೆಮಾಕ್ರಟಿಕ್ ನ್ಯಾಷನಲ್ ಕಮಿಟಿ ಮತ್ತು ಜಂಟಿ ನಿಧಿಸಂಗ್ರಹಣೆ ಸಮಿತಿಗಳ ಮೂಲಕ ಸಂಗ್ರಹಿಸಿದ ಹಣವು ದೇಶದಾದ್ಯಂತ ನಡೆಯುತ್ತಿರುವ ಅಭಿಯಾನದ ಭರಾಟೆಯನ್ನು ಪ್ರತಿಬಿಂಬಿಸುತ್ತದೆ’ ಎಂದು ಹ್ಯಾರಿಸ್ ಪರ ಪ್ರಚಾರ ನಡೆಸುತ್ತಿರುವ ತಂಡವು ಹೇಳಿದೆ.

‘ಹ್ಯಾರಿಸ್ ತಂಡವು ದೇಣಿಗೆ ಸಂಗ್ರಹ ಅಭಿಯಾನದ ಮೊದಲ 24 ತಾಸುಗಳಲ್ಲಿ ದಾಖಲೆಯ ₹678 ಕೋಟಿಯನ್ನು ಸಂಗ್ರಹಿಸಿದೆ. ತಳಮಟ್ಟದ 8.88 ಲಕ್ಷ ದಾನಿಗಳು ದೇಣಿಗೆ ನೀಡುವ ಮೂಲಕ ಇತಿಹಾಸದಲ್ಲಿ ಯಾವುದೇ ಅಭ್ಯರ್ಥಿಗಿಂತಲೂ ಕಮಲಾ ಹ್ಯಾರಿಸ್ ಅವರಿಗೆ ಹೆಚ್ಚಿನ ಬೆಂಬಲ ವ್ಯಕ್ತವಾಗಿರುವುದು ದಾಖಲಾಗಿದೆ’ ಎಂದು ಹೇಳಿದೆ.

‘ಕಮಲಾ ಹ್ಯಾರಿಸ್ ಅವರ ಬೆನ್ನಿಗೆ ಈಗ ದೊಡ್ಡ ಜನಬೆಂಬಲದ ಶಕ್ತಿ ಇದೆ. ಅಪರಾಧಿ ಡೊನಾಲ್ಡ್ ಟ್ರಂಪ್ ಅವರ ವಿಭಜಕ, ಜನಪ್ರಿಯವಲ್ಲದ ಕಾರ್ಯಸೂಚಿಯು ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರ ಆಡಳಿತದ ದಾಖಲೆ ಮತ್ತು ಅವರ ದೂರದೃಷ್ಟಿಯ ಎದುರು ನಿಲ್ಲುವುದಿಲ್ಲವೆಂಬುದು ದೇಶದ ಜನತೆಗೆ ಗೊತ್ತಾಗಿದೆ. ಅಲ್ಲದೆ, 30,000ಕ್ಕೂ ಹೆಚ್ಚು ಸ್ವಯಂಸೇವಕರು ಹ್ಯಾರಿಸ್ ಪರ ಪ್ರಚಾರಕ್ಕೆ ಸಹಿ ಕೂಡ ಹಾಕಿದ್ದಾರೆ’ ಎಂದು ಅಭಿಯಾನದ ತಂಡವು ಹೇಳಿದೆ.

ರೈತರು, ಸರ್ಕಾರದ ಮಧ್ಯೆ ವಿಶ್ವಾಸದ ಕೊರತೆ: ಕೋರ್ಟ್ ಅಭಿಮತ • ಮಾತುಕತೆಗೆ ಸ್ವತಂತ್ರ ಸಮಿತಿ ರಚನೆಗೆ ಸೂಚನೆ

ಶಂಭು ಗಡಿ: ಯಥಾಸ್ಥಿತಿಗೆ 'ಸುಪ್ರೀಂ' ನಿರ್ದೇಶನ

ಪ್ರಜಾವಾಣಿ ವಾರ್ತೆ/ಪಿಟಿಐ



ನವದೆಹಲಿ (ಪಿಟಿಐ): ಪ್ರತಿಭಟನಾನಿರತ ರೈತರು ಮತ್ತು ಸರ್ಕಾರದ ನಡುವೆ ವಿಶ್ವಾಸದ ಕೊರತೆ ಇದೆ ಎಂಬುದನ್ನು ಗಮನಿಸಿದ ಸುಪ್ರೀಂ ಕೋರ್ಟ್, ಶಂಭು ಗಡಿಯಲ್ಲಿ ಪ್ರತಿಭಟಿಸುತ್ತಿರುವ ರೈತರ ಬೇಡಿಕೆಗಳಿಗೆ ಪರಿಹಾರ ಸೂಚಿಸಲು ಸಮಾಜದಲ್ಲಿ ಉನ್ನತ ಸ್ಥಾನ ಹೊಂದಿರುವವರನ್ನು ಒಳಗೊಂಡ ಸ್ವತಂತ್ರ ಸಮಿತಿಯನ್ನು ರಚಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಈ ಸಮಿತಿಗೆ ಸೂಕ್ತರ ಹೆಸರುಗಳನ್ನು ಸೂಚಿಸುವಂತೆ ಪಂಜಾಬ್ ಮತ್ತು ಹರಿಯಾಣ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ. ಹೆದ್ದಾರಿಯಲ್ಲಿನ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸುವ ಕುರಿತು ಪ್ರಸ್ತಾವ ಸಲ್ಲಿಸುವಂತೆಯೂ ಅದು ಸೂಚಿಸಿದೆ.

ಯಥಾಸ್ಥಿತಿ ಕಾಯ್ದುಕೊಳ್ಳಿ: 'ಈ ಸಂಬಂಧ ವಾರದೊಳಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅಲ್ಲಿಯವರೆಗೂ ಶಂಭು ಗಡಿಯಲ್ಲಿ ಎರಡೂ ಕಡೆಯವರು ಯಥಾಸ್ಥಿತಿ ಕಾಯ್ದುಕೊಳ್ಳಬೇಕು' ಎಂದು ಅದು ನಿರ್ದೇಶಿಸಿದೆ.

ನ್ಯಾಯಮೂರ್ತಿ ಸೂರ್ಯಕಾಂತ, ದೀಪಂಕರ್ ದತ್ತಾ, ಉಜ್ಜಲ್ ಭುಯಾನ್ ಅವರನ್ನೊಳಗೊಂಡ ಪೀಠವು, ರೈತರು ಮತ್ತು ಸರ್ಕಾರದ ನಡುವೆ ವಿಶ್ವಾಸ ಮೂಡಿಸಬಲ್ಲಂತಹ 'ತಟಸ್ಥ ತೀರ್ಪುಗಾರರ' ಅಗತ್ಯವಿದೆ ಎಂದು ಬುಧವಾರ ಒತ್ತಿ ಹೇಳಿದೆ.

'ರೈತರನ್ನು ತಲುಪಲು ನೀವು ಇನ್ನಷ್ಟು ಪ್ರಯತ್ನಗಳನ್ನು ಮಾಡಬೇಕಿದೆ. ಇಲ್ಲದಿದ್ದರೆ ಅವರೇಕೆ ದೆಹಲಿಗೆ ಬರಲು ಬಯಸುತ್ತಾರೆ? ನೀವು ಅವರನ್ನು ಭೇಟಿ ಮಾಡಲು ಇಲ್ಲಿಂದ ಸಚಿವರನ್ನು ಕಳುಹಿಸಿದ್ದೀರಲ್ಲವೇ. ಒಳ್ಳೆಯ ಉದ್ದೇಶದ ನಡುವೆಯೂ ನಿಮ್ಮ ನಡುವೆ ವಿಶ್ವಾಸದ ಕೊರತೆ ಇದೆ' ಎಂದು ಪೀಠ ತಿಳಿಸಿದೆ.

'ರೈತರ ಕೆಲ ಬೇಡಿಕೆಗಳು ನೈಜವಾಗಿದ್ದು, ಕೆಲವನ್ನು ಈಡೇರಿಸುವುದು ಕಷ್ಟವಾಗಿರಬಹುದು. ಆದರೆ ಅದಕ್ಕಾಗಿ ವರ್ಷಗಟ್ಟಲೆ ಹೆದ್ದಾರಿಯನ್ನು ಮುಚ್ಚುವುದು ಸರಿಯಲ್ಲ' ಎಂದು ಪೀಠ ಹೇಳಿದೆ.

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರೈತರು ಹಮ್ಮಿಕೊಂಡಿದ್ದ 'ದೆಹಲಿ ಚಲೋ' ಅನ್ನು ಫೆಬ್ರುವರಿ 13ರಂದು ಹರಿಯಾಣದ ಅಂಬಾಲಾ ಬಳಿಯ ಶಂಭು ಗಡಿಯಲ್ಲಿ ತಡೆಯಲಾಗಿದೆ. ಹೆದ್ದಾರಿ ತಡೆಯನ್ನು ವಾರದೊಳಗೆ ತೆರವುಗೊಳಿಸಬೇಕು ಎಂದು ಹೈಕೋರ್ಟ್ ನೀಡಿದ್ದ ತೀರ್ಪನ್ನು ಹರಿಯಾಣ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದೆ.

'ಎಂಎಸ್‌ಪಿ: ಸರ್ಕಾರದ ಮೇಲೆ ಒತ್ತಡ ಹೇರುವೆವು'

ನವದೆಹಲಿ (ಪಿಟಿಐ): ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿ ಮತ್ತು ಅದಕ್ಕೆ ಕಾನೂನು ಖಾತರಿ ಒದಗಿಸುವ ಕುರಿತು ಕೇಂದ್ರ ಸರ್ಕಾರದ ಮೇಲೆ 'ಇಂಡಿಯಾ' ಮೈತ್ರಿಕೂಟದ ಸದಸ್ಯರು ಒತ್ತಡ ಹೇರಲಿದ್ದಾರೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ತಮ್ಮನ್ನು ಭೇಟಿ ಮಾಡಿದ ರೈತ ಮುಖಂಡರಿಗೆ ಭರವಸೆ ನೀಡಿದರು.

ವಿರೋಧ ಪಕ್ಷದ ನಾಯಕರ ಕಚೇರಿಯಲ್ಲಿ ರೈತರೊಂದಿಗೆ ಬುಧವಾರ ಸಭೆ ನಡೆಯಿತು. ರಾಹುಲ್ ಅವರ ಆಹ್ವಾನದ ಮೇರೆಗೆ ಸಂಯುಕ್ತ ಕಿಸಾನ್ ಮೋರ್ಚಾದ (ರಾಜಕೀಯೇತರ) ನಿಯೋಗ ಭೇಟಿ ನೀಡಿತ್ತು. ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಕರ್ನಾಟಕದ ಒಟ್ಟು 12 ರೈತ ಮುಖಂಡರು ನಿಯೋಗದಲ್ಲಿದ್ದರು.

ವಿವಿಧ ರಾಜ್ಯಗಳಲ್ಲಿ ತಾವು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ರೈತರು ಈ ವೇಳೆ ಸಭೆಯಲ್ಲಿ ಚರ್ಚಿಸಿದರು. ಹರಿಯಾಣದಲ್ಲಿ ಅಲ್ಲಿನ ಸರ್ಕಾರವು ಪ್ರತಿಭಟನಾನಿರತ ರೈತರಿಗೆ ನೀಡುತ್ತಿರುವ ಕಿರುಕುಳಗಳ ಕುರಿತು ವಿವರಿಸಿದರು. ಅಲ್ಲದೆ ತಮ್ಮ ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವಂತೆ ಮನವಿ ಮಾಡಿದರು.

ಈ ಸಂಬಂಧ 'ಇಂಡಿಯಾ' ಮೈತ್ರಿಕೂಟದ ನಾಯಕರೊಂದಿಗೆ ಚರ್ಚಿಸುತ್ತೇವೆ. ಅಲ್ಲದೆ ಸರ್ಕಾರದ ಮೇಲೆ ಒತ್ತಡ ಹೇರುತ್ತೇವೆ ಎಂದು ರಾಹುಲ್ ಅವರು ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದರು.



ರೈತ ಮುಖಂಡರ ಜತೆ ಸಭೆ ನಡೆಸಿದ ಬಳಿಕ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸುದ್ದಿಗಾರರ ಜತೆ ಮಾತನಾಡಿದರು –ಪಿಟಿಐ ಚಿತ್ರ

ರೈತ ಮುಖಂಡ ಜಗಜೀತ್ ಸಿಂಗ್ ದಲ್ಲೇವಾಲ್ ಅವರು, 'ಎಂಎಸ್‌ಪಿ ಕಾನೂನು ಕುರಿತು ಈ ಹಿಂದೆ 'ಇಂಡಿಯಾ' ಮೈತ್ರಿಕೂಟ ಭರವಸೆ ನೀಡಿತ್ತು. ಈಗ ಅದನ್ನು ಜಾರಿಗೊಳಿಸುವಂತೆ ಮಾಡುವ ಹೊಣೆ ಅವರದ್ದಾಗಿದೆ' ಎಂದು ಹೇಳಿದರು.

'ರೈತರ ಮೇಲೆ ಗುಂಡು ಹಾರಿಸಿದ ಅಧಿಕಾರಿಯನ್ನು ಹರಿಯಾಣ ಸರ್ಕಾರ ಗೌರವಿಸಿ, ಸನ್ಮಾನಿಸುತ್ತಿರುವುದು ಬೇಸರದ ಸಂಗತಿಯಾಗಿದೆ. ಈ ಕುರಿತು ರಾಹುಲ್ ಅವರ ಗಮನಕ್ಕೆ ತರಲಾಯಿತು' ಎಂದು ರೈತ ಮುಖಂಡ ಸರವಣ ಸಿಂಗ್ ಪಂಧೇರ ತಿಳಿಸಿದರು.

ಲಖ್ವಿಂದರ್ ಸಿಂಗ್, ಕುರುಬೂರು ಶಾಂತ ಕುಮಾರ್, ಅಭಿಮನ್ಯು, ನಲ್ಲನಾಳ ವೆಂಕಟೇಶ್ವರ ರಾವ್, ಪಾಂಡಿಯನ್ ರಾಮಲಿಂಗಂ, ತೇಜ್ವೀರ್ ಸಿಂಗ್, ಸುರ್ಜಿತ್ ಸಿಂಗ್, ರಮಣದೀಪ್ ಸಿಂಗ್ ಮಾನ್, ಅಮರ್ಜಿತ್ ಸಿಂಗ್ ಪಾಲ್ಗೊಂಡಿದ್ದರು.

'ಮಲ ಹೊರುವ ಪದ್ಧತಿ ವರದಿಯಾಗಿಲ್ಲ'



ರಾಮದಾಸ್ ಅಠಾವಳೆ

ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ ಐದು ವರ್ಷಗಳಿಂದ ಮಲ ಹೊರುವ ಪದ್ಧತಿ ಅನುಸರಿಸಿರುವ ಬಗ್ಗೆ ವರದಿಯಾಗಿಲ್ಲ ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಮಂಗಳವಾರ ತಿಳಿಸಿದೆ.

ಈ ಸಂಬಂಧ ಕೇಳಲಾದ ಪ್ರಶ್ನೆಗೆ ರಾಜ್ಯಸಭೆಯಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ರಾಮದಾಸ್ ಅಠವಾಳೆ ಅವರು ಲಿಖಿತ ಉತ್ತರ ನೀಡಿದ್ದಾರೆ.

'ತಮ್ಮ ಜಿಲ್ಲೆಗಳು ಮಲ ಹೊರುವ ಪದ್ಧತಿಯಿಂದ ಮುಕ್ತವಾಗಿದೆಯೇ ಅಥವಾ ನೈರ್ಮಲ್ಯ ರಹಿತ ಶೌಚಾಲಯಗಳನ್ನು ಮಲ ಹೊರುವವರು ಸ್ವಚ್ಛಗೊಳಿಸುತ್ತಿದ್ದಾರೆಯೇ ಎಂಬುದರ ದತ್ತಾಂಶಗಳನ್ನು 'ಸ್ವಚ್ಛ ಅಭಿಯಾನ'ದ ಮೊಬೈಲ್ ಆ್ಯಪ್‌ನಲ್ಲಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಆದರೆ, ನಂಬಲಾರ್ಹವಾದ ದತ್ತಾಂಶಗಳು ಈವರೆಗೆ ಸಲ್ಲಿಕೆಯಾಗಿಲ್ಲ' ಎಂದು ಲಿಖಿತ ಉತ್ತರ ನೀಡಿದ್ದಾರೆ.

'114 ಜಿಲ್ಲೆಗಳಿಂದ 6,256 ಪ್ರಕರಣಗಳನ್ನು ಮೊಬೈಲ್ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಈ ಎಲ್ಲ ಪ್ರಕರಣಗಳನ್ನು ಪರಿಶೀಲಿಸಲಾಗಿದ್ದು, ಒಂದೇ ಒಂದು ಪ್ರಕರಣವು ಸತ್ಯ ಎಂಬುದಾಗಿ ದೃಢಪಟ್ಟಿಲ್ಲ' ಎಂದು ತಿಳಿಸಿದ್ದಾರೆ.

'ಉಗ್ರರಿಗೆ ಜೈಲು ಇಲ್ಲವೇ ನರಕ'



ನಿತ್ಯಾನಂದ ರಾಯ್

ನವದೆಹಲಿ(ಪಿಟಿಐ): 'ಜಮ್ಮು–ಕಾಶ್ಮೀರದಲ್ಲಿನ ಉಗ್ರರ ಉಪಟಳವನ್ನು ಮಟ್ಟ ಹಾಕಲಾಗುವುದು. ಉಗ್ರರನ್ನು ಜೈಲಿಗೆ ಅಟ್ಟಲಾಗುವುದು ಇಲ್ಲವೇ ನರಕಕ್ಕೆ ಕಳುಹಿಸಲಾಗುವುದು' ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ರಾಜ್ಯಸಭೆಯಲ್ಲಿ ಬುಧವಾರ ಹೇಳಿದರು.

ಕಾಂಗ್ರೆಸ್ ಸಂಸದ ಪ್ರಮೋದ್ ತಿವಾರಿ ಅವರ ಪೂರಕ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಭಯೋತ್ಪಾದನೆಗೆ ಸಂಬಂಧಿಸಿ ಶೂನ್ಯ ಸಹಿಷ್ಣುತೆ ನೀತಿ ಹೊಂದಿದೆ' ಎಂದರು.

'ಇತ್ತೀಚೆಗೆ ಜಮ್ಮು–ಕಾಶ್ಮೀರದಲ್ಲಿ ಭಯೋತ್ಪಾದಕರು ಮತ್ತೆ ಸಕ್ರಿಯರಾಗಿದ್ದಾರೆ. ಆದರೆ, ಅವರ ಉದ್ದೇಶ ಈಡೇರುವುದಿಲ್ಲ' ಎಂದು ರಾಯ್ ಹೇಳಿದರು.

ಸಂವಿಧಾನದ 370ನೇ ವಿಧಿ ಅಡಿ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಕೇಂದ್ರ ಸರ್ಕಾರ 2019ರಲ್ಲಿ ಹಿಂತೆಗೆದುಕೊಂಡ ನಂತರ ಭದ್ರತಾ ಪಡೆಗಳು 900ರಷ್ಟು ಉಗ್ರರನ್ನು ಹೊಡೆದುರುಳಿಸಿವೆ ಎಂದರು.

'2004ರಿಂದ 2014ರ ವರೆಗಿನ ಯುಪಿಎ ಆಡಳಿತ ಇದ್ದಾಗ 7,217 ಉಗ್ರರ ದಾಳಿ ಘಟನೆಗಳು ಸಂಭವಿಸಿದ್ದವು. 2014ರಿಂದ ಈ ವರ್ಷದ ಜುಲೈ 21ರವರೆಗಿನ ಬಿಜೆಪಿ ಆಡಳಿತದ ವೇಳೆ ಇಂತಹ ಘಟನೆಗಳ ಸಂಖ್ಯೆ 2,259ಕ್ಕೆ ಇಳಿಕೆಯಾಗಿದೆ' ಎಂದರು.

'ಕುರ್ಚಿ ಬಚಾವೊ' ಕಸರತ್ತು ಎಂಬಂತೆ ಬಿಂಬಿಸಿ'

ಬಜೆಟ್: ಪಕ್ಷದ ಸಂಸದರಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೇಂದ್ರ ಸರ್ಕಾರ ಮಂಡಿಸಿರುವ ಬಜೆಟ್, ತನ್ನ ಕುರ್ಚಿ ಉಳಿಸಿಕೊಳ್ಳಲು ಮಾಡಿದ ಕಸರತ್ತು' ಎಂಬುದಾಗಿ ಬಿಂಬಿಸುವಂತೆ ಪಕ್ಷದ ಲೋಕಸಭಾ ಸಂಸದರಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಸೂಚಿಸಿದ್ದಾರೆ.

'ಕಾಂಗ್ರೆಸ್ ಪ್ರಾದೇಶಿಕ ಪಕ್ಷವಾಗಿರದೇ, ಒಂದು ರಾಷ್ಟ್ರೀಯ ಪಕ್ಷವಾಗಿದೆ. ಪಕ್ಷದ ಸಂಸದರ ಭಾಷಣಗಳು ಸಮಾನವಾಗಿರಬೇಕು' ಎಂದೂ ಎಚ್ಚರಿಸಿದ್ದಾರೆ.

ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಲು ಪಕ್ಷವು 20 ಸಂಸದರನ್ನು ಆಯ್ಕೆ ಮಾಡಿದೆ. ಅಧಿವೇಶನ ವೇಳೆ, ಮುಂದಿನ ಕೆಲ ದಿನಗಳು ಬಜೆಟ್ ಮೇಲೆ ನಡೆಯುವ ಚರ್ಚೆಯಲ್ಲಿ ಪ್ರಸ್ತಾಪಿಸಬೇಕಾದ ಅಂಶಗಳ ಕುರಿತು ಚರ್ಚಿಸಲು ನಡೆಸಿದ ಸಭೆಯಲ್ಲಿ ರಾಹುಲ್ ಗಾಂಧಿ, ಸಂಸದರಿಗೆ ಈ ಸೂಚನೆ ನೀಡಿದ್ದಾರೆ.

ಬಜೆಟ್ ಮೇಲಿನ ಚರ್ಚೆಗೆ ಸದನ ನಾಯಕರು ಮಾಡಿಕೊಂಡಿರುವ ಸಿದ್ಧತೆ ಕುರಿತು ಮಾಹಿತಿ ಪಡೆದ ರಾಹುಲ್ ಗಾಂಧಿ, ಅಗತ್ಯ ಕಂಡುಬಂದಲ್ಲಿ ತಮ್ಮ ಕಾರ್ಯತಂತ್ರ ಮಾರ್ಪಡಿಸುವಂತೆಯೂ ಸಂಸದರಿಗೆ ಸೂಚಿಸಿದರು ಎಂದು ಮೂಲಗಳು ಹೇಳಿವೆ.

ಇದೇ ಮೊದಲ ಬಾರಿಗೆ, ಕಾಂಗ್ರೆಸ್‌ನ ಸಂಸದೀಯ ಇತಿಹಾಸದಲ್ಲಿ ಇಂತಹ ಕಾರ್ಯತಂತ್ರದ ಮೊರೆ ಹೋಗಲಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಆಂಧ್ರಪ್ರದೇಶ, ಬಿಹಾರ ಸೇರಿ ಕೆಲ ರಾಜ್ಯಗಳಲ್ಲಿನ ವಿವಿಧ ಯೋಜನೆಗಳಿಗೆ ಬಜೆಟ್‌ನಲ್ಲಿ ಮಾಡಲಾಗಿರುವ ಹಂಚಿಕೆ ಕುರಿತು ಅಧಿವೇಶನದಲ್ಲಿ ಪ್ರಸ್ತಾಪಿಸುವುದಾಗಿ ಕೆಲ ಸಂಸದರು ರಾಹುಲ್ ಗಾಂಧಿ ಅವರಿಗೆ ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಂದರ್ಭದಲ್ಲಿ, 'ನಮ್ಮದು ರಾಷ್ಟ್ರೀಯ ಪಕ್ಷ. ಹೀಗಾಗಿ ಒಂದು ರಾಜ್ಯವನ್ನು ಮತ್ತೊಂದು ರಾಜ್ಯದ ವಿರುದ್ಧ ಎತ್ತಿ ಕಟ್ಟಬಾರದು ಎಂಬುದಾಗಿ ರಾಹುಲ್ ಗಾಂಧಿ ತಾಕೀತು ಮಾಡಿದರು' ಎಂದು ಮೂಲಗಳು ತಿಳಿಸಿವೆ.

'ಆ ರಾಜ್ಯಕ್ಕೆ ಇಷ್ಟು ಹಂಚಿಕೆ ಮಾಡಲಾಗಿದೆ, ನಮಗೆ ಇಷ್ಟೂ ಸಿಕ್ಕಿಲ್ಲ ಎಂಬುದಾಗಿ ಹೇಳಬೇಡಿ. ನಿಮ್ಮ ರಾಜ್ಯಕ್ಕೆ ಏನು ಸಿಕ್ಕಿಲ್ಲ ಎಂಬುದಕ್ಕಷ್ಟೇ ನಿಮ್ಮ ಮಾತು ಸೀಮಿತವಾಗಿರಲಿ ಎಂಬುದಾಗಿ ಹೇಳಿದರು' ಎಂದೂ ತಿಳಿಸಿವೆ.

ಮುಖ್ಯಾಂಶಗಳು

- ಸಂಸತ್‌ನಲ್ಲಿ ಚರ್ಚೆ: ಕಾರ್ಯತಂತ್ರ ಬದಲಿಸಿದ ಕಾಂಗ್ರೆಸ್
- ಕೆಲವರಿಗೆ ಮಾತ್ರ ಮಣೆ ಎಂಬ ದೂರಿನ ಕಾರಣದಿಂದ ಸಭೆ
- ಚರ್ಚೆಯಲ್ಲಿ ಪಾಲ್ಗೊಳ್ಳಲು ಹೊಸಬರಿಗೂ ಅವಕಾಶ

ಕಾಂಗ್ರೆಸ್ ಸಂಸದರಿಗೆ ಸೂಚನೆಗಳು

- ಸಂಸದರು ತಮ್ಮ ರಾಜ್ಯಗಳ ಸಮಸ್ಯೆಗಳನ್ನು ಪ್ರಸ್ತಾಪಿಸಬೇಕು
- ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 'ದುರ್ಬಲ' ಎಂಬುದಾಗಿ ಬಿಂಬಿಸಬೇಕು
- ನಿರುದ್ಯೋಗ, ಅಗತ್ಯ ವಸ್ತುಗಳ ಬೆಲೆ ಏರಿಕೆ, ಅಗ್ನಿಪಥ ಯೋಜನೆ ಕುರಿತು ಮಾತನಾಡಬೇಕು
- ವಿಪಕ್ಷಗಳ ಆಡಳಿತವಿರುವ ರಾಜ್ಯಗಳಿಗೆ ಮಾಡಿರುವ ತಾರತಮ್ಯ ವಿವರಿಸುವಾಗ ನಿರ್ದಿಷ್ಟ ರಾಜ್ಯವೊಂದಕ್ಕೆ ನೀಡಿರುವ ವಿಶೇಷ ಸವಲತ್ತನ್ನು ಟೀಕಿಸಬಾರದು

ತಮಿಳುನಾಡು ಕಡೆಗಣನೆ: ಸ್ಟಾಲಿನ್ ಟೀಕೆ

ಚೆನ್ನೈ: ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ತಮಿಳುನಾಡನ್ನು ಕಡೆಗಣಿಸಿದೆ ಎಂದು ಆರೋಪಿಸಿರುವ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, 'ಚುನಾವಣೆಯಲ್ಲಿ ಬಿಜೆಪಿಯನ್ನು ತಿರಸ್ಕರಿಸಿದ್ದ ರಾಜ್ಯಗಳ ಮೇಲೆ ಸೇಡುತೀರಿಸಿಕೊಳ್ಳುವ ಧೋರಣೆ ಬೇಡ' ಎಂದು ಆಗ್ರಹಪಡಿಸಿದ್ದಾರೆ.

'ಬಜೆಟ್ ನಿಮ್ಮ ಸರ್ಕಾರವನ್ನು ರಕ್ಷಿಸಬಹುದು, ದೇಶವನ್ನಲ್ಲ' ಎಂದು ಜಾಲತಾಣದಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಅವರು ತರಾಟೆಗೆ ತೆಗೆದುಕೊಂಡಿದ್ದಾರೆ.

ಚುನಾವಣೆ ಮುಗಿದಿರುವ ಕಾರಣ ಎಲ್ಲರೂ ಸರ್ಕಾರದ ಬಗ್ಗೆ ಚಿಂತಿಸಬೇಕು ಎಂದು ಪ್ರಧಾನಿ ಹೇಳಿಕೆ ಉಲ್ಲೇಖಿಸಿರುವ ಅವರು, 'ಸರ್ಕಾರವನ್ನು ಮುನ್ನಡೆಸಿ. ಆದರೆ, ಸೇಡಿನ ಭಾವ ಬೇಡ. ರಾಜಕೀಯ ಆಸಕ್ತಿ ಮತ್ತು ನಿರಾಸಕ್ತಿಗಳಿಗೆ ಅನುಗುಣವಾಗಿ ಸರ್ಕಾರ ನಡೆಸಿದರೆ, ಏಕಾಂಗಿಯಾಗಿ ಉಳಿದುಬಿಡುತ್ತೀರಿ' ಎಂದು ಸಲಹೆ ಮಾಡಿದ್ದಾರೆ.

ಮುಖ್ಯಮಂತ್ರಿಯವರ ಹೇಳಿಕೆಯನ್ನು ನಾಟಕೀಯ ಎಂದು ಬಣ್ಣಿಸಿರುವ ರಾಜ್ಯ ಬಿಜೆಪಿ ಅಧ್ಯಕ್ಷ ಕೆ.ಅಣ್ಣಾಮಲೈ, 'ಬಜೆಟ್‌ನಲ್ಲಿ ಉಲ್ಲೇಖಿಸಿದ ರಾಜ್ಯಗಳಿಗಷ್ಟೇ ಅನುಕೂಲ ದೊರೆತಿದೆ ಎಂಬಂತೆ ಜನರನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ' ಎಂದು ಟೀಕಿಸಿದ್ದಾರೆ.

ನೀತಿ ಆಯೋಗದ ಸಭೆ ತೆಲಂಗಾಣ ಬಹಿಷ್ಕಾರ

ಹೈದರಾಬಾದ್ (ಪಿಟಿಐ): ಇದೇ 27ರಂದು ನಡೆಯಲಿರುವ ನೀತಿ ಆಯೋಗದ ಸಭೆಯನ್ನು ಬಹಿಷ್ಕರಿಸುವುದಾಗಿ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಬುಧವಾರ ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ತೆಲಂಗಾಣಕ್ಕೆ ಅಗತ್ಯ ಅನುದಾನ ನೀಡದೆ, ರಾಜ್ಯದ ಹಕ್ಕುಗಳಿಗೆ ಚ್ಯುತಿ ತಂದಿದೆ. ಹೀಗಾಗಿ, ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸದಿರಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ರೆಡ್ಡಿ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ಇದೇ ವೇಳೆ, ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ತಾರತಮ್ಯ ಮಾಡಲಾಗಿದೆ ಎಂದು ಆರೋಪಿಸಿ ವಿಧಾನಸಭೆಯಲ್ಲಿ ನಿರ್ಣಯ ಮಂಡಿಸಲಾಗಿದೆ. ಪ್ರತಿಪಕ್ಷ ಬಿಜೆಪಿ ನಿರ್ಣಯವನ್ನು ವಿರೋಧಿಸಿತು.

ಸಂಸತ್: ವಿಪಕ್ಷಗಳ ಪ್ರತಿಭಟನೆ

ಒಂದನೇ ಪುಟದಿಂದ...

ಸಂಸದರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ಅಖಿಲೇಶ್ ಯಾದವ್ ಸೇರಿದಂತೆ ಕಾಂಗ್ರೆಸ್, ಟಿಎಂಸಿ, ಸಮಾಜವಾದಿ ಪಕ್ಷ, ಡಿಎಂಕೆ, ಎಡಪಕ್ಷಗಳ ಸಂಸದರು ಸಂಸತ್‌ನ ಹೊರಗೆ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಕಾರರು, ಕನ್ನಡ, ಹಿಂದಿ, ಮರಾಠಿ, ಬಂಗಾಳಿ, ಇಂಗ್ಲಿಷ್ ಹಾಗೂ ಮಲಯಾಳಿ ಭಾಷೆಗಳಲ್ಲಿ ಬರೆದಿದ್ದ ಭಿತ್ತಿಫಲಕಗಳನ್ನು ಪ್ರದರ್ಶಿಸಿದರು.

ಕಲಾಪ–ಸಭಾತ್ಯಾಗ: ಕಲಾಪ ಆರಂಭಗೊಳ್ಳುತ್ತಿದ್ದಂತೆಯೇ, ಬಜೆಟ್‌ನಲ್ಲಿ ಆಗಿರುವ ತಾರತಮ್ಯ ಕುರಿತು ಮಾತನಾಡಲು ಅವಕಾಶ ನೀಡುವಂತೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ 'ಇಂಡಿಯಾ' ಒಕ್ಕೂಟದ ಸದಸ್ಯರು ಪಟ್ಟು ಹಿಡಿದರು.

ಲೋಕಸಭೆಯಲ್ಲಿ, ಸಂಸದೀಯ ಸಂಪ್ರದಾಯಗಳನ್ನು ಪಾಲನೆ ಮಾಡುವಂತೆ ಸೂಚಿಸಿದ ಸ್ಪೀಕರ್ ಓಂ ಬಿರ್ಲಾ ಅವರು, ಪ್ರಶ್ನೋತ್ತರ ಸಮಯಕ್ಕೆ ಅಡ್ಡಿ ಮಾಡದಂತೆ ಎಚ್ಚರಿಸಿದರು.



ವಿರೋಧ ಪಕ್ಷಗಳ ಆಡಳಿತದ ರಾಜ್ಯಗಳಿಗೆ ಕೇಂದ್ರ ಬಜೆಟ್‌ನಲ್ಲಿ ತಾರತಮ್ಯ ಮಾಡಲಾಗಿದೆ ಎಂದು ಆರೋಪಿಸಿ 'ಇಂಡಿಯಾ' ಒಕ್ಕೂಟದ ಸಂಸದರು ಸಂಸತ್ ಆವರಣದಲ್ಲಿ ಬುಧವಾರ ಪ್ರತಿಭಟಿಸಿದರು –ಪಿಟಿಐ ಚಿತ್ರ

'ಪ್ರವೇಶ ದ್ವಾರದಲ್ಲಿನ ಪ್ರತಿಭಟನೆಯಿಂದ ತಮಗೆ ತೊಂದರೆಯಾಯಿತು ಎಂದು ಸಂಸದರು ದೂರು ನೀಡಿದ್ದಾರೆ' ಎಂದ ಸ್ಪೀಕರ್ ಓಂ ಬಿರ್ಲಾ, ವಿಪಕ್ಷಗಳು ಪ್ರಸ್ತಾಪಿಸಿದ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ನೀಡುವುದಿಲ್ಲ ಎಂದರು.

ಇದನ್ನು ಪ್ರತಿಭಟಿಸಿ 'ಇಂಡಿಯಾ' ಸಂಸದರು ಸಭಾತ್ಯಾಗ ಮಾಡಿದರು.

> **ಕೇಂದ್ರ ಸರ್ಕಾರ ಹಣದುಬ್ಬರವನ್ನು ಬಹಳ ಲಘುವಾಗಿ ತೆಗೆದುಕೊಳ್ಳುತ್ತಿದೆ. ದೇಶದ ಪ್ರತಿಯೊಂದು ಕುಟುಂಬವೂ ಬೆಲೆ ಏರಿಕೆಯಿಂದ ತತ್ತರಿಸಿದೆ**
> **ಪಿ.ಚಿದಂಬರಂ**, ಕಾಂಗ್ರೆಸ್ ಸಂಸದ

> **ಪ್ರಧಾನಿ ಮೋದಿ ದುರ್ಬಲವಾದ ಮೈತ್ರಿ ಸರ್ಕಾರವನ್ನು ಮುನ್ನಡೆಸುತ್ತಿದ್ದಾರೆ. ಈ ಬಜೆಟ್ ಜನವಿರೋಧಿಯಾಗಿದ್ದು, ಮಿತ್ರಪಕ್ಷಗಳನ್ನು ಓಲೈಸುವ ಉದ್ದೇಶ ಹೊಂದಿದೆ**
> **ಅಭಿಷೇಕ್ ಬ್ಯಾನರ್ಜಿ**, ಟಿಎಂಸಿ ಲೋಕಸಭಾ ಸದಸ್ಯ

ನಿರ್ಮಲಾ ತಿರುಗೇಟು

ಒಂದನೇ ಪುಟದಿಂದ...

'ಒಂದು ರಾಜ್ಯದ ಹೆಸರು ಬಜೆಟ್ ಭಾಷಣದಲ್ಲಿ ಪ್ರಸ್ತಾಪಗೊಂಡಿಲ್ಲ ಎಂದ ಮಾತ್ರಕ್ಕೆ ಆ ರಾಜ್ಯಕ್ಕೆ ಸಂಬಂಧಿಸಿ ಕೇಂದ್ರ ಯಾವುದೇ ಯೋಜನೆ ರೂಪಿಸಿಲ್ಲ ಎಂದರ್ಥವಲ್ಲ' ಎಂದರು.

'ಈ ಹಿಂದಿನ ಎರಡು ಬಜೆಟ್ ಭಾಷಣಗಳಲ್ಲಿ ಮಹಾರಾಷ್ಟ್ರ ಹೆಸರನ್ನು ಪ್ರಸ್ತಾಪ ಮಾಡಿರಲಿಲ್ಲ. ಆದರೆ, ರಾಜ್ಯದ ದಹಾನುವಿನಲ್ಲಿ ₹76 ಸಾವಿರ ಕೋಟಿ ವೆಚ್ಚದಲ್ಲಿ ವಧವಾನ್ ಬಂದರು ಅಭಿವೃದ್ಧಿಗೆ ಕೇಂದ್ರ ಸರ್ಕಾರ ಕಳೆದ ತಿಂಗಳು ಅನುಮೋದನೆ ನೀಡಿದೆ' ಎಂದರು.

ರಾಜ್ಯಸಭೆಯಲ್ಲಿ ನಿಯಮ 267ರಡಿ, ಈ ವಿಷಯ ಕುರಿತು ಚರ್ಚೆಗೆ ಅವಕಾಶ ನೀಡಬೇಕು ಎಂಬ ವಿಪಕ್ಷಗಳ ಮನವಿಯನ್ನು ಸಭಾಪತಿ ಜಗದೀಪ್ ಧನಕರ್ ತಿರಸ್ಕರಿಸಿದರು.

ಆಗ, ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ,'ಪ್ರಸಕ್ತ ಸಾಲಿನಲ್ಲಿ ಬಜೆಟ್‌ನಲ್ಲಿ ಬಿಹಾರ ಮತ್ತು ಆಂಧ್ರಪ್ರದೇಶಕ್ಕೆ ಮಾತ್ರ ಅನುದಾನ ಹಾಗೂ ಯೋಜನೆಗಳನ್ನು ಹಂಚಿಕೆ ಮಾಡಲಾಗಿದೆ' ಎಂದು ಹೇಳಿದರು.

'ಇತರ ಎಲ್ಲ ರಾಜ್ಯಗಳ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾವವೇ ಇಲ್ಲ' ಎಂದ ಖರ್ಗೆ, 'ಈ ಬಜೆಟ್, ಸರ್ಕಾರ ತನ್ನ ಕುರ್ಚಿ ಉಳಿಸಿಕೊಳ್ಳುವುದಕ್ಕಾಗಿ ಸಿದ್ಧಪಡಿಸಿರುವ ದಸ್ತಾವೇಜು' ಎಂದು ಟೀಕಿಸಿದರು. ಆಗ, ಈ ವಿಷಯ ಕುರಿತು ಉತ್ತರಿಸುವಂತೆ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸಭಾಪತಿ ಧನಕರ್ ಸೂಚಿಸಿದರು. ಕೂಡಲೇ, ಖರ್ಗೆ ನೇತೃತ್ವದಲ್ಲಿ 'ಇಂಡಿಯಾ' ಸಂಸದರು ಸಭಾತ್ಯಾಗ ಮಾಡಿದರು.

ಸಂಕ್ಷಿಪ್ತ ಸುದ್ದಿ

ಎನ್‌ಕೌಂಟರ್: ಉಗ್ರನ ಹತ್ಯೆ, ಯೋಧ ಹುತಾತ್ಮ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿ ಮಂಗಳವಾರ ತಡರಾತ್ರಿ ನಡೆದ ಗುಂಡಿನ ಚಕಮಕಿಯಲ್ಲಿ ಒಬ್ಬ ಯೋಧ ಹುತಾತ್ಮರಾಗಿದ್ದಾರೆ. ಈ ವೇಳೆ ಒಬ್ಬ ಉಗ್ರನನ್ನು ಸೇನೆ ಸದೆಬಡಿದಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಲೋಲಾಬ್ ಎಂಬಲ್ಲಿ ಕೆಲವು ದಿನಗಳಿಂದ ಉಗ್ರರ ಚಟುವಟಿಕೆಗಳು ನಡೆಯುತ್ತಿರಬಹುದು ಎಂಬ ಮಾಹಿತಿ ಮೇರೆಗೆ ಈ ಭಾಗದಲ್ಲಿ ಸೇನೆ ಮತ್ತು ಪೊಲೀಸರು ಜಂಟಿ ಕಾರ್ಯಾಚರಣೆ ಕೈಗೊಂಡಿದ್ದರು. ಉಗ್ರರು ಅಡಗಿರುವ ಸ್ಥಳವನ್ನು ಪತ್ತೆಹಚ್ಚಿದ ಸೇನೆ ಮೇಲೆ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದು, ಸೇನೆಯು ಪ್ರತಿದಾಳಿ ನಡೆಸಿ, ಉಗ್ರನನ್ನು ಹತ್ಯೆ ಮಾಡಿದೆ..

ಗೋವು ಕಳ್ಳಸಾಗಣೆ ಶಂಕಿತನ ಸಾವು

ಜೈಪುರ: ರಾಜಸ್ಥಾನದ ಡೀಗ್ ಜಿಲ್ಲೆಯಲ್ಲಿ ಬುಧವಾರ ಬೆಳಗಿನ ಜಾವ ಗೋವು ಕಳ್ಳಸಾಗಣೆದಾರ ಎನ್ನಲಾದ ವ್ಯಕ್ತಿಯೊಬ್ಬರು, ಇದೇ ಕೃತ್ಯದಲ್ಲಿ ತೊಡಗಿದ್ದ ಶಂಕಿತ ಕಳ್ಳಸಾಗಣೆದಾರರ ಗುಂಪು ನಡೆಸಿದ ಗುಂಡಿನ ದಾಳಿಯಲ್ಲಿ ಮೃತಪಟ್ಟಿದ್ದಾರೆ.

ಖಚಿತ ಮಾಹಿತಿ ಆಧರಿಸಿ ಪೊಲೀಸರು, ಸಂದೀಪ್ ಪ್ರಜಾಪತ್ ಎಂಬಾತ ಚಾಲನೆ ಮಾಡುತ್ತಿದ್ದ ಎರಡು ಗೋವುಗಳಿದ್ದ ಪಿಕ್‌ಅಪ್ ವಾಹನ ಬೆನ್ನಟ್ಟಿದ್ದಾರೆ. ಆದರೆ, ವಾಹನ ನಿಲ್ಲಿಸುವ ಯತ್ನ ಫಲ ನೀಡಿಲ್ಲ. ಇದೇ ವೇಳೆ ಪಿಚಮುರ್ ಬಸ್ ನಿಲ್ದಾಣ ಬಳಿ ವಾಹನಕ್ಕೆ ಗೋವು ಹತ್ತಿಸುತ್ತಿದ್ದ ಗುಂಪೊಂದು ಗುಂಡು ಹಾರಿಸಿದ್ದು, ಸಂದೀಪ್ ಮೃತಪಟ್ಟಿದ್ದಾರೆ.

ಗುಂಡು ಹಾರಿಸಿದ ಗುಂಪು ಪರಾರಿಯಾಗಿದೆ. ಸಂದೀಪ್ ಜೊತೆಗಿದ್ದ ನರೇಶ್ ಕುಮಾರ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾವಿಕನ ದೇಹ ಪತ್ತೆ

ನವದೆಹಲಿ(ಪಿಟಿಐ): ನೌಕಾಪಡೆಯ ಐಎನ್‌ಎಸ್ ಬ್ರಹ್ಮಪುತ್ರ ಯುದ್ಧನೌಕೆಯಲ್ಲಿ ಸಂಭವಿಸಿದ್ದ ಅಗ್ನಿ ಅವಘಡದ ವೇಳೆ ನಾಪತ್ತೆಯಾಗಿದ್ದ ನಾವಿಕ ಸೀತೇಂದ್ರ ಸಿಂಗ್ ಅವರ ಮೃತದೇಹ ಬುಧವಾರ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈನಲ್ಲಿರುವ ನೌಕಾಪಡೆಯ ಡಾಕ್‌ಯಾರ್ಡ್‌ನಲ್ಲಿ ದುರಸ್ತಿಗಾಗಿ ಮಂಗಳವಾರ ನಿಲ್ಲಿಸಿದ್ದ ವೇಳೆ, ಯುದ್ಧನೌಕೆಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು.

ಸೂಚನೆ: ಐಎನ್‌ಎಸ್ ಬ್ರಹ್ಮಪುತ್ರ ಯುದ್ಧನೌಕೆಯನ್ನು ಶೀಘ್ರವೇ ದುರಸ್ತಿಗೊಳಿಸಿ, ಕದನಕ್ಕೆ ಸನ್ನದ್ಧಗೊಳಿಸುವಂತೆ ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ ಅವರು ಸಿಬ್ಬಂದಿಗೆ ಸೂಚನೆ ನೀಡಿದ್ದಾರೆ.

ಗುಜರಾತ್: ಹಲವು ಜಲಾಶಯಗಳು ಭರ್ತಿ • ಹಲವು ಗ್ರಾಮಗಳಿಗೆ ಸಂಪರ್ಕ ಕಡಿತ

ಭಾರಿ ಮಳೆ: ಎಂಟು ಜನರ ಸಾವು

ಪ್ರಜಾವಾಣಿ ವಾರ್ತೆ/ ಪಿಟಿಐ

ಅಹಮದಾಬಾದ್: ಗುಜರಾತ್‌ನ ವಿವಿಧೆಡೆ ಬುಧವಾರ ಧಾರಾಕಾರ ಮಳೆಯಾಗಿದ್ದು, ದೇವಭೂಮಿ ದ್ವಾರಕಾ, ಬನಸ್ಕಾಂತ, ಕಚ್ ಮತ್ತು ರಾಜ್‌ಕೋಟ್ ಜಿಲ್ಲೆಗಳಲ್ಲಿ ಮಳೆಯಿಂದ ಸಂಭವಿಸಿದ ಅವಘಡಗಳಿಂದ ಎಂಟು ಜನರು ಮೃತಪಟ್ಟಿದ್ದಾರೆ.

ರಾಜ್ಯದ ಹಲವು ನದಿಗಳ ಹರಿವು ಮತ್ತು ಜಲಾಶಯಗಳಲ್ಲಿ ನೀರಿನ ಮಟ್ಟ ಭಾರಿ ಪ್ರಮಾಣದಲ್ಲಿ ಏರಿದೆ. ಇದರಿಂದಹಲವು ಗ್ರಾಮಗಳಿಗೆ ಸಂಪರ್ಕ ಕಡಿತಗೊಂಡಿದೆ. ನೂರಾರು ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಮಾಡಲಾಗಿದೆ.

ಗುಜರಾತ್‌ನ ಸೂರತ್, ಭರೂಚ್ ಮತ್ತು ಆನಂದ್ ಜಿಲ್ಲೆಗಳಲ್ಲಿ ಬುಧವಾರ ಬೆಳಿಗ್ಗೆಯಿಂದಲೇ ಭಾರಿ ಮಳೆಯಾಗಿದೆ. ಹೀಗಾಗಿ, ಕೆಲವೆಡೆ ಶಾಲಾ ಮತ್ತು ಕಾಲೇಜುಗಳಿಗೆ ಬುಧವಾರ ರಜೆ ಘೋಷಿಸಲಾಗಿತ್ತು.



ಗುಜರಾತ್‌ನ ಸೂರತ್‌ನಲ್ಲಿ ರಸ್ತೆಗಳು ಜಲಾವೃತಗೊಂಡಿದ್ದವು –ಪಿಟಿಐ ಚಿತ್ರ

ಕೆಲವು ಕಡೆಗಳಲ್ಲಿ ರೈಲು ಸೇವೆಗಳಲ್ಲೂ ವ್ಯತ್ಯಯವಾಗಿದೆ.

ಈ ಬಾರಿಯ ಮಳೆಗಾಲದಲ್ಲಿ ರಾಜ್ಯದಲ್ಲಿ ಇಲ್ಲಿಯವರೆಗೆ ಮೃತಪಟ್ಟವರ ಸಂಖ್ಯೆ 61ಕ್ಕೆ ಏರಿಕೆಯಾಗಿದೆ. ಈ ಮುಂಗಾರು ಹಂಗಾಮಿನಲ್ಲಿ ಬುಧವಾರದ ವೇಳೆಗೆ ರಾಜ್ಯ ಶೇ 51ರಷ್ಟು ಮಳೆಯನ್ನು ಪಡೆದಿದೆ. ಕಚ್ ಜಿಲ್ಲೆ, ಸೌರಾಷ್ಟ್ರ ವಲಯದಲ್ಲಿ ಕ್ರಮವಾಗಿ ಶೇ 75 ಮತ್ತು ಶೇ 73ರಷ್ಟು ಮಳೆ ಸುರಿದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಆನಂದ್ ಜಿಲ್ಲೆಯ ಬೊರ್ಸಾದ್ ತಾಲ್ಲೂಕಿನಲ್ಲಿ ಬೆಳಿಗ್ಗೆ 8 ಗಂಟೆಯಿಂದ ನಾಲ್ಕು ಗಂಟೆಗಳಲ್ಲಿ 314 ಮಿಲಿ ಮೀಟರ್‌ನಷ್ಟು ಮಳೆ ದಾಖಲಾಗಿದೆ.

ಕೊಲ್ಹಾಪುರದಲ್ಲಿ 81 ಬ್ಯಾರೇಜ್‌ಗಳು ಮುಳುಗಡೆ

ಪುಣೆ (ಪಿಟಿಐ): ಕೊಲ್ಹಾಪುರದಲ್ಲಿ ಭಾರಿ ಮಳೆಯ ಕಾರಣ, ಪಂಚಗಂಗಾ ನದಿ ಅಪಾಯದ ಮಟ್ಟ ಮೀರಲು ಕೆಲವು ಇಂಚುಗಳು ಮಾತ್ರ ಬಾಕಿ ಇದೆ.

ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿರುವ ಕಾರಣ 81 ಬ್ಯಾರೇಜ್‌ಗಳು ಮುಳುಗಡೆಯಾಗಿವೆ. ಕೃಷ್ಣ ನದಿ ತೀರದ ಪ್ರದೇಶಗಳಲ್ಲಿ ಅಗತ್ಯವಿರುವಷ್ಟು ಮಳೆಯಾಗಿದ್ದು, ಕರ್ನಾಟಕದ ಆಲಮಟ್ಟಿ ಜಲಾಶಯಕ್ಕೆ ನೀರಿನ ಹರಿಯುವಿಕೆ ಹೆಚ್ಚಳವಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಸೆಮಿಗೆ ಬಾಂಗ್ಲಾದೇಶ, ಸವಾಲಾಗದ ಮಲೇಷ್ಯಾ

ದಂಬುಲಾ (ಪಿಟಿಐ): ಆರಂಭ ಆಟಗಾರ್ತಿ ಮುರ್ಷಿದಾ ಖಾತುನ್ (80, 59ಎ) ಮತ್ತು ನಾಯಕಿ ನಿಗರ್ ಸುಲ್ತಾನಾ (ಔಟಾಗದೇ 62, 37ಎ, 4x5, 6x2) ಅವರ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಬಾಂಗ್ಲಾದೇಶ ತಂಡ ಮಹಿಳೆಯರ ಏಷ್ಯಾ ಕಪ್ ಟಿ20 ಪಂದ್ಯದಲ್ಲಿ ಬುಧವಾರ ಮಲೇಷ್ಯಾ ತಂಡವನ್ನು 114 ರನ್‌ಗಳಿಂದ ನಿರಾಯಾಸವಾಗಿ ಸೋಲಿಸಿ ಸೆಮಿಫೈನಲ್ ತಲುಪಿತು.

ಈ ಏಕಪಕ್ಷೀಯ ಪಂದ್ಯದ ಗೆಲುವಿನಿಂದ ಬಾಂಗ್ಲಾದೇಶ 'ಬಿ' ಗುಂಪಿನಲ್ಲಿ ಎಲ್ಲ ಮೂರು ಪಂದ್ಯಗಳನ್ನು ಆಡಿದ್ದು ನಾಲ್ಕು ಪಾಯಿಂಟ್‌ಗಳೊಡನೆ ಎರಡನೇ ಸ್ಥಾನಗಳಿಸಿತು.

ಟಾಸ್ ಗೆದ್ದು ಪಿಚ್‌ನ ಮೊದಲ ಉಪಯೋಗ ಪಡೆದ ಬಾಂಗ್ಲಾದೇಶ 2 ವಿಕೆಟ್‌ಗೆ 191 ರನ್‌ಗಳ ಭಾರಿ ಮೊತ್ತ ಪೇರಿಸಿತು. ಇದು ಟಿ20ಯಲ್ಲಿ ಬಾಂಗ್ಲಾದೇಶದ ಎರಡನೇ ಅತ್ಯಧಿಕ ಮೊತ್ತ. ಮಲೇಷ್ಯಾ ವನಿತೆಯರು ಪ್ರತಿರೋಧ ತೋರದೇ 8 ವಿಕೆಟ್‌ಗೆ 77 ರನ್‌ಗಳೊಡನೆ ಓವರುಗಳನ್ನು ಮುಗಿಸಿದರು. ಮುರ್ಷಿದಾ ಮೊದಲ ವಿಕೆಟ್‌ಗೆ ದಿಲಾರಾ ಅಖ್ತರ್ (33) ಜೊತೆ 46 ಎಸೆತಗಳಲ್ಲಿ 65 ರನ್ ಸೇರಿಸಿದರು. ಮುರ್ಷಿದಾ ಮತ್ತು ಸುಲ್ತಾನಾ ನಡುವೆ ಎರಡನೇ ವಿಕೆಟ್‌ಗೆ ಕೇವಲ 55 ಎಸೆತಗಳಲ್ಲಿ 91 ರನ್‌ಗಳು ಹರಿದು ಬಂದು ಬಾಂಗ್ಲಾದೇಶಕ್ಕೆ ಮೇಲುಗೈ ಸಾಧಿಸಿತು. ಒಂದು ಸಿಕ್ಸರ್, ಹತ್ತು ಬೌಂಡರಿ ಸಿಡಿಸಿದ ಮುರ್ಷಿದಾ ಪಂದ್ಯದ ಆಟಗಾರ್ತಿ ಗೌರವಕ್ಕೆ ಪಾತ್ರರಾದರು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರುಗಳಲ್ಲಿ 2 ವಿಕೆಟ್‌ಗೆ 191 (ದಿಲಾರಾ ಅಖ್ತರ್ 33, ಮುರ್ಷಿದಾ ಖಾತುನ್ 80, ನಿಗರ್ ಸುಲ್ತಾನಾ ಔಟಾಗದೇ 62); **ಮಲೇಷ್ಯಾ:** 20 ಓವರುಗಳಲ್ಲಿ 8 ವಿಕೆಟ್‌ಗೆ 77 (ಎಲಿಸಾ ಹಂಟರ್ 20; ನಹೀದಾ ಅಖ್ತರ್ 13ಕ್ಕೆ2). **ಫಲಿತಾಂಶ:** ಬಾಂಗ್ಲಾದೇಶಕ್ಕೆ 114 ರನ್‌ಗಳ ಗೆಲುವು

ನಾಲ್ಕರ ಘಟ್ಟ ಪ್ರವೇಶಿಸಿದ ಶ್ರೀಲಂಕಾ, ಥಾಯ್ಲೆಂಡ್‌ಗೆ ಸೋಲು



ಚಾಮರಿ ಅಟಪಟ್ಟು

ದಂಬುಲಾ (ಪಿಟಿಐ): ಚಾಮರಿ ಅಟಪಟ್ಟು ನಾಯಕತ್ವದ ಶ್ರೀಲಂಕಾ ಮಹಿಳೆಯರ ತಂಡವು ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ವಿರುದ್ಧ ಸೆಣಸಲಿದೆ.

ಬುಧವಾರ ಇಲ್ಲಿ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಶ್ರೀಲಂಕಾ 10 ವಿಕೆಟ್‌ಗಳಿಂದ ಥಾಯ್ಲೆಂಡ್ ಎದುರು ಸುಲಭ ಜಯ ಸಾಧಿಸಿ ನಾಲ್ಕರ ಘಟ್ಟಕ್ಕೆ ಪ್ರವೇಶಿಸಿತು.

ಟಾಸ್ ಗೆದ್ದ ಥಾಯ್ಲೆಂಡ್ ತಂಡದ ನಾಯಕಿ ತಿಪಾಚಾ ಪುತಾವಾಂಗ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ನನ್ನಪಾಟ್ ಕೊಂಚಾರೆಂಕಾಯ್ (ಔಟಾಗದೆ 47; 53ಎ, 4X5) ಅವರೊಬ್ಬರನ್ನು ಬಿಟ್ಟರೆ ಉಳಿದವರೆಲ್ಲರೂ ವಿಫಲರಾದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 93 ರನ್‌ಗಳ ಅಲ್ಪಮೊತ್ತ ಗಳಿಸಿತು.

ಗುರಿ ಬೆನ್ನಟ್ಟಿದ ಲಂಕಾ ತಂಡದ ಆರಂಭಿಕ ಜೋಡಿ ವಿಶ್ಮಿ ಗುಣರತ್ನೆ ಮತ್ತು ಚಾಮರಿ ಅಟಪಟ್ಟು ಅವರು ತಂಡವನ್ನು ಸುಲಭವಾಗಿ ಗೆಲುವಿನ ಗಡಿ ದಾಟಿಸಿದರು.

ಸಂಕ್ಷಿಪ್ತ ಸ್ಕೋರು: ಥಾಯ್ಲೆಂಡ್: 20 ಓವರ್‌ಗಳಲ್ಲಿ 7ಕ್ಕೆ 93 (ನನ್ನಪಾಟ ಕೊಂಚಾರೆಂಕಾಯ್ 47, ಕವೀಶಾ ದಿಲಹರಿ 13ಕ್ಕೆ2) **ಶ್ರೀಲಂಕಾ:** 11.3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 94 (ವಿಶ್ಮಿ ಗಣರತ್ನೆ ಔಟಾಗದೆ 39, ಚಾಮರಿ ಅಟಪಟ್ಟು ಔಟಾಗದೆ 49) **ಫಲಿತಾಂಶ:** ಶ್ರೀಲಂಕಾ ತಂಡಕ್ಕೆ 10 ವಿಕೆಟ್‌ಗಳ ಜಯ.



ಸೆಮಿಫೈನಲ್ ಪಂದ್ಯಗಳು

ಭಾರತ Vs ಬಾಂಗ್ಲಾದೇಶ
ಶ್ರೀಲಂಕಾ Vs ಪಾಕಿಸ್ತಾನ
ದಿನಾಂಕ ಜುಲೈ 26
ಲೈವ್: ಸ್ಟಾರ್ ಸ್ಪೋರ್ಟ್ಸ್, ಡಿಸ್ನಿ ಹಾಟ್‌ಸ್ಟಾರ್

ವಾಲಿಬಾಲ್: ಭಾರತಕ್ಕೆ 2ನೇ ಜಯ

ಪ್ರಜಾವಾಣಿ ವಾರ್ತೆ

ಸುರಬಯ (ಇಂಡೊನೇಷ್ಯಾ): ಸಂಘಟಿತ ಆಟವಾಡಿದ ಭಾರತ ತಂಡ, 20 ವರ್ಷದೊಳಗಿನವರ ಏಷ್ಯನ್ ವಾಲಿಬಾಲ್ ಚಾಂಪಿಯನ್‌ಷಿಪ್‌ನ ಎರಡನೇ ಪಂದ್ಯದಲ್ಲಿ ಕುವೈತ್ ತಂಡವನ್ನು ಬುಧವಾರ 3–0 ನೇರ ಸೆಟ್‌ಗಳಿಂದ ಸೋಲಿಸಿತು.

'ಸಿ' ಗುಂಪಿನ ಈ ಪಂದ್ಯದಲ್ಲಿ ಭಾರತ ತಂಡ 25–14, 25–12, 25–18ರಲ್ಲಿ ಜಯ ಗಳಿಸಿತು. ಮಿಡ್ಲ್ ಬ್ಲಾಕರ್ ಆದಿತ್ಯ, ದಾಳಿಯಲ್ಲಿ ಧ್ರುವಿಲ್ ಮತ್ತು ಸೆಟ್ಟರ್ ಆಗಿದ್ದ ನಾಯಕ ಕಬಿಲನ್ ಉತ್ತಮ ಪ್ರದರ್ಶನ ನೀಡಿದರು. ಕುವೈತ್‌ಗೆ ಇದು ಎರಡನೇ ಸೋಲು. ಮೊದಲ ಪಂದ್ಯದಲ್ಲಿ ಅದು ಜಪಾನ್ ತಂಡಕ್ಕೆ ಮಣಿದಿತ್ತು.

ಮಂಗಳವಾರ ನಡೆದ ಮೊದಲ ಪಂದ್ಯದಲ್ಲಿ ಎರಡು ಸೆಟ್ ಹಿನ್ನಡೆಯಿಂದ ಚೇತರಿಸಿಕೊಂಡ ಭಾರತ 3–2 ಸೆಟ್‌ಗಳಿಂದ (21–15, 21–25, 25–23, 25–15, 15–12ರಲ್ಲಿ) ಬಾಂಗ್ಲಾದೇಶ ತಂಡವನ್ನು ಮಣಿಸಿತ್ತು.

ಸ್ಕ್ವಾಷ್: ಭಾರತ ತಂಡಕ್ಕೆ 6ನೇ ಸ್ಥಾನ

ನವದೆಹಲಿ (ಪಿಟಿಐ): ಭಾರತ ಪುರುಷರ ತಂಡ, ಅಮೆರಿಕದ ಹೌಸ್ಟನ್‌ನಲ್ಲಿ ಮಂಗಳವಾರ ನಡೆದ ವಿಶ್ವ ಜೂನಿಯರ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನಲ್ಲಿ ಆರನೇ ಸ್ಥಾನ ಪಡೆದರೆ, ಮಹಿಳೆಯರ ತಂಡ ಏಳನೇ ಸ್ಥಾನ ಗಳಿಸಿತು.

ಮೈಸೂರು ರೇಸ್

ಎಕ್ಸುಬೆರೆನ್ಸ್ ಗೆಲ್ಲುವ ನಿರೀಕ್ಷೆ

ಡಾ. ಎನ್.ಎಂ.ಶ್ರೀನಿವಾಸ್ ಮೆಮೋರಿಯಲ್ ಕಪ್ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಕ್ಸುಬೆರೆನ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಶೆರೌಕ್ 10, ಎನ್.ಆರ್.ಐ ಏಸ್ 8, ಹೈಲ್ಯಾಂಡ್ ಡ್ರೀಮ್ 3
2ನೇ ರೇಸ್: ದಿ ಗೋಲ್ಡನ್ ಕಪ್ 7, ಸ್ಕ್ವಾಂಟೊ 8, ದಿ ಯುನೈಟೆಡ್ 10
3ನೇ ರೇಸ್: ರನ್ನಿಂಗ್ ಬೋಲ್ಟ್ 10, ವರ್ದಾನ್ 9, ಕೋಡ್ ಆಫ್ ಹಾನರ್ 5
4ನೇ ರೇಸ್: ಮನಿ ಮೂನ್ಸ್ 9, ಒನ್ಲಿ ಎ ಸ್ಟಾರ್ 1, ಅರಿಗಾಟೊ 4
5ನೇ ರೇಸ್: ಎಕ್ಸುಬೆರೆನ್ಸ್ 2, ಮಿಸ್ಟಿಕ್ ಡಿವೈನ್ 6, ಲಕ್ಕಿ ಪಾಯಿಂಟ್ 13
6ನೇ ರೇಸ್: ಮನಿ ಎಕ್ಸ್‌ಚೇಂಜ್ 8, ಎಮಿರಾಲ್ಡ್ ಕ್ವೀನ್ 10, ಸಿರಾ 4
7ನೇ ರೇಸ್: ರಿಯಲ್ ಶೋ 4, ಫ್ಲೆಮಿಂಗೊ ಡ್ಯಾನ್ಸರ್ 13, ಕೊಯೊಟೆ ಗರ್ಲ್ 12

ಉತ್ತಮ ಬೆಟ್: ರನ್ನಿಂಗ್ ಬೋಲ್ಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಇಂದಿನಿಂದ ಆರ್ಚರಿ ಟೀಮ್ ಕ್ವಾಲಿಫಿಕೇಷನ್ ಸುತ್ತು: ಭರವಸೆ ಮೂಡಿಸಿರುವ ಬಿಲ್ಗಾರರು

ಮೊದಲ ಪದಕದ ವಿಶ್ವಾಸದಲ್ಲಿ ಭಾರತ

ಪ್ಯಾರಿಸ್ (ಪಿಟಿಐ): ಮತ್ತೊಂದು ಒಲಿಂಪಿಕ್ಸ್ ಬಂದಿದೆ. ಆದರೆ ಭಾರತ ಆರ್ಚರಿ (ಬಿಲ್ಗಾರರ) ತಂಡದ 'ಗುರಿ' ಮಾತ್ರ ಬದಲಾಗಿಲ್ಲ. ಅದು ಭಾರತಕ್ಕೆ ಈ ಪ್ರತಿಷ್ಠಿತ ಕ್ರೀಡಾ ವೇದಿಕೆಯಲ್ಲಿ ಮೊದಲ ಬಾರಿ ಪದಕ ಗೆದ್ದುಕೊಡುವುದು

1988ರಲ್ಲಿ ಭಾರತದ ಆರ್ಚರಿ ಸ್ಪರ್ಧಿಗಳು ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದರು. ಈಗ ಪ್ಯಾರಿಸ್‌ನ ಲೆಝೂವಲೀದ್ ಗಾರ್ಡನ್ಸ್ ನಲ್ಲಿ ಗುರುವಾರ ಆರಂಭವಾಗುವ ಕ್ವಾಲಿಫಿಕೇಷನ್ ಸುತ್ತಿನ ಮೂಲಕ ಭಾರತ ತಂಡ ಇಲ್ಲಿಯವರೆಗೆ ಎಟಕದ ಪದಕ ಗೆಲ್ಲಲು ಒಲಿಂಪಿಕ್ಸ್ ಅಭಿಯಾನ ಆರಂಭಿಸಲಿದೆ.

ಲಂಡನ್ ಒಲಿಂಪಿಕ್ಸ್ (2012) ನಂತರ ಭಾರತ ಆರು ಸದಸ್ಯರ ಪೂರ್ಣ ಪ್ರಮಾಣದ ತಂಡ ಕಣಕ್ಕಿಳಿಯುತ್ತಿದೆ. ವಿಶ್ವ ರ‍್ಯಾಂಕಿಂಗ್ ಆಧಾರದಲ್ಲಿ ಪುರುಷರ ಮತ್ತು ಮಹಿಳಾ ತಂಡಗಳು ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿವೆ. ಭಾರತ ಐದು ಸ್ಪರ್ಧೆಗಳಲ್ಲಿ (ರಿಕರ್ವ್ ವೈಯಕ್ತಿಕ, ಪುರುಷರ ಮತ್ತು ಮಹಿಳಾ ತಂಡ ವಿಭಾಗ ಮತ್ತು ಮಿಶ್ರ ವಿಭಾಗದ) ಕಣಕ್ಕಿಳಿಯದೆ.

ಅನುಭವಿಗಳಾದ ತರುಣದೀಪ್ ರಾಯ್ ಮತ್ತು ದೀಪಿಕಾ ಕುಮಾರಿ ಅವರಿಬ್ಬರಿಗೂ ಇದು ನಾಲ್ಕನೇ ಒಲಿಂಪಿಕ್ಸ್. ಇವರು ಯುವ ತಂಡವನ್ನು ಮುನ್ನಡೆಸುತ್ತಿದ್ದಾರೆ. ಮೊದಲು 10ರೊಳಗೆ ಸ್ಥಾನ ಪಡೆದು ಅನುಕೂಲಕರ 'ಡ್ರಾ' ಪಡೆಯುವ ವಿಶ್ವಾಸವನ್ನು ತಂಡ ಹೊಂದಿದೆ.

ಕ್ವಾಲಿಫಿಕೇಷನ್ ಸುತ್ತಿನಲ್ಲಿ 53 ರಾಷ್ಟ್ರಗಳ 128 ಮಂದಿ ಭಾಗವಹಿಸಲಿದ್ದಾರೆ. ತಲಾ 72 ಬಾಣಗಳನ್ನು ಪ್ರಯೋಗಿಸಲಿದ್ದಾರೆ. ಇಲ್ಲಿ ಪಡೆಯುವ ಸ್ಕೋರ್ ಆಧಾರದಲ್ಲಿ ನಾಕೌಟ್ ಹಂತಕ್ಕೆ ಶ್ರೇಯಾಂಕಗಳನ್ನು ನೀಡಲಾಗುತ್ತದೆ. ಮಹಿಳಾ ತಂಡದ ಫೈನಲ್ ಭಾನುವಾರ ನಿಗದಿಯಾಗಿದೆ.

ಕ್ವಾಲಿಫೈಯಿಂಗ್ ಸುತ್ತು ಭಾರತಕ್ಕೆ ಮಹತ್ವದ್ದು. ಈ ಹಿಂದೆ ಶ್ರೇಯಾಂಕದಲ್ಲಿ ಕೆಳಗಿನ ಸ್ಥಾನ ಪಡೆದ ಪರಿಣಾಮ ದಕ್ಷಿಣ ಕೊರಿಯಾದಂಥ ಹೆವಿವೇಟ್ ತಂಡಗಳು ಎದುರಾಗಿ ಸೋತು ಹೊರಬಿದ್ದ ನಿದರ್ಶನಗಳಿವೆ.

ಲಯಕ್ಕೆ ಸಂಬಂಧಿಸಿ ಈ ಬಾರಿ ಪುರುಷರ ತಂಡದ ಮೇಲೆ ಹೆಚ್ಚಿನ ಭರವಸೆ ಇಡಲಾಗಿದೆ. ಶಾಂಘೈನಲ್ಲಿ ಬಲಿಷ್ಠ ದಕ್ಷಿಣ ಕೊರಿಯಾವನ್ನು ಮೊದಲ ಬಾರಿ ಫೈನಲ್‌ನಲ್ಲಿ ಸೋಲಿಸಿ ಭಾರತ ತಂಡ ವಿಶ್ವಕಪ್ ಗೆದ್ದುಕೊಂಡಿತ್ತು.

ತರುಣ್ ದೀಪ್ ಜೊತೆ, ಟೋಕಿಯೊ ಒಲಿಂಪಿಯನ್ ಪ್ರವೀಣ್ ಜಾಧವ್, ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವ ಧೀರಜ್ ಬೊಮ್ಮದೇವರ ತಂಡದಲ್ಲಿದ್ದಾರೆ. ಧೀರಜ್ ಇಟಲಿಯಲ್ಲಿ ನಡೆದ ವಿಶ್ವ ಕಪ್ ಸ್ಟೇಜ್-3 ಕೂಟದಲ್ಲಿ 2021ರ ಒಲಿಂಪಿಕ್ಸ್ ಬೆಳ್ಳಿ ವಿಜೇತ ಸ್ಪರ್ಧಿಯನ್ನು ಮಣಿಸಿ ಕಂಚಿನ ಪದಕ ಗಳಿಸಿದ್ದರು. ಧೀರಜ್, ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಎಂಥಾ ಒತ್ತಡದ ಸನ್ನಿವೇಶದಲ್ಲೂ 'ಕೂಲ್' ಆಗಿ ಇರುವುದಕ್ಕೆ ಧೀರಜ್ ಹೆಸರು ಪಡೆದಿದ್ದಾರೆ.

ಮಹಿಳಾ ವಿಭಾಗದಲ್ಲಿ ದೀಪಿಕಾ ಕಳೆದ ಬಾರಿ ದಕ್ಷಿಣ ಕೊರಿಯಾ ಸ್ಪರ್ಧಿ ಆ್ಯನ್ ಸನ್‌ಗೆ ಸೋತಿದ್ದರು. ಈ ಬಾರಿ ಆ್ಯನ್ ಸ್ಪರ್ಧಿಸುತ್ತಿಲ್ಲ. ಆದರೆ ಅವರ ಬದಲು ತಂಡದಲ್ಲಿರುವ ಲಿಮ್ ಸಿ ಹಿಯೊನ್ ಎರಡು ಬಾರಿ ದೀಪಿಕಾ ಅವರನ್ನು ಸೋಲಿಸಿದ್ದಾರೆ. 'ಏಕಾಗ್ರತೆ ಕಾಪಾಡಿಕೊಂಡಲ್ಲಿ ದೀಪಿಕಾ ಅವರನ್ನು ಸೋಲಿಸುವುದು ಕಷ್ಟ' ಎಂಬುದು ತಂಡದ ಹೈ ಪರ್ಫಾಮೆನ್ಸ್ ನಿರ್ದೇಶಕ ಸಂಜೀವ ಸಿಂಗ್ ಭಾವನೆ.

ಮಹಿಳಾ ವಿಭಾಗದ ಇತರ ಸ್ಪರ್ಧಿಗಳಾದ ಅಂಕಿತಾ ಭಕತ್ ಮತ್ತು ಭಜನ್ ಕೌರ್ ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಕಣಕ್ಕಿಳಿಯುತ್ತಿದ್ದಾರೆ.

2000ರ ಸಿಡ್ನಿ ಒಲಿಂಪಿಕ್ಸ್‌ಗೆ ಭಾರತ ಅರ್ಹತೆ ಪಡೆದಿರಲಿಲ್ಲ. ಉಳಿದಂತೆ ಭಾಗವಹಿಸಿದ ಸಂದರ್ಭಗಳಲ್ಲಿ ಎಂದೂ ಕ್ವಾರ್ಟರ್‌ಫೈನಲ್ ತಡೆ ದಾಟಿಲ್ಲ.

ತಂಡಕ್ಕೆ ಕೋಚ್ ಅಲಭ್ಯ!

ಆರ್ಚರಿ ತಂಡದ ವಿದೇಶಿ ಕೋಚ್ ಬೇಕ್ ವೂಂಗ್ ಕಿ ಅವರು ಪ್ಯಾರಿಸ್ ಕ್ರೀಡೆಗಳಿಗೆ 'ಮಾನ್ಯತಾ ಪತ್ರ' ಸಿಗದೇ ಭಾರತಕ್ಕೆ ಮರಳಿದ್ದಾರೆ. ಇದರಿಂದ ಮುಖ್ಯಕೋಚ್ ಇಲ್ಲದೇ ತಂಡ ಭಾಗವಹಿಸಬೇಕಾಗಿದೆ.


ವಾರ್ಷಿಕ ₹1ಕೋಟಿ ಮೊತ್ತಕ್ಕೆ ಗುತ್ತಿಗೆ ಮೇಲೆ ಬೇಕ್ ವೂಂಗ್ ಅವರ ಸೇವೆ ಪಡೆಯಲಾಗಿತ್ತು. ಅವರು ಫ್ರಾನ್ಸ್‌ನ ಜೂಕ್‌ನಲ್ಲಿ ನಡೆದ ಸಿದ್ಧತಾ ಶಿಬಿರದಲ್ಲಿ ಭಾಗವಹಿಸಿದ್ದರು. ಆದರೆ ಭಾರತ ಆರ್ಚರಿ ಸಂಸ್ಥೆ (ಎಎಐ) ಅವರಿಗೆ ಮಾನ್ಯತೆ ದೊರಕಿಸಿ ಕೊಡುವಲ್ಲಿ ವಿಫಲವಾಯಿತು. ಇದಕ್ಕೆ ಅದು ಐಒಎಯನ್ನು ದೂರಿತ್ತು.



ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಬಾರಿ ಸ್ಪರ್ಧಿಸುತ್ತಿರುವ ಭಾರತದ ಆರ್ಚರಿಪಟು ದೀಪಿಕಾ ಕುಮಾರಿ –ಪಿಟಿಐ ಚಿತ್ರ



ಐಒಸಿ ಸದಸ್ಯೆಯಾಗಿ ನೀತಾ ಅಂಬಾನಿ ಮರು ಆಯ್ಕೆ



ಪ್ಯಾರಿಸ್ (ಪಿಟಿಐ): ರಿಲಯನ್ಸ್ ಫೌಂಡೇಷನ್ ಅಧ್ಯಕ್ಷೆ ನೀತಾ ಅಂಬಾನಿ ಅವರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಮುನ್ನ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಸದಸ್ಯೆಯಾಗಿ ಬುಧವಾರ ಅವಿರೋಧವಾಗಿ ಮರು ಆಯ್ಕೆಯಾಗಿದ್ದಾರೆ.

ಇಲ್ಲಿ ನಡೆದ 142ನೇ ಐಒಸಿ ಅಧಿವೇಶನದಲ್ಲಿ ನೀತಾ ಅವರು ಶೇ 100ರಷ್ಟು ಮತಗಳನ್ನು ಪಡೆದು ಸರ್ವಾನುಮತದಿಂದ ಆಯ್ಕೆಯಾದರು.

'ಐಒಸಿ ಸದಸ್ಯೆಯಾಗಿ ಮತ್ತೆ ಆಯ್ಕೆ ಮಾಡಿರುವುದು ನನಗೆ ಸಿಕ್ಕ ದೊಡ್ಡ ಗೌರವವಾಗಿದೆ. ನನ್ನ ಮೇಲೆ ಇಟ್ಟ ನಂಬಿಕೆ ಮತ್ತು ವಿಶ್ವಾಸಕ್ಕಾಗಿ ಐಒಸಿ ಅಧ್ಯಕ್ಷರಿಗೆ (ಥಾಮಸ್) ಮತ್ತು ಎಲ್ಲ ಸಹೋದ್ಯೋಗಿಗಳಿಗೆ ಕೃತಜ್ಞತೆಗಳು. ನನ್ನ ಮರು ಆಯ್ಕೆಯು ಜಾಗತಿಕ ಕ್ರೀಡಾ ಕ್ಷೇತ್ರದಲ್ಲಿ ಭಾರತದ ಪ್ರಭಾವವನ್ನು ತೋರಿಸುತ್ತದೆ. ಈ ಸಂತೋಷ ಮತ್ತು ಹೆಮ್ಮೆಯ ಕ್ಷಣವನ್ನು ಪ್ರತಿ ಭಾರತೀಯರೊಂದಿಗೆ ಹಂಚಿಕೊಳ್ಳುವುದಕ್ಕೆ ಬಯಸುತ್ತೇನೆ. ಭಾರತವೂ ಒಳಗೊಂಡಂತೆ ವಿಶ್ವದಾದ್ಯಂತ ಒಲಿಂಪಿಕ್ ಸಂಭ್ರಮವನ್ನು ಹೆಚ್ಚಿಸಲು ಪ್ರಯತ್ನಿಸುತ್ತೇನೆ' ಎಂದು ನೀತಾ ಅಂಬಾನಿ ಪ್ರತಿಕ್ರಿಯಿಸಿದ್ದಾರೆ.



ತಾಲೀಮು

ಪ್ಯಾರಿಸ್‌ನ ಐಫೆಲ್ ಟವರ್ ಕ್ರೀಡಾಂಗಣದಲ್ಲಿ ಬುಧವಾರ ನಾರ್ವೆಯ ಆಟಗಾರರಾದ ಕ್ರಿಶ್ಚಿಯನ್ ಸೊರಮ್ (ಎಡ), ಆಂಡರ್ಸ್ ಮೋಲ್ (ಎಡದಿಂದ ಎರಡನೇಯವರು) ಮತ್ತು ಆಸ್ಟ್ರೇಲಿಯಾದ ಜಚೆರಿ ಶುಬರ್ಟ್ (ಬಲ), ಥಾಮಸ್ ಹೊಡ್ಜಸ್ (ಬಲದಿಂದ ಎರಡನೇಯವರು) ಬೀಚ್ ವಾಲಿಬಾಲ್ ಅಭ್ಯಾಸ ನಡೆಸಿದರು –ಎಎಫ್‌ಪಿ ಚಿತ್ರ

ಫುಟ್‌ಬಾಲ್: ಮೊರಾಕೊ ವಿರುದ್ಧ ಪಂದ್ಯ 'ಡ್ರಾ'

ಮೆಡಿನಾ ಗೋಲು; ಅರ್ಜೆಂಟೀನಾ ಪಾರು

ಪ್ಯಾರಿಸ್ (ರಾಯಿಟರ್ಸ್): ಕ್ರಿಸ್ಟಿಯನ್ ಮೆಡಿನಾ ಗಳಿಸಿದ ಕೊನೆಯ ಕ್ಷಣದ ಗೋಲಿನಿಂದ ಅರ್ಜೆಂಟೀನಾ ತಂಡ, ಸಂತ್ ಇಟಿಯನ್‌ನಲ್ಲಿ ನಡೆದ ಒಲಿಂಪಿಕ್ಸ್ ಫುಟ್‌ಬಾಲ್ 'ಬಿ' ಗುಂಪಿನ ಪಂದ್ಯದಲ್ಲಿ ಬುಧವಾರ ಮೊರಾಕೊ ಎದುರು 2–2 ಗೋಲುಗಳಿಂದ 'ಡ್ರಾ' ಮಾಡಿಕೊಳ್ಳುವಲ್ಲಿ ಯಶಸ್ವಿ ಆಯಿತು.

ಕೊಪಾ ಅಮೆರಿಕ ಪ್ರಶಸ್ತಿ ಗೆದ್ದ ತಂಡದಲ್ಲಿದ್ದ ಜೂಲಿಯನ್ ಅಲ್ವಾರೆಝ್, ನಿಕೊಲಸ್ ಒಟಮಂಡಿ ಮತ್ತು ಜಿರೊನಿಮೊ ರುಲಿ ಈ ಪಂದ್ಯದಲ್ಲಿ ಆಡಿದ್ದರೂ ಹೇಳಿಕೊಳ್ಳುವಂಥ ಆಟ ಆ ತಂಡದಿಂದ ಬರಲಿಲ್ಲ.

ಸೌಫಿಯಾನ್ ರಹಿಮಿ ಅವರು ಮೊದಲಾರ್ಧದ ಮುಗಿಯಲು ಕೆಲವೇ ಕ್ಷಣಗಳಿರುಂತೆ ಮೊರಾಕೊ ತಂಡಕ್ಕೆ ಮುನ್ನಡೆ ಒದಗಿಸಿದರು. 49ನೇ ನಿಮಿಷ ರಹಿಮಿ 'ಪೆನಾಲ್ಟಿ' ಮೂಲಕ ಎರಡನೇ ಗೋಲು ಗಳಿಸಿದರು. 68ನೇ ನಿಮಿಷ ಅರ್ಜೆಂಟೀನಾ ಗಿಲಿಯಾನೊ ಸಿಮಿಯೊನ್ ಮೂಲಕ ಅಂತರ ಕಡಿಮೆ ಮಾಡಿಕೊಂಡಿತು. ಸ್ಟಾಪೇಜ್ ಅವಧಿಯಲ್ಲಿ ಮೆಡಿನಾ ಗೋಲು ಹೊಡೆದು ಅರ್ಜೆಂಟೀನಾ ತಂಡವನ್ನು ಸೋಲಿನಿಂದ ಕಾಪಾಡಿದರು.

ಸ್ಪೇನ್‌ಗೆ ಜಯ: ಸ್ಪೇನ್ 'ಸಿ' ಗುಂಪಿನ ಪಂದ್ಯದಲ್ಲಿ ಆರಂಭದಲ್ಲಿ ಪರದಾಡಿದರೂ 2–1 ಗೋಲುಗಳಿಂದ ಉಜ್ಬೇಕಿಸ್ತಾನ ತಂಡವನ್ನು ಸೋಲಿಸುವಲ್ಲಿ ಯಶಸ್ವಿ ಆಯಿತು.

ಮಾರ್ಕ್ ಪುಬಿಲ್ ಅವರು ಸ್ಪೇನ್ ತಂಡಕ್ಕೆ ಮುನ್ನಡೆ ಒದಗಿಸಿದರು. ವಿರಾಮಕ್ಕೆ ಕೆಲವೇ ಕ್ಷಣ ಮೊದಲು ಎಲ್ಡೊರ್ ಶೊಮುರೊಡೊವ್ 'ಪೆನಾಲ್ಟಿ' ಮೂಲಕ ಗಳಿಸಿದ ಗೋಲಿನಿಂದ ಉಜ್ಬೇಕಿಸ್ತಾನ ಸಮ ಮಾಡಿಕೊಂಡಿತು. ಸ್ಪೇನ್ ತಂಡಕ್ಕೆ ನಂತರ 'ಪೆನಾಲ್ಟಿ' ದೊರಕಿದರೂ ಯಶಸ್ಸು ದೊರಕಲಿಲ್ಲ. ಆ ಅವಕಾಶದಲ್ಲಿ ಸೆರ್ಗಿಯೊ ಗೊಮೆಝ್ ಯತ್ನವನ್ನು ಗೋಲ್ ಕೀಪರ್ ಅಬ್ದುವೊಹಿದ್ ನೆಮಟೊವ್ ತಡೆದರು. ಆದರೆ 62ನೇ ನಿಮಿಷ ಗೊಮೆಜ್ ಅವರೇ ನಿರ್ಣಾಯಕ ಗೋಲು ಗಳಿಸಿ ತಂಡಕ್ಕೆ ಮೂರು ಪಾಯಿಂಟ್ ಗಳಿಸಲು ನೆರವಾದರು.



ಮೊರಾಕೊ ತಂಡದ ಇಲಿಯಾಸ್ ಅಖೋಮಾಚ್ ಮತ್ತು ಅರ್ಜೆಂಟೀನಾ ತಂಡದ ಕ್ರಿಸ್ಟಿಯನ್ ಮೆಡಿನಾ (ಎಡ) ಮಧ್ಯೆ ಚೆಂಡಿಗಾಗಿ ಪೈಪೋಟಿ –ಎಎಫ್‌ಪಿ ಚಿತ್ರ

ಡ್ಯಾನ್ಸರ್‌ಗಳ ಪಟ್ಟಿಗೆ ಮಣಿದ ಆಯೋಜಕರು

ಪ್ಯಾರಿಸ್ (ಎಎಫ್‌ಪಿ): ಶುಕ್ರವಾರ ಒಲಿಂಪಿಕ್ ಕ್ರೀಡೆಗಳ ಉದ್ಘಾಟನಾ ಸಮಾರಂಭಕ್ಕೆ ಮುಷ್ಕರದ ಬೆದರಿಕೆಯೊಡ್ಡಿದ್ದ ನೂರಾರು ನೃತ್ಯ ಕಲಾವಿದರು ಈಗ ಪ್ರತಿಭಟನೆ ನಿರ್ಧಾರ ಕೈಬಿಟ್ಟಿದ್ದಾರೆ. ಅವರಿಗೆ ಹೆಚ್ಚಿನ ಸಂಭಾವನೆ ನೀಡುವುದಾಗಿ ಆಯೋಜಕರು ಒಪ್ಪಿಕೊಂಡಿದ್ದಾರೆ ಎಂದು ಅವರ ಸಂಘಟನೆ ತಿಳಿಸಿದೆ.

'ಪ್ಯಾರಿಸ್ 2024' ಸಂಘಟಕರ ಜೊತೆ ಬುಧವಾರ ಅಂತಿಮ ಸುತ್ತಿನ ಮಾತುಕತೆ ನಡೆಯಿತು. ತಮಗೆ ನೀಡುವ ಸಂಭಾವನೆ ಹೆಚ್ಚಿಸಬೇಕೆಂದು ಕಲಾವಿದರು ಪಟ್ಟುಹಿಡಿದಿದ್ದರು ಎಂದು ಎಸ್‌ಎಫ್‌ಎ–ಸಿಜಿಟಿ ಸಂಘಟನೆ ತಿಳಿಸಿದೆ.

ಉದ್ಘಾಟನೆ ವೇಳೆ 3000 ಮಂದಿ ನೃತ್ಯಕಲಾವಿದರು ಪ್ರದರ್ಶನ ನೀಡಲಿದ್ದಾರೆ. ಇವರಲ್ಲಿ ಶೇ 10ರಷ್ಟು ಮಂದಿ ಈ ಸಂಘಟನೆಯಲ್ಲಿದ್ದರು. ವೇತನ ತಾರತಮ್ಯ ಪ್ರತಿಭಟಿಸಿ ಮುಷ್ಕರ ನಡೆಸುವುದಾಗಿ ಅರು ಹೋದ ವಾರ ನೋಟಿಸ್ ನೀಡಿದ್ದರು.

ಸೀನ್ ನದಿಯಲ್ಲಿ ದೋಣಿಗಳ ಮೇಲೆ ನಡೆದ ರಿಹರ್ಸಲ್ (ತಾಲೀಮಿನ) ವೇಳೆಯೂ ಪ್ರತಿಭಟನೆ ದಾಖಲಿಸಿದ್ದರು. ಈ ಕಲಾವಿದರು ಒಪ್ಪಂದದಂತೆ ಇದೀಗ ₹12,500 ದಿಂದ ₹21,700 ಪಡೆಯಲಿದ್ದಾರೆ. ಪೊಲೀಸರು ಮತ್ತು ಮುನ್ಸಿಪಲ್ ಕಾರ್ಮಿಕರಿಗೆ ಒಂದು ಬಾರಿಯ ಮೊತ್ತವಾಗಿ ತಲಾ ₹1,73,000 ನೀಡಲು ಒಪ್ಪಿಕೊಳ್ಳಲಾಗಿದೆ.

ಒಲಿಂಪಿಕ್ಸ್ ಇತಿಹಾಸದಲ್ಲೇ ಮೊದಲ ಬಾರಿ ಉದ್ಘಾಟನಾ ಸಮಾರಂಭ ಪ್ರಧಾನ ಕ್ರೀಡಾಂಗಣದಿಂದ ಹೊರಗೆ ನಡೆಯು ತ್ತಿದೆ.

ವಾಟರ್‌ಪೋಲೊ: ಐವರಿಗೆ ಕೋವಿಡ್

ಪ್ಯಾರಿಸ್ (ಎಪಿ): ಆಸ್ಟ್ರೇಲಿಯಾ ಮಹಿಳೆಯರ ವಾಟರ್ ಪೋಲೊ ತಂಡದ ಐವರಿಗೆ ಕೋವಿಡ್ –19 ಇರುವುದು ಪತ್ತೆಯಾಗಿದೆ.

'ಇನ್ನಿತರ ಶ್ವಾಸಕೋಶ ಸಂಬಂಧಿ ಕಾಯಿಲೆಗಳಷ್ಟೇ ಗಂಭೀರವಾಗಿ ಕೋವಿಡ್ ಅನ್ನೂ ಪರಿಗಣಿಸಲಾಗುತ್ತಿದೆ. ಎಲ್ಲ ಮಾರ್ಗಸೂಚಿ ಮತ್ತು ಚಿಕಿತ್ಸಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಕಾಯಿಲೆಯು ಹೆಚ್ಚು ತೀವ್ರವಾಗದಂತೆ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗಿದೆ' ಎಂದು ಆಸ್ಟ್ರೇಲಿಯಾ ತಂಡದ ಚೆಫ್ ಡಿ ಮಿಷನ್ ಅನಾ ಮೇಯರ್ಸ್ ಹೇಳಿದ್ದಾರೆ.

ಮಾರ್ಗಸೂಚಿಯಲ್ಲಿ ಮಾಸ್ಕ್ ಧರಿಸುವುದು ಮತ್ತು ಐಸೋಲೇಷನ್ ಮಾಡುವ ಕ್ರಮಗಳಿವೆ. ಕೋವಿಡ್ ಪೀಡಿತ ಕ್ರೀಡಾಪಟುಗಳನ್ನು ತರಬೇತಿಯಿಂದ ಹೊರಗಿರಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಒಲಿಂಪಿಕ್ಸ್: ಜಿಲ್ ಬೈಡನ್‌ಗೆ ಆಹ್ವಾನ, ಪುಟಿನ್‌ಗೆ ಇಲ್ಲ

ಪ್ಯಾರಿಸ್ (ಎಎಫ್‌ಪಿ): ಇನ್ನೆರಡು ದಿನಗಳಲ್ಲಿ ಆರಂಭವಾಗುವ ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭಕ್ಕೆ ವಿವಿಧ ದೇಶಗಳ ನೂರಾರು ಸರ್ಕಾರಿ ಮುಖ್ಯಸ್ಥರನ್ನು, ರಾಜಮನೆತನದ ಪ್ರತಿನಿಧಿಗಳನ್ನು ಸ್ವಾಗತಿಸಲು ಫ್ರಾನ್ಸ್ ಸಿದ್ಧತೆ ಮಾಡಿಕೊಂಡಿದೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಪತ್ನಿ ಜಿಲ್ ಬೈಡನ್ ಇವರಲ್ಲಿ ಒಳಗೊಂಡಿದ್ದಾರೆ. ಆದರೆ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಆಮಂತ್ರಣ ನೀಡಿಲ್ಲ. ರಷ್ಯಾದ ಅಧಿಕೃತ ಪ್ರತಿನಿಧಿ ಎಂದು ಯಾರೂ ಹಾಜರಾಗುತ್ತಿಲ್ಲ. ಉಕ್ರೇನ್ ವಿರುದ್ಧ ಎರಡು ವರ್ಷ ಹಿಂದೆ ರಷ್ಯಾ ಯುದ್ಧ ಸಾರಿದ ನಂತರ ಪಾಶ್ಚಾತ್ಯ ದೇಶಗಳ ಜೊತೆ ಅದರ ಸಂಬಂಧ ಹಳಸಿದೆ.

ಇಸ್ರೇಲ್ ನಿಯೋಗಕ್ಕೆ ಬಿಗಿ ಭದ್ರತೆ ಒದಗಿಸಲಾಗಿದೆ. ಇಸ್ರೇಲ್, ಗಾಜಾ ಪಟ್ಟಿಯಲ್ಲಿ ಬಾಂಬ್ ದಾಳಿ ನಡೆಸಿತ್ತು. ಇದರ ವಿರುದ್ಧ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಭಾಗವಹಿಸುವರೇ ಎಂಬುದು ಖಚಿತವಾಗಿಲ್ಲ.

ಟೂರ್ನಿಯಿಂದ ಹಿಂದೆ ಸರಿದ ಸಿನ್ನರ್

ಮಿಲಾನ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಟೆನಿಸ್ ಆಟಗಾರ ಯಾನಿಕ್ ಸಿನ್ನರ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಿಂದ ಹಿಂದಕ್ಕೆ ಸರಿದಿದ್ದಾರೆ. ಟಾನ್ಸಿಲೈಟಿಸ್ (ಗಂಟಲುಬೇನೆ) ಇರುವುದು ಪರೀಕ್ಷೆಯಲ್ಲಿ ಗೊತ್ತಾದ ಕಾರಣ ಅವರು ಈ ನಿರ್ಧಾರಕ್ಕೆ ಬಂದಿದ್ದಾರೆ.

'ಒಲಿಂಪಿಕ್ಸ್‌ನಿಂದ ಆಡುವ ಆಸೆಯಿತ್ತು. ಆದರೆ ಮಂಗಳವಾರ ವೈದ್ಯರ ಸಲಹೆ ಪಡೆದೆ. ಒಂದು ದಿನ ಕಾದುನೋಡಿದೆ. ಆದರೆ ಗಂಟಲುಬೇನೆ ಜಾಸ್ತಿಯಾಯಿತು' ಎಂದು ಇಟಲಿಯ ಆಟಗಾರ ಎಕ್ಸ್‌ನಲ್ಲಿ ಬರೆದಿದ್ದಾರೆ.

ಸಂಕಷ್ಟಗಳನ್ನು ದಾಟಿ ಪದಕ ಗೆದ್ದಿದ್ದ ಸುಶೀಲ್, ಯೋಗೇಶ್ವರ್, ಸಾಕ್ಷಿ ಮಲಿಕ್

ಒಲಿಂಪಿಕ್ಸ್‌ನಲ್ಲಿ ಭಾರತದ ವಿವಾದಗಳ ನೆರಳು

ನವದೆಹಲಿ (ಪಿಟಿಐ): ಕಾಕಾ ಪವಾರ್ ಮತ್ತು ಪಪ್ಪು ಯಾದವ್ ಅವರಿಬ್ಬರೂ 1996ರ ಒಲಿಂಪಿಕ್ ಕೂಟದವರೆಗೂ ಜನರಿಗೆ ಹೆಚ್ಚು ಪರಿಚಿತರಾಗಿರಲಿಲ್ಲ. ಅವರಿಬ್ಬರೂ ಕುಸ್ತಿಪಟುಗಳು ಮತ್ತು ಭಾರತ ತಂಡದಲ್ಲಿ ಪುರುಷರ 48 ಕೆ.ಜಿ. ವಿಭಾಗದಲ್ಲಿ ಸ್ಥಾನ ಪಡೆಯಲು 'ಕುಸ್ತಿ' ನಡೆಸಿದ್ದರೆಂಬುದು ಈಗ ಬಹಳಷ್ಟು ಮಂದಿಗೆ ನೆನಪಿರಲಿಕ್ಕಿಲ್ಲ.

ಒಲಿಂಪಿಕ್ಸ್‌ಗೆ ತೆರಳುವ ಭಾರತ ಕುಸ್ತಿ ತಂಡದಲ್ಲಿ ಸ್ಥಾನ ಪಡೆಯಲು ದೆಹಲಿಯ ಇಂದಿರಾಗಾಂಧಿ ಕ್ರೀಡಾಂಗಣದಲ್ಲಿ ನಡೆದಿದ್ದ ಅವರಿಬ್ಬರ ಟ್ರಯಲ್ಸ್ ವಿವಾದಕ್ಕೆ ತಿರುಗಿತ್ತು. ವಿವಾದಾತ್ಮಕ ತೀರ್ಪಿನಲ್ಲಿ ಯಾದವ್ ಜಯಿಸಿದ್ದರು. ಆದರೆ ಅಟ್ಲಾಂಟಾದಲ್ಲಿ ಅವರು ದೇಹತೂಕದ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಹೊರಬಿದ್ದಿದ್ದರು.

ಭಾರತದ ಕ್ರೀಡಾಕ್ಷೇತ್ರದಲ್ಲಿ, ಅದರಲ್ಲೂ ಕುಸ್ತಿಯಲ್ಲಿ ಇಂತಹ ವಿವಾದಗಳು ಸಾಕಷ್ಟಿವೆ. ಈ ಹಿಂದಿನ ಒಲಿಂಪಿಕ್ಸ್‌ನಲ್ಲಿ ಭಾರತದ ಕುಸ್ತಿಪಟುಗಳು ಮಾಡಿದ ಸಾಧನೆಯ ಪರಂಪರೆಯನ್ನು ಮುಂದುವರಿಸುವ ಗುರಿಯೊಂದಿಗೆ ಆರು ಪೈಲ್ವಾನರ ತಂಡವು ಪ್ಯಾರಿಸ್‌ಗೆ ತೆರಳಿದೆ.

ಸುಶೀಲ್ ಕುಮಾರ್, ಯೋಗೇಶ್ವರ್ ದತ್ ಹಾಗೂ ಸಾಕ್ಷಿ ಮಲಿಕ್ ಸೇರಿದಂತೆ ಭಾರತಕ್ಕೆ ಪದಕ ಗೆದ್ದುಕೊಟ್ಟ ಹಲವರು ಹಲವು ವಿವಾದಗಳು ಮತ್ತು ಸಂಕಷ್ಟಗಳನ್ನು ದಾಟಿ ಬಂದಿದ್ದರು. ಪವಾರ್ ಮತ್ತು ಯಾದವ್ ಅವರಿಬ್ಬರೂ ಈಗ 50 ವರ್ಷ ವಯಸ್ಸು ದಾಟಿರಬಹುದು. ಆದರೆ ಅವರು ಕಣದಲ್ಲಿದ್ದಾಗ ಇದ್ದ ಸ್ಥಿತಿ ಇಂದಿಗೂ ಬದಲಾಗಿಲ್ಲ. ರಾಜಕೀಯ ಕ್ಷೇತ್ರದ ಪ್ರಭಾವಿಗಳ ಕೈವಾಡ ನಡೆಯುತ್ತಲೇ ಇದೆ.

2016ರ ರಿಯೊ ಒಲಿಂಪಿಕ್ಸ್ ಸಂದರ್ಭದಲ್ಲಿಯೂ ಇಂತಹದೇ ಪ್ರಕರಣ ನಡೆದಿತ್ತು. ನರಸಿಂಗ್ ಯಾದವ್ 74 ಕೆ.ಜಿ. ಫ್ರೀಸ್ಟೈಲ್ ವಿಭಾಗದಲ್ಲಿ ಒಲಿಂಪಿಕ್ಸ್ ಕೋಟಾ ಗೆದ್ದರು. ಆದರೆ ಆಗ ಎರಡು ಒಲಿಂಪಿಕ್ಸ್ ಪದಕವಿಜೇತ ಸುಶೀಲ್ ಕುಮಾರ್ ಅವರು ಸ್ಪರ್ಧಿಸುತ್ತಿದ್ದ 66 ಕೆ.ಜಿ ವಿಭಾಗವನ್ನು ಅಂತರರಾಷ್ಟ್ರೀಯ ಕುಸ್ತಿ ಫೆಡರೇಷನ್ ರದ್ದುಗೊಳಿಸಿತ್ತು. ಆದ್ದರಿಂದ ಸುಶೀಲ್ ಅವರಿಗೂ 74 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲು ಹೇಳಲಾಯಿತು. ಆದರೆ ರಿಯೊಗೆ ತೆರಳಲು ಒಬ್ಬರಿಗೆ ಮಾತ್ರ ಅವಕಾಶವಿತ್ತು.


ಒಲಿಂಪಿಕ್ಸ್ ಪದಕ 'ಹ್ಯಾಟ್ರಿಕ್' ಸಾಧನೆಯ ಗುರಿ ಇಟ್ಟುಕೊಂಡಿದ್ದ ಸುಶೀಲ್, ತಮ್ಮ ಹಾಗೂ ನರಸಿಂಗ್ ಅವರ ಮಧ್ಯೆ ಟ್ರಯಲ್ಸ್‌ಗೆ ಮನವಿ ಮಾಡಿದರು. ಆದರೆ ದೆಹಲಿ ಹೈಕೋರ್ಟ್ ಸುಶೀಲ್ ಅವರ ಮನವಿಯನ್ನು ರದ್ದುಮಾಡಿತು. ನರಸಿಂಗ್ ಆಯ್ಕೆಯನ್ನು ಎತ್ತಿಹಿಡಿಯಿತು.

ಆದರೆ ಇದಾಗಿ ಮೂರು ವಾರಗಳ ನಂತರ ನರಸಿಂಗ್ ಅವರು ನಿಷೇಧಿತ ಉದ್ದೀಪನ ಮದ್ದು ಸೇವನೆ ಮಾಡಿರುವ ಆರೋಪದಲ್ಲಿ ಸಿಕ್ಕಿಬಿದ್ದರು. ರಾಷ್ಟ್ರೀಯ ಮದ್ದು ತಡೆ ಘಟಕ (ನಾಡಾ) ಪರೀಕ್ಷೆ ನಡೆಸಿತ್ತು. ತಮ್ಮ ವಿರುದ್ಧ ಪಿತೂರಿ ಮಾಡಲಾಗಿದೆ. ತಾವು ನಿರಪರಾಧಿ ಎಂದು ನರಸಿಂಗ್ ಸ್ಪಷ್ಟನೆ ನೀಡಿದರು. ನಾಡಾ ಕ್ಲೀನ್ ಚಿಟ್ ನೀಡಿತ್ತು. ಆದರೆ ವಿಶ್ವ ಕ್ರೀಡಾ ವ್ಯಾಜ್ಯಗಳ ನ್ಯಾಯಪೀಠವು ವಾಡಾದ ಮೇಲ್ಮನವಿಯನ್ನು ಎತ್ತಿಹಿಡಿದು ನಾಡಾ ನೀಡಿದ್ದ ಕ್ಲೀನ್‌ಚಿಟ್ ರದ್ದುಗೊಳಿಸಿತು. ನರಸಿಂಗ್ ಒಲಿಂಪಿಕ್ಸ್ ಕನಸು ಭಗ್ನವಾಯಿತು.


ಭಾರತದ ಕುಸ್ತಿ ಕ್ಷೇತ್ರವು ಹೋದ ವರ್ಷ ಪೂರ್ತಿ ಸುದ್ದಿಯಲ್ಲಿತ್ತು. ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷರಾಗಿದ್ದ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟು ಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿದ್ದ ಕುಸ್ತಿಪಟುಗಳು ಜಂತರ್ ಮಂತರ್‌ನಲ್ಲಿ ಧರಣಿ ಕುಳಿತಿದ್ದರು. ಬ್ರಿಜ್ ಭೂಷಣ್ ಅವರು ಬಿಜೆಪಿ ಸಂಸದರೂ ಆಗಿದ್ದರಿಂದ ರಾಜಕೀಯ ತಿರುವು ಕೂಡ ಪಡೆಯಿತು. ಡಬ್ಲ್ಯುಎಫ್‌ಐ ಆಡಳಿತ ಸಮಿತಿಯನ್ನು ವಜಾ ಮಾಡಿ ಅಡ್‌ಹಾಕ್ ಸಮಿತಿ ನೇಮಿಸಲಾಯಿತು. ವಿಶ್ವ ಕುಸ್ತಿ ಫೆಡರೇಷನ್ ಕೆಂಗಣ್ಣಿಗೂ ಡಬ್ಲ್ಯುಎಫ್‌ಐ ತುತ್ತಾಯಿತು.



ಪ್ರತಿಭಟನೆಯಲ್ಲಿದ್ದ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ವಿನೇಶಾ ಫೋಗಾಟ್ ಮತ್ತು ಸಾಕ್ಷಿ ಮಲಿಕ್



ನರಸಿಂಗ್ ಯಾದವ್



ಮನು ಭಾಕರ್

ವೇಟ್‌ಲಿಫ್ಟಿಂಗ್‌ನಲ್ಲಿ ಮದ್ದು-ಸದ್ದು

ಒಲಿಂಪಿಕ್ಸ್ ವೇಟ್‌ಲಿಫ್ಟಿಂಗ್‌ನಲ್ಲಿ ಭಾರತವು ಇದುವರೆಗೆ ಎರಡು ಪದಕಗಳ ಸಾಧನೆ ಮಾಡಿದೆ. ಕರ್ಣಂ ಮಲ್ಲೇಶ್ವರಿ (2000; ಸಿಡ್ನಿ) ಮತ್ತು ಮೀರಾಬಾಯಿ ಚಾನು (2020; ಟೋಕಿಯೊ) ಅವರು ಕ್ರಮವಾಗಿ ಕಂಚು ಮತ್ತು ಬೆಳ್ಳಿ ಪದಕ ಜಯಿಸಿದ್ದಾರೆ.

ಆದರೂ ಈ ಕ್ಷೇತ್ರಕ್ಕೂ ವಿವಾದದ ನಂಟು ಬಿಟ್ಟಿಲ್ಲ. 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಸನಾಮಾಚಾ ಚಾನು ಮತ್ತು ಪ್ರತಿಮಾ ಕುಮಾರಿ ಅವರು ಉದ್ದೀಪನ ಮದ್ದು ಸೇವನೆ ಮಾಡಿ ಸಿಕ್ಕಿಕೊಂಡಿದ್ದರು. 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಮೋನಿಕಾದೇವಿ ಅನಾಬೊಲಿಕ್ ಸ್ಟೆರಾಯ್ಡ್ ಸೇವನೆ ಮಾಡಿದ್ದ ಆರೋಪದಲ್ಲಿ ಅಮಾನತುಗೊಂಡರು. ಆದರೆ ಆ ಕೂಟದಲ್ಲಿ ಅಭಿನವ್ ಬಿಂದ್ರಾ ಅವರು ಶೂಟಿಂಗ್‌ನಲ್ಲಿ ಚಿನ್ನ ಗೆದ್ದು ದಾಖಲೆ ಬರೆದಿದ್ದರಿಂದ ಭಾರತದ ಗೌರವ ಉಳಿಯಿತು.

2021ರಲ್ಲಿ ನಡೆದಿದ್ದ ಟೋಕಿಯೊ ಒಲಿಂಪಿಕ್ಸ್‌ನ ಶೂಟಿಂಗ್‌ನಲ್ಲಿ ವಿವಾದ ತಲೆದೋರಿತ್ತು. ಕೋಚ್ ಜಸ್ಪಾಲ್ ರಾಣಾ ಅವರ ಬಗ್ಗೆ ಟೀಕೆಗಳು ಕೇಳಿಬಂದಿದ್ದವು. ಪಿಸ್ತೂಲ್ ಶೂಟರ್ ಮನು ಭಾಕರ್ ಅವರು ಸ್ಪರ್ಧೆಯಲ್ಲಿ ಬಳಸಬೇಕಿದ್ದ ಪಿಸ್ತೂಲ್ ಕೆಟ್ಟಿತ್ತು. ಈ ಪ್ರಕರಣ ಹೆಚ್ಚು ಸುದ್ದಿ ಮಾಡಿತ್ತು. ಈ ಬಾರಿ 21 ಶೂಟರ್‌ಗಳಿರುವ ತಂಡವು ಕಣದಲ್ಲಿದೆ. ಪದಕಗಳನ್ನು ಗೆದ್ದು ತರುವ ನಿರೀಕ್ಷೆ ಇದೆ.

ಷರತ್ತಿನ ಮೇಲೆ ಚಳಿಗಾಲದ ಒಲಿಂಪಿಕ್ಸ್ ಆತಿಥ್ಯ

ಪ್ಯಾರಿಸ್ (ಎಎಫ್‌ಪಿ): ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯು (ಐಒಸಿ) ಬುಧವಾರ 2030ರ ಚಳಿಗಾಲ ಒಲಿಂಪಿಕ್ ಕ್ರೀಡೆಗಳನ್ನು ಫ್ರೆಂಚ್ ಆಲ್ಪ್ಸ್‌ಗೆ ವಹಿಸಿದೆ. ಆದರೆ ಇದಕ್ಕಾಗಿ ಫ್ರಾನ್ಸ್ ಸರ್ಕಾರ ಹಣಕಾಸು ಬದ್ಧತೆಯನ್ನು ನೀಡಬೇಕೆಂದು ಷರತ್ತು ವಿಧಿಸಿದೆ.

ಚಳಿಗಾಲದ ಒಲಿಂಪಿಕ್ಸ್ ಆತಿಥ್ಯಕ್ಕೆ ಹಣಕಾಸಿನ 'ಗ್ಯಾರಂಟಿ' ನೀಡುವಂತೆ ತಾವು ಫ್ರಾನ್ಸ್‌ನ ಮುಂದಿನ ಪ್ರಧಾನಿಗೆ ಹೇಳುವುದಾಗಿ ಫ್ರಾನ್ಸ್ ಅಧ್ಯಕ್ಷ ಇಮಾನ್ಯುವೆಲ್ ಮ್ಯಾಕ್ರನ್ ಐಒಸಿ ಸದಸ್ಯರಿಗೆ ಬುಧವಾರ ಅಭಯ ನೀಡಿದರು. ಫ್ರಾನ್ಸ್ ಬಿಟ್ಟರೆ ಉಳಿದವರು 2030ರ ಚಳಿಗಾಲದ ಒಲಿಂಪಿಕ್ಸ್‌ಗೆ ಬಿಡ್ ಸಲ್ಲಿಸಿರಲಿಲ್ಲ.

ಅಮೆರಿಕಕ್ಕೆ ಆತಿಥ್ಯ: 2034ರ ಚಳಿಗಾಲದ ಒಲಿಂಪಿಕ್ಸ್ ಅನ್ನು ಸಾಲ್ಟ್‌ಲೇಕ್ ಸಿಟಿಗೆ (ಅಮೆರಿಕ) ಐಒಸಿ ವಹಿಸಿದೆ. ಆದರೆ ಅಮೆರಿಕವು ವಿಶ್ವ ಉದ್ದೀಪನ ಮದ್ದುಸೇವನೆ ತಡೆ ಘಟಕದ ಜೊತೆ ಅಂತಃಕಲಹವನ್ನು ಕೊನೆಗೊಳಿಸಬೇಕು. ಇಲ್ಲದಿದ್ದರೆ ಆತಿಥ್ಯವನ್ನು ಬೇರೆಯವರಿಗೆ ವಹಿಸುವುದಾಗಿಯೂ ಎಚ್ಚರಿಕೆ ನೀಡಿದೆ.

ಬ್ಯಾಸ್ಕೆಟ್‌ಬಾಲ್: ನೆಟ್ಟಕಲ್ಲಪ್ಪ ಕ್ಲಬ್ ತಂಡಕ್ಕೆ ಗೆಲುವು

ಬೆಂಗಳೂರು: ಧನುಷ್ (16) ಮತ್ತು ವೈಭವ್ (15) ಅವರ ಆಟದ ಬಲದಿಂದ ನೆಟ್ಟಕಲ್ಲಪ್ಪ ಬಿ.ಸಿ ತಂಡವು ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ರಾಜ್ಯ ಸಬ್ ಜೂನಿಯರ್ (13 ವರ್ಷದೊಳಗಿನವರ) ಚಾಂಪಿಯನ್‌ಷಿಪ್‌ನ ಬಾಲಕರ ಪಂದ್ಯದಲ್ಲಿ 53–7 ರಿಂದ ಸಿನ್ಸಿನಾಟಿಕ್ಸ್ ಬಿ.ಸಿ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಡ್ಮಿಂಟನ್ ಅಂಕಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮಧ್ಯಂತರದ ವೇಳೆ 27–3ರಿಂದ ಮುನ್ನಡೆ ಸಾಧಿಸಿದ್ದ ನೆಟ್ಟಕಲ್ಲಪ್ಪ ತಂಡವು ಉತ್ತರಾರ್ಧದಲ್ಲೂ ಪ್ರಾಬಲ್ಯ ಮುಂದುವರಿಸಿತು.

ಫಲಿತಾಂಶ: ಬಾಲಕರು: ವಿಮಾನಪುರ ಎಸ್.ಸಿ ತಂಡವು 51–10ರಿಂದ ಅಪ್ಪಯ್ಯ ಬಿ.ಸಿ ವಿರುದ್ಧ; ಭಾರತ್ ಎಸ್.ಯು ತಂಡವು 57–20ರಿಂದ ಬೆಂಗಳೂರು ಸ್ಪೋರ್ಟಿಂಗ್ ವಿರುದ್ಧ; ಬೆಂಗಳೂರು ವ್ಯಾನ್ಗಾರ್ಡ್ಸ್ ತಂಡವು 56–12ರಿಂದ ಪಟ್ಟಾಭಿರಾಮ್ ಎಸ್.ಸಿ ವಿರುದ್ಧ; ಧಾರವಾಡ ಜಿಲ್ಲಾ ಬಿ ತಂಡವು 40–16ರಿಂದ ಡಿಆರ್‌ಡಿಒ ವಿರುದ್ಧ; ಮೈಸೂರು ಜಿಲ್ಲಾ ಎ ತಂಡವು 66–42ರಿಂದ ಬೀಗಲ್ಸ್ ಬಿ.ಸಿ. ವಿರುದ್ಧ ಗೆಲುವು ಸಾಧಿಸಿತು.

ನೆಟ್ಟಕಲ್ಲಪ್ಪ ಬಿ.ಸಿ ತಂಡವು 53–7ರಿಂದ ಸಿನ್ಸಿನಾಟಿಕ್ಸ್ ಬಿ.ಸಿ ವಿರುದ್ಧ; ಜೆಎಸ್‌ಸಿ ತಂಡವು 44–26ರಿಂದ ವಿವೇಕ್ಸ್ ಎಸ್.ಸಿ ವಿರುದ್ಧ; ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡವು 64–10ರಿಂದ ಧಾರವಾಡ ಜಿಲ್ಲಾ ಎ ವಿರುದ್ಧ; ಎಸ್. ಬ್ಲೂ ತಂಡವು 62–20ರಿಂದ ದಾವಣಗೆರೆ ಬಿ.ಸಿ ವಿರುದ್ಧ; ಎಚ್‌ಬಿಆರ್ ಬಿ.ಸಿ ತಂಡವು 55–18ರಿಂದ ಹಾಸನ ಜಿಲ್ಲಾ ತಂಡದ ವಿರುದ್ಧ; ಯಲಹಂಕ ನ್ಯೂಟೌನ್ ತಂಡವು 42–23ರಿಂದ ಮೈಸೂರು ಜಿಲ್ಲಾ ಬಿ ತಂಡದ ವಿರುದ್ಧ ಜಯ ಸಾಧಿಸಿತು.

ಬಾಲಕಿಯರು: ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡವು 40–34ರಿಂದ ಹಲಸೂರು ಬಿ.ಸಿ. ಎದುರು; ಮೌಂಟ್ಸ್ ಕ್ಲಬ್ ತಂಡವು 55–19ರಿಂದ ಹೆಬ್ಬಾಳ ಬಿ.ಸಿ ಎದುರು; ಎಂಸಿಎಚ್‌ಎಸ್ ತಂಡವು 40–10ರಿಂದ ಓರಿಯನ್ಸ್ ಎಸ್.ಸಿ ಎದುರು; ನೆಟ್ಟಕಲ್ಲಪ್ಪ ಬಿ.ಸಿ. ತಂಡವು 28–4ರಿಂದ ಧಾರವಾಡ ಜಿಲ್ಲಾ ಬಿ ಎದುರು; ಬೆಂಗಳೂರು ಸ್ಪೋರ್ಟಿಂಗ್ ತಂಡವು 43–15ರಿಂದ ದೇವಾಂಗ ಯೂನಿಯನ್ ಎದುರು; ಬೆಂಗಳೂರು ವ್ಯಾನ್ಗಾರ್ಡ್ಸ್ ತಂಡವು 34–9ರಿಂದ ಯಲಹಂಕ ನ್ಯೂಟೌನ್ ಎದುರು; ರಾಜ್‌ಮಹಲ್ ಬಿ.ಸಿ ತಂಡವು 64–17ರಿಂದ ಸಿನ್ಸಿನಾಟಿಕ್ಸ್ ಬಿ.ಸಿ ಎದುರು ಗೆಲುವು ಸಾಧಿಸಿತು.

ಮಣಿಕಾಗೆ ಅನ್ನಾ ಮೊದಲ ಎದುರಾಳಿ

ಪ್ಯಾರಿಸ್ (ಪಿಟಿಐ): ಭಾರತದ ಟೇಬಲ್ ಟೆನಿಸ್ ಆಟಗಾರ್ತಿ ಮಣಿಕಾ ಬಾತ್ರಾ, ಒಲಿಂಪಿಕ್ಸ್‌ನಲ್ಲಿ ಮಹಿಳಾ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಶನಿವಾರ ಬ್ರಿಟನ್ ಅನ್ನಾ ಹರ್ಸೆ ಅವರನ್ನು ಎದುರಿಸಲಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಶರತ್ ಕಮಲ್, ಸ್ಲೊವೇನಿಯಾದ ಡೆನಿ ಕೊಜುಲ್ ವಿರುದ್ಧ ಅಭಿಯಾನ ಆರಂಭಿಸುವರು.

ಸಿಂಗಲ್ಸ್ ಸ್ಪರ್ಧೆಗಳ ಡ್ರಾ ಬುಧವಾರ ಪ್ರಕಟಿಸಲಾಯಿತು. ಹರ್ಮೀತ್ ದೇಸಾಯಿ, ಅಬೋ ಯಮನ್ ವಿರುದ್ಧ; ಶ್ರೀಜಾ ಅಕುಲಾ, ಸ್ವೀಡನ್‌ನ ಕ್ರಿಸ್ಟಿನಾ ಕಾಲ್‌ಬರ್ಗ್ ವಿರುದ್ಧ ಸೆಣಸುವರು.